ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 32

ಆಗಸ್ಟ್ 05, 2012

ಪುಟ 16


ರೂ. 5/-



ಚುನಾವಣೆಯತ್ತ ತಿರುಗಿದ ಬರದ ರಾಜಕಾರಣ



ಬರಿದಾದ ಜಲಾಶಯಗಳು






ಸಾಂಕ್ರಾಮಿಕ ರೋಗಗಳ ಕುಣಿಕೆಯಲ್ಲಿ ರಾಜ್ಯದ ಜನತೆ



ಆಹಾರದ ಹಕ್ಕು ಮೂಲಭೂತ ಹಕ್ಕು




ಧೀಮಂತೆ ಕ್ಯಾ. ಲಕ್ಷ್ಮಿ ಸೆಹಗಲ್

ಅಸ್ಸಾಂ : ನಿಲ್ಲದ ದಳ್ಳುರಿ, ಸಿಪಿಐ(ಎಂ) ಆತಂಕ

ಬಾಂಗ್ಲಾದೇಶದಿಂದ ಅಕ್ರಮವಾಗಿ ವಲಸೆ ಬಂದವರು ಎಂಬ ಆರೋಪ ಹೊರಿಸಿ ಅಲ್ಪಸಂಖ್ಯಾತರ ಮೇಲೆ ನಡೆಸಲಾದ ಹಿಂಸಾಚಾರವನ್ನು ಸಮರ್ಥಿಸುವ ದುರುದ್ದೇಶಪೂರಿತ ಪ್ರಚಾರವನ್ನು ಸಿಪಿಐ(ಎಂ) ಬಲವಾಗಿ ಖಂಡಿಸುತ್ತದೆ.

ಅಸ್ಸಾಂ ರಾಜ್ಯದಲ್ಲಿ ಕಳೆದ ಕೆಲವು ದಿನಗಳ ಹಿಂದೆ ಸ್ಫೋಟಗೊಂಡ ಹಿಂಸಾಚಾರ ತೀವ್ರಗೊಳ್ಳುತ್ತಿರುವ ಬಗ್ಗೆ ಹಾಗೂ ಅದು ಕೋಮು ಗಲಭೆಯಾಗಿ ಮಾರ್ಪಾಡಾಗುತ್ತಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯೂರೊ ತೀವ್ರ ಆತಂಕವನ್ನು ವ್ಯಕ್ತಪಡಿಸಿದೆ. ಕೋಕ್ರಜಾರ್ ಜಿಲ್ಲೆಯಲ್ಲಿ ಮೊದಲು ಆರಂಭವಾದ ಹಿಂಸಾಚಾರ ಈಗ ಚಿರಾಂಗ್, ಧುಬ್ರಿ, ಬೊಂಗಾಯ್‌ಗಾಂವ್ ಮೊದಲಾದ ಜಿಲ್ಲೆಗಳಿಗೂ ಹರಡುತ್ತಿದ್ದು, ಗಲಭೆಯಲ್ಲಿ ಸತ್ತವರ ಸಂಖ್ಯೆ 40ಕ್ಕೆ ಏರಿದೆ. ಎಷ್ಟೋ ಜನ ಕಾಣೆಯಾಗಿದ್ದಾರೆ. 50ಕ್ಕೂ ಹೆಚ್ಚು ಗ್ರಾಮಗಳಿಗೆ ಬೆಂಕಿ ಹಚ್ಚಿ ಸುಟ್ಟು ಹಾಕಲಾಗಿದೆ. ಸಾವಿರಾರು ಜನ ತಮ್ಮ ಮನೆಮಾರುಗಳನ್ನು ತೊರೆದು ಹೋಗಿದ್ದಾರೆ. ಸರ್ಕಾರಿ ಪುನರ್ವಸತಿ ಕೇಂದ್ರಗಳಲ್ಲಿ ಆಶ್ರಯ ಪಡೆದಿರುವವರು ಸಹ ಭಯ ಭೀತಿಯಿಂದ ಮುಕ್ತರಾಗಿಲ್ಲ.

ಗಲಭೆ ಆರಂಭವಾದ ಮೊದಲನೆಯ ದಿನವೇ (ಜುಲೈ 6) ದೃಢವಾದ ಕ್ರಮಗಳನ್ನು ಕೈಗೊಳ್ಳಲು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ವಿಫಲವಾಗಿದ್ದರಿಂದ ಹಿಂಸಾಚಾರ ವಿಸ್ತರಿಸಲು ಕಾರಣವಾಯಿತು. ವಿವಿಧ ಸಮುದಾಯಗಳ ನಡುವೆ ಹೆಚ್ಚುತ್ತಿದ್ದ ಅಪನಂಬಿಕೆ ಮತ್ತು ಉದ್ವಿಗ್ನತೆ ಕುರಿತು ಲಭ್ಯವಾದ ಮುನ್ನೆಚ್ಚರಿಕೆಗಳನ್ನು ಕಡೆಗಣಿಸಲಾಯಿತು. ಕೇಂದ್ರ ಸರ್ಕಾರವು ಸಹ ಗಲಭೆಯನ್ನು ನಿಯಂತ್ರಿಸುವ ವಿಷಯದಲ್ಲಿ ಮಧ್ಯಪ್ರವೇಶ ಮಾಡಲು ಅತೀವ ವಿಳಂಬ ಮಾಡಿದುದರ ಬಗ್ಗೆ ದೇಶಕ್ಕೆ ವಿವರಣೆ ನೀಡಬೇಕು.



ಬಾಂಗ್ಲಾದೇಶದಿಂದ ಅಕ್ರಮವಾಗಿ ವಲಸೆ ಬಂದವರು ಎಂಬ ಆರೋಪ ಹೊರಿಸಿ ಅಲ್ಪಸಂಖ್ಯಾತರ ಮೇಲೆ ನಡೆಸಲಾದ ಹಿಂಸಾಚಾರವನ್ನು ಸಮರ್ಥಿಸುವ ದುರುದ್ದೇಶಪೂರಿತ ಪ್ರಚಾರವನ್ನು ಸಿಪಿಐ(ಎಂ) ಬಲವಾಗಿ ಖಂಡಿಸುತ್ತದೆ. ಈ ಆರೋಪ ಒಂದು ಕಟ್ಟು ಕತೆ. ಈ ಪ್ರದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ವಾಸವಾಗಿರುವ ಜನ ಭಾರತದ ನಾಗರಿಕರೇ ಆಗಿದ್ದು, ಬ್ರಹ್ಮಪುತ್ರ ಮತ್ತು ಇತರ ನದಿಗಳ ಕೊರೆತದಿಂದ ತಮ್ಮ ಭೂಮಿಯನ್ನು ಕಳೆದುಕೊಂಡವರಾಗಿದ್ದಾರೆ. ಕಳೆದ ಕೆಲವು ದಶಕಗಳಿಂದ ಅವರು ಇಲ್ಲಿಯೇ ವಾಸವಾಗಿದ್ದವರಾಗಿದ್ದಾರೆ. ಬಹು ಭಾಷಾ, ಬಹು ಧರ್ಮೀಯ ಮತ್ತು ಬಹು ಜನಾಂಗೀಯ ಸಮುದಾಯಗಳನ್ನು ಹೊಂದಿರುವ ಈ ರಾಜ್ಯದಲ್ಲಿ ಜನತೆಯನ್ನು ವಿಭಜಿಸಿ, ಅವರ ಐಕ್ಯತೆಯನ್ನು ದುರ್ಬಲಗೊಳಿಸುವ ನೀತಿಗಳನ್ನೇ ಆಳುವ ಸರ್ಕಾರಗಳು ಅನುಸರಿಸುತ್ತಾ ಆಗಾಗ ಗಲಭೆಗಳು ಸಂಭವಿಸಲು ಕಾರಣವಾಗುತ್ತಿರುವುದು ಒಂದು ದುರಂತವಾಗಿದೆ.

ರಾಜ್ಯದಲ್ಲಿ ಕಾನೂನು ವ್ಯವಸ್ಥೆಯನ್ನು ಪುನರ್‌ಸ್ಥಾಪಿಸಲು ಸರ್ಕಾರ ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತದೆ. ಗಲಭೆಗೆ ನೇರವಾಗಿ ಕಾರಣರಾದವರನ್ನು ಸರಿಯಾಗಿ ಗುರುತಿಸಿ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.

ಹಿಂಸಾಚಾರಕ್ಕೆ ಬಲಿಯಾಗಿ ಪ್ರಾಣತೆತ್ತವರ ಕುಟುಂಬಗಳಿಗೆ ಪೂರ್ಣ ಪ್ರಮಾಣದಲ್ಲಿ ಗರಿಷ್ಠ ಪರಿಹಾರವನ್ನು ನೀಡಬೇಕು. ಗಾಯಗೊಂಡವರಿಗೂ ಪರಿಹಾರ ಕೊಡಬೇಕು. ಪುನರ್ವಸತಿ ಕೇಂದ್ರಗಳಲ್ಲಿ ಆಶ್ರಯ ಪಡೆದಿರುವ ನಿರಾಶ್ರಿತರಿಗೆ ಎಲ್ಲ ಅಗತ್ಯ ಸೌಕರ್ಯಗಳನ್ನು ಮತ್ತು ಗರಿಷ್ಠ ಭದ್ರತೆಯನ್ನು ಒದಗಿಸಬೇಕು. ಜತೆಗೆ ಈ ಘೋರ ಭ್ರಾತೃಘಾತಕ ಹಿಂಸೆಯನ್ನು ತೊರೆದು, ಗಲಭೆಕೋರರನ್ನು ಜನತೆಯಿಂದ ಪ್ರತ್ಯೇಕಿಸಿ, ಶಾಂತಿಯನ್ನು ಪುನರ್‌ಸ್ಥಾಪಿಸಬೇಕು ಸಿಪಿಐ(ಎಂ) ಮನವಿ ಮಾಡಿದೆ. ಸಿಪಿಐ(ಎಂ) ಸಂಸತ್ ಸದಸ್ಯರ ತಂಡವೊಂದು ಶೀಘ್ರದಲ್ಲೇ ಆಸ್ಸಾಂ ರಾಜ್ಯದ ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಲಿದೆ. ●

ಕೇರಳದ ಬೆಳವಣಿಗೆ ಕುರಿತು

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ಜುಲೈ 21–22, 2012 ರಂದು ನವ ದೆಹಲಿಯಲ್ಲಿ ಸಭೆ ಸೇರಿತ್ತು. ಆ ಸಭೆಯ ನಂತರದ ಪತ್ರಿಕಾ ಪ್ರಕಟಣೆಯನ್ನು ಕೆಳಗೆ ನೀಡಲಾಗಿದೆ.

ಕೇಂದ್ರ ಸಮಿತಿ ಕೇರಳದಲ್ಲಿನ ಪಕ್ಷದ ಪ್ರಚಲಿತ ವಿದ್ಯಮಾನಗಳು ಮತ್ತು ಸಂಬಂಧಿತ ವಿಷಯಗಳ ಬಗೆಗಿನ ಪೊಲಿಟ್ ಬ್ಯೂರೊದ ವರದಿಯನ್ನು ಪರಿಶೀಲಿಸಿತು. ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾದ ಕಾಂ. ವಿ.ಎಸ್. ಅಚ್ಯುತಾನಂದನ್ ಪಕ್ಷದ ಕೇರಳ ರಾಜ್ಯ ನಾಯಕತ್ವವನ್ನು ಟೀಕಿಸುತ್ತ ಸಾರ್ವಜನಿಕ ಹೇಳಿಕೆಗಳನ್ನು ನೀಡಿ ಮತ್ತು ಅನುಸರಿಸಿದ ಕೆಲವು ಕ್ರಮಗಳಿಂದಾಗಿ ಪಕ್ಷದ ವಿರೋಧಿಗಳಿಗೆ ಪಕ್ಷದ ಮೇಲೆ ದಾಳಿ ಮಾಡಲು ಅವಕಾಶಗಳನ್ನು ಸೃಷ್ಟಿಸಿ ಕೊಟ್ಟಿರುವುದನ್ನು ಅದು ಗಮನಿಸಿತು. ಚರ್ಚೆಯ ನಂತರ ಕಾಂ.ವಿ.ಎಸ್. ಅಚ್ಯುತಾನಂದನ್ ತಾವು ಮಾಡಿದ ಕೆಲವು ಟಿಪ್ಪಣಿಗಳು ಮತ್ತು ಕ್ರಮಗಳು ತಪ್ಪಾಗಿದ್ದವೆಂದೂ ಮತ್ತು ಅವು ಅನಗತ್ಯವಾಗಿದ್ದವು ಎಂದು ಸ್ವವಿಮರ್ಶಾತ್ಮಕವಾಗಿ ಒಪ್ಪಿಕೊಂಡರು.

ಈ ಚರ್ಚೆಯ ಆಧಾರದ ಮೇಲೆ ಕೇಂದ್ರ ಸಮಿತಿ ಕಾಂ. ಅಚ್ಯುತಾನಂದನ್ ಅವರ ಈ ತಪ್ಪು ಹೇಳಿಕೆಗಳು ಮತ್ತು ನಡವಳಿಕೆಗಳನ್ನು ಹಾಗೂ ಅವರು ಪಕ್ಷದ ರೂಢಿಗತ ನಿಯಮಗಳನ್ನು ಮೀರಿದ್ದಕ್ಕೆ ಅವರನ್ನು ಖಂಡಿಸುವ ನಿರ್ಣಯ ಕೈಗೊಂಡಿತು. ಪಕ್ಷದ ಹಿರಿಯ ಸದಸ್ಯರಾಗಿರುವ ಕಾಂ.ವಿ.ಎಸ್. ಪಕ್ಷ ಇಂದಿನ ಪರಿಸ್ಥಿತಿಯನ್ನು ಒಗ್ಗಟ್ಟಿನಿಂದ ಎದುರಿಸುವಲ್ಲಿ ಸಹಾಯವಾಗುವಂತೆ ನಡೆದುಕೊಳ್ಳುವರೆಂಬ ಆಶಯ ವ್ಯಕ್ತಪಡಿಸಿತು.

ಟಿ.ಪಿ.ಚಂದ್ರಶೇಖರನ್ ಅವರ ಕ್ರೂರ ಕೊಲೆಯನ್ನು ನಮ್ಮ ಪಕ್ಷದ ವಿರುದ್ಧ ಅಪಪ್ರಚಾರ ಮಾಡಲು ಬಳಸಿಕೊಳ್ಳುತ್ತಿರುವುದನ್ನು ಕೇಂದ್ರ ಸಮಿತಿ ಗಮನಿಸಿತು. ಯುಡಿಎಫ್ ಸರ್ಕಾರ ಪಕ್ಷದ ನಾಯಕರು ಮತ್ತು ಕಾರ್ಯಕರ್ತರನ್ನು ಈ ಪ್ರಕರಣದಲ್ಲಿ ಸುಳ್ಳೆ ಸಿಲುಕಿಸುವಂತೆ ಪೋಲೀಸರನ್ನು ನಿರ್ದೇಶಿಸುತ್ತಿರುವ ಕ್ರಮವನ್ನು ಖಂಡಿಸಿತು. ಪಕ್ಷ ಈ ಕೊಲೆಯಲ್ಲಿ ತಾನು ಭಾಗಿಯಾಗಿಲ್ಲವೆಂದು ಘೋಷಿಸಿರುವುದಲ್ಲದೆ ಕೊಲೆಯನ್ನು ತೀವ್ರವಾಗಿ ಖಂಡಿಸಿದೆ. ಪಕ್ಷ ತನ್ನ ರಾಜಕೀಯ ವಿರೋಧಿಗಳನ್ನು ಇಲ್ಲವಾಗಿಸುವ ಸಿದ್ಧಾಂತದಲ್ಲಿ ನಂಬಿಕೆ ಇಟ್ಟುಕೊಂಡಿಲ್ಲ.

ಪಕ್ಷದ ಒಳಗಿನವರ ಪಾತ್ರ ಈ ಕೊಲೆಯಲ್ಲಿ ಏನಾದರೂ ಇದೆಯೇ ಎಂಬುದನ್ನು ತಿಳಿದುಕೊಳ್ಳಲು ಪಕ್ಷ ವಿಚಾರಣೆಯನ್ನು ನಡೆಸಲಿದೆ. ಈ ಹಿಂದೆ ತಿಳಿಸಿದಂತೆ ಅಂತಹ ಪಾತ್ರ ಏನಾದರೂ ಕಂಡುಬಂದರೆ ಪಕ್ಷ ಅಂತಹವರ ಮೇಲೆ ಕಠಿಣ ಕ್ರಮ ಕೈಗೊಳ್ಳುತ್ತದೆಯಷ್ಟೆ ಅಲ್ಲ ಇಂತಹ ತಪ್ಪು ಪ್ರವೃತ್ತಿ ಕಂಡು ಬಂದರೆ ಅದನ್ನು ನಿರ್ದಾಕ್ಷಿಣ್ಯವಾಗಿ ಹಿಮ್ಮೆಟ್ಟಿಸಲಾಗುವುದು.

ಪಕ್ಷದ ಇಡುಕ್ಕಿ ಜಿಲ್ಲಾ ಸಮಿತಿಯ ಮಾಜಿ ಕಾರ್ಯದರ್ಶಿ ಎಂ.ಎಂ. ಮಣಿ ಅವರ ವಿಷಯದಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಂದ್ರ ಸಮಿತಿಯು ಕೇರಳ ರಾಜ್ಯ ಸಮಿತಿಗೆ ತಿಳಿಸಿದೆ. ●

ಗಡಿ ಮೀರಿದ ಅಭಿಮಾನ

"ಹಿಂದಿ ಚಿತ್ರರಂಗಕ್ಕೆ ರಾಜೇಶ್ ಖನ್ನಾ ಅಮೂಲ್ಯ ಕೊಡುಗೆ ನೀಡಿದ್ದಾರೆ. ಭಾರತದ ಗಡಿಯಾಚೆಗೂ ಅಪಾರ ಅಭಿಮಾನಿ ಬಳಗ ಹೊಂದಿದ್ದ ನಟ ಅವರು."

– ಪಾಕ್ ಪ್ರಧಾನಿ ಪರ್ವೇಜ್ ಅಶ್ರಫ್

ಪದವಿಗಳು

**ಮನುಷ್ಯತ್ವ ಕಲಿಸದಿಹ ಪದವಿಗಳ ನೋಡಿ
ಪಡೆದರು ಫಲವಿಲ್ಲ ಹೊಳೆಗೆ ಬೀಸಾಡಿ
ಹಡೆದವರ ಮರೆಸುತಿಹ ಪದವಿಗಳು ಹಾಳು
ಕೊಳಚೆಯೊಳು ಮುಳುಗುತಿಹ ಹಂದಿಗೂ
ಕೀಳು.**

– ವಿಡಂಬಾರಿ

ತಿದ್ದುಪಡಿ

'ಜನಶಕ್ತಿ'ಯ ಕಳೆದ ಸಂಚಿಕೆ(31)ರ ಪುಟ 14 ರಲ್ಲಿ ಪ್ರಕಟವಾಗಿರುವ 'ವಿದ್ಯಾರ್ಥಿಗಳು ತಿರಸ್ಕರಿಸಿದ ಹಿಂಸಾಚಾರದ ಆರೋಪ' ಎಂಬ ಕೇರಳ ರಾಜ್ಯದ ಬೆಳವಣಿಗೆಗಳ ಕುರಿತ ಬರಹದಲ್ಲಿ ಒಂದೆಡೆ 'ಕಾಂಗ್ರೆಸ್ ನೇತೃತ್ವದ ಯು.ಡಿ.ಎಫ್. ಸರ್ಕಾರ ...' ಎಂದಿರಬೇಕಾದ ಕಡೆ 'ಕಾಂಗ್ರೆಸ್ ನೇತೃತ್ವದ ಎಲ್.ಡಿ.ಎಫ್. ಸರ್ಕಾರ...' ಎಂದು ತಪ್ಪಾಗಿ ಮುದ್ರಣಗೊಂಡಿದೆ. ಆಗಿರುವ ತಪ್ಪಿಗಾಗಿ ವಿಷಾದಿಸುತ್ತೇವೆ.

– ಸಂ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಒಳಚರಂಡಿ ಸ್ವಚ್ಛತೆ ಯಾಂತ್ರೀಕರಣಗೊಳ್ಳಲಿ

ಒಳಚರಂಡಿ ಕಾಮಗಾರಿಗೆ ಹಾಕಿದ ಸೆಂಟ್ರಿಂಗ್ ತೆಗೆಯಲು ಒಳಚರಂಡಿಯೊಳಗೆ ಇಳಿದಿದ್ದ ಸಹೋದರರಿಬ್ಬರು ಉಸಿರುಗಟ್ಟಿ ಸಾವನ್ನಪ್ಪಿದ ಹೃದಯ ವಿದ್ರಾವಕ ಘಟನೆ ಹುಬ್ಬಳ್ಳಿ ನಗರದಲ್ಲಿ ಸಂಭವಿಸಿದ್ದು ಇತ್ತೀಚೆಗೆ ವರದಿಯಾಗಿದೆ. ಮೃತಪಟ್ಟವರು ಗದಗ ಜಿಲ್ಲೆಯ ರೋಣ್ ತಾಲ್ಲೂಕಿನ ನೆಲ್ಲೂರು ಗ್ರಾಮದ ನಿವಾಸಿಗಳಾದ ರಮೇಶ್ ಲಮಾಣಿ (24) ಮತ್ತು ಸಂತೋಷ್ ಲಮಾಣಿ(20) ಎಂದು ತಿಳಿದು ಬಂದಿದೆ. ಅಸ್ವಸ್ಥಗೊಂಡ ಬಸವರಾಜ ಮತ್ತು ಶಶಿ ಎಂಬ ಇನ್ನಿಬ್ಬರು ಕಾರ್ಮಿಕರನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ದಾಖಲುಮಾಡಿ ಚಿಕಿತ್ಸೆ ನೀಡಲಾಗಿದೆ.

ನಗರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ನಗರದಲ್ಲಿ ಕೊಳಚೆ ನೀರು ಹರಿದು ಹೋಗಲು ಅಗತ್ಯವಾದ ಕಾಮಗಾರಿಯನ್ನು ನಡೆಸಲಾಗುತ್ತಿತ್ತು. ಸದರಿ ಕಾಮಗಾರಿಯನ್ನು ಮುಂಬೈನ ಈಗಲ್ ಕನ್‌ಸ್ಟ್ರಕ್ಷನ್ ಕಂಪನಿ ಗುತ್ತಿಗೆ ಪಡೆದಿತ್ತು. ಈ ಕಂಪನಿ ಅಡಿಯಲ್ಲಿ ದಿನಗೂಲಿ ಕೆಲಸ ಮಾಡುವ ಕಾರ್ಮಿಕರ ಪೈಕಿ ನಾಲ್ವರು, ಹಾಕಲಾದ ಸೆಂಟ್ರಿಂಗ್ ತೆಗೆಯಲು ಜೊತೆಗೆ ಬಂದಿದ್ದರು. ಚರಂಡಿಯ ಮುಚ್ಚಳ ತೆಗೆದು ಏಣಿಯ ಸಹಾಯದಿಂದ ಮೊದಲು ರಮೇಶ್ ಕೆಳಗಿಳಿದಿದ್ದಾನೆ. ಅಲ್ಲಿ ಆಮ್ಲಜನಕದ ಕೊರತೆ ಇದ್ದ ಕಾರಣ, ಉಸಿರುಗಟ್ಟಿ ಅಸ್ವಸ್ಥಗೊಳ್ಳುತ್ತಿರುವುದನ್ನು ಕಂಡು ಆತನ ರಕ್ಷಣೆಗೆಂದು ಸಂತೋಷ್ ಸಹ ಕೆಳಗೆ ಇಳಿದಿದ್ದಾನೆ. ಮೇಲೆ ಬರಲು ಪ್ರಯತ್ನಿಸಿದ ಇಬ್ಬರಿಗೂ ಸಾಧ್ಯವಾಗದಿದ್ದಾಗ ಬಸವರಾಜ ಮತ್ತು ಶಶಿ ಕೂಡಾ ಇಳಿಯತೊಡಗಿದ್ದಾರೆ. ಸಕಾಲಿಕ ನೆರವಿನಿಂದ ಅವರಿಬ್ಬರೂ ಪಾರಾಗಿದ್ದಾರೆ. ತೀವ್ರ ಅಸ್ವಸ್ಥರಾಗಿದ್ದ ರಮೇಶ್ ಮತ್ತು ಸಂತೋಷ್ ಆಸ್ಪತ್ರೆಗೆ ಸಾಗಿಸುವಷ್ಟರಲ್ಲಿ ಕೊನೆಯುಸಿರೆಳೆದಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ಆಮ್ಲಜನಕ ಸಿಲಿಂಡರ್ ಅನ್ನು ಸ್ಥಳಕ್ಕೆ ತಂದಿದ್ದರೂ ಅದನ್ನು ತೆರೆದು ಆಮ್ಲಜನಕ ಪೂರೈಸಲು ವಿಫಲರಾದರು. ಒಳಚರಂಡಿ ಒಳಗೆ ಉಸಿರುಗಟ್ಟಿ ಒದ್ದಾಡುತ್ತಿದ್ದ ಕಾರ್ಮಿಕರಿಗೆ ಸಕಾಲದಲ್ಲಿ ಆಮ್ಲಜನಕ ಪೂರೈಕೆಯಾಗಿದ್ದರೆ ಅವರ ಜೀವ ಉಳಿಸಬಹುದಾಗಿತ್ತು ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ತಿಳಿದು ಬಂದಿದೆ.

ಒಳಚರಂಡಿಗಳಿಗೆ ಇಳಿದು ವಿಷಾನಿಲ ಸೇವಿಸಿ ಸಾವಿಗೀಡಾಗುವವರಿಗೆ ಲೆಕ್ಕವಿಲ್ಲ. ಅವರಿಗಾಗಿ ಅಳುವವರಿಲ್ಲ. ಇಂತಹ ಸಾವುಗಳು ಸುದ್ದಿಯೂ ಆಗುವುದಿಲ್ಲ. ಹೊಟ್ಟೆಪಾಡಿಗಾಗಿ ಇಂತಹ ಅಪಾಯಕಾರಿ ಮತ್ತು ಅಸಹ್ಯಕಾರಿ ಉದ್ಯೋಗವನ್ನು ಅವಲಂಬಿಸಿರುವ ಪೌರಕಾರ್ಮಿಕರು ಆಗಾಗ ಇದೇ ರೀತಿಯ ದುರಂತ ಸಾವುಗಳಿಗೆ ಬಲಿಯಾಗುವುದನ್ನು ನೋಡುತ್ತಿರುತ್ತೇವೆ. ನಗರ ಪ್ರದೇಶಗಳಲ್ಲಿ ಇರುವ ಮ್ಯಾನ್ ಹೋಲ್‌ಗಳನ್ನು ಸ್ವಚ್ಚ ಮಾಡುವ ಈ ಪೌರಕಾರ್ಮಿಕರು ಹೆಚ್ಚಾಗಿ ದಲಿತರೇ ಆಗಿರುತ್ತಾರೆ. ಈ ಶ್ರೇಣಿಕೃತ ಸಮಾಜ ವ್ಯವಸ್ಥೆಯಲ್ಲಿ ದಲಿತರ ಜೀವಕ್ಕೆ ಎಲ್ಲಿದೆ ಬೆಲೆ ? ಉತ್ತರ ಕರ್ನಾಟಕದ ರೈತರ ಮನೆಗಳಲ್ಲಿ ಧಾನ್ಯಗಳನ್ನು ಕೂಡಿಡುವ ಹಗೇವುಗಳೊಳಗೆ ಇಳಿಯುವಾಗ ಬಹಳಷ್ಟು ಎಚ್ಚರಿಕೆಯನ್ನು ವಹಿಸಲಾಗುತ್ತದೆ. ಅಷ್ಟು ಎಚ್ಚರಿಕೆ ಒಳಚರಂಡಿಯೊಳಗೆ ಇಳಿದು ಕೆಲಸ ಮಾಡುವ ಕಾರ್ಮಿಕರ ಬಗ್ಗೆ ಇರುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರದಲ್ಲಿ 2.5 ಲಕ್ಷ ಮ್ಯಾನ್‌ಹೋಲ್‌ಗಳಿವೆ ಎನ್ನಲಾಗುತ್ತದೆ. ಆದರೆ ಅವುಗಳನ್ನು ಸ್ವಚ್ಚಗೊಳಿಸಲಿಕ್ಕೆ ನೇಮಿಸಲಾದ ಕಾರ್ಮಿಕರ ಸಂಖ್ಯೆ ಮಾತ್ರ 186. ಅವರ ಸಹಾಯಕ್ಕೆ ನೀಡಲಾದ ಜೆಟ್ಟಿಂಗ್ ಯಂತ್ರಗಳು ಕೇವಲ 30 (ವಿಜಯವಾಣಿ, 17 ಜುಲೈ 2012) ಈ ಅಲ್ಪ ಸಂಖ್ಯೆಯ ಕಾರ್ಮಿಕರ ಜತೆಗೆ ಸುಮಾರು 300 ಕಾರ್ಮಿಕರು ಗುತ್ತಿಗೆ ಆಧಾರದ ಮೇಲೆ ಮ್ಯಾನ್‌ಹೋಲ್‌ಗಳ ಸ್ವಚ್ಚತಾ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ನಗರ ನೈರ್ಮಲ್ಯ ಹಾಗೂ ನಾಗರಿಕರ ಆರೋಗ್ಯ ರಕ್ಷಣೆ ದೃಷ್ಟಿಯಿಂದ ಇದು ಅತ್ಯಂತ ಆದ್ಯತೆಯ ಕೆಲಸವಾಗಿದೆ. ಇಂತಹ ಮಹತ್ವದ ಕೆಲಸವನ್ನು ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಗುತ್ತಿಗೆ ಆಧಾರದಲ್ಲಿ ದುಡಿಸುವುದು ಎಷ್ಟು ಸರಿ ? ಇಷ್ಟೊಂದು ಆದಾಯ ಇರುವ ಬಿ.ಬಿ.ಎಂ.ಪಿ. ಪೌರಕಾರ್ಮಿಕರ ಸೇವೆಯನ್ನು ಏಕೆ ಕಾಯಂಗೊಳಿಸಿ ಅವರಿಗೆ ಜೀವನಾವಶ್ಯಕ ವೇತನ ಮತ್ತಿತರ ಸೌಲಭ್ಯಗಳನ್ನು ನೀಡಬಾರದು? ಇದು ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳಿಗೆ, ನಗರ ಹಾಗೂ ಪುರಸಭೆಗಳಿಗೂ ಅನ್ವಯಿಸುತ್ತದೆ.

ಎಲ್ಲಕ್ಕೂ ಮುಖ್ಯವಾಗಿ ಸದಾ ವಿಷಾನಿಲದಿಂದ ತುಂಬಿಕೊಂಡಿರುತ್ತಿರುವ ಒಳಚರಂಡಿ–ಮ್ಯಾನ್ ಹೋಲ್ ಒಳಗೆ ಕಾರ್ಮಿಕರನ್ನು ಇಳಿಸುವುದನ್ನು ನಿಷೇಧಿಸುವುದು ತುರ್ತಾಗಿ ಆಗಬೇಕಾಗಿದೆ. ಒಳಚರಂಡಿ ಸ್ವಚ್ಚಗೊಳಿಸುವ ಕೆಲಸವನ್ನು ಯಂತ್ರಗಳ ಮೂಲಕವೇ ಮಾಡಿಸುವುದಾಗಬೇಕು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಆಕ್ಸಿಜನ್ ಮಾಸ್ಕ್ ಹಾಕಿಕೊಂಡು ಇತರ ಎಲ್ಲಾ ಜೀವ ರಕ್ಷಕ ಸಾಧನಗಳೊಂದಿಗೆ ಕೆಳಗೆ ಇಳಿಯಬೇಕು. ಜವಾಬ್ದಾರಿಯುತ, ತಜ್ಞ ಅಧಿಕಾರಿಯೊಬ್ಬರ ಸಮಕ್ಷಮದಲ್ಲಿ ಮಾತ್ರ ಒಳಚರಂಡಿ ಮ್ಯಾನ್‌ಹೋಲ್ ಸ್ವಚ್ಚತಾ ಕೆಲಸವನ್ನು ನಿರ್ವಹಿಸುವಂತಾಗಬೇಕು. ಯಾವುದೇ ಅನಾಹುತ ಸಂಭವಿಸಿದರೆ, ಸಂಬಂಧಪಟ್ಟ ಅಧಿಕಾರಿಗಳನ್ನೇ ಜವಾಬ್ದಾರರನ್ನಾಗಿಸಬೇಕು. ಕೆಲಸವನ್ನು ಕಂಪನಿಗಳಿಗೆ ವಹಿಸಿಕೊಟ್ಟಾಗ ಅವುಗಳಿಗೆ ಕಠಿಣವಾದ ಹೊಣೆಗಾರಿಕೆಯನ್ನು ವಹಿಸಬೇಕು. ಸಾವಿಗೀಡಾಗುವ ಕಾರ್ಮಿಕರ ಕುಟುಂಬಗಳಿಗೆ ಗರಿಷ್ಠ ಪರಿಹಾರ, ಪರ್ಯಾಯ ಉದ್ಯೋಗ ಮೊದಲಾದ ಪುನರ್ವಸತಿ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ನಗರದ ನೈರ್ಮಲ್ಯ ಮತ್ತು ತಮ್ಮ ಆರೋಗ್ಯದ ಬಗ್ಗೆ ಸ್ಥಳೀಯ ಸಂಸ್ಥೆಗಳು ಹೆಚ್ಚಿನ ಕಾಳಜಿ ಮಾಡಬೇಕೆಂದು ಬಯಸುವ ನಾಗರಿಕರು ನಮ್ಮ ಆರೋಗ್ಯಕ್ಕಾಗಿ ತಮ್ಮ ಅಮೂಲ್ಯ ಜೀವವನ್ನೇ ಬಲಿಕೊಡುವ ಪೌರಕಾರ್ಮಿಕರ ಬದುಕಿನ ಬಗ್ಗೆ ಕೂಡಾ ಕಾಳಜಿವುಳ್ಳವರಾಗಬೇಕು.

ಸಾಂಕ್ರಾಮಿಕ ರೋಗಗಳ ಕುಣಿಕೆಯಲ್ಲಿ....

ಈ ಜ್ವರಕ್ಕೆ ರಾಜ್ಯದಲ್ಲಿ ಬಲಿಯಾದವರು 10, ಬೆಂಗಳೂರಿನಲ್ಲೇ 4, ಆಸ್ಪತ್ರೆಗೆ ದಾಖಲಾದವರು 134. ರಾಜ್ಯದ ಒಟ್ಟು ಡೆಂಗ್ಯು ಪೀಡಿತರ ಸಂಖ್ಯೆ 740. ಈ ಸಂಖ್ಯೆ ಹೆಚ್ಚುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ. ಆದರೆ ಸರಕಾರ ಈ ಸತ್ಯವನ್ನು ಒಪ್ಪಿಕೊಳ್ಳಲೂ ಸಿದ್ಧವಿಲ್ಲ. ಡೆಂಗ್ಯೂ ಜ್ವರದ ಮಾರಿಯ ಬಲಿಯ ಸರಣಿ ಶುರುವಾದರೂ ಅದನ್ನು ಸರಕಾರ ನಿರಾಕರಿಸುತ್ತಲೇ ಬಂತು.



ಕೊನೆಗೆ ಇದು ಬೆಂಗಳೂರು ನಗರ , ದಾವಣಗೆರೆ, ಮೈಸೂರು, ಉಡುಪಿ, ಶಿವಮೊಗ್ಗ ಹೀಗೆ ಹಬ್ಬುತ್ತಾ ಹೋಗಿ ಗಂಭೀರತೆ ಹೆಚ್ಚ ತೊಡಗಿದ ಬಳಿಕವೇ ಕೊನೆಗೆ ಒಪ್ಪಿಕೊಂಡದ್ದು. ಈಗ ಸರಕಾರ 'ಸಮರೋಪಾಧಿ'ಯಲ್ಲಿ ಕ್ರಮ ಕೈಗೊಂಡಿದೆಯಂತೆ!. ಹಾಗಂತ ಮಾಧ್ಯಮಗಳಲ್ಲಿ ಸದ್ದು ಮಾಡುತ್ತಿದೆ.

ಸಾವಿನ ಸನ್ನಾಹ


ಆಧುನಿಕ ಮಾರಿ ಡೆಂಗ್ಯೂ ಜ್ವರ ರಾಜ್ಯಕ್ಕೆ ಹೊಸದೇನಲ್ಲ. ಅದು ಇತ್ತೀಚೆಗೆ ಅಂದರೆ 2005 ,2010 ರಲ್ಲಿ ಸಾಕಷ್ಟು ಆತಂಕ, ಹಾನಿ ಮಾಡಿತ್ತು. ಮಳೆಗಾಲ ಆರಂಭವಾಯಿತೆಂದರೆ ಇದು ಕರೆಯದೇ ಬರುವ ಖಾಯಂ ಅತಿಥಿಯಂತೆ ತಾನಾಗಿಯೇ ದೇಹದೊಳಗೆ ವಕ್ಕರಿಸಲಿದೆ. ಅದರಲ್ಲೂ ಭರಪೂರ ಮಳೆಗಿಂತ ಅಷ್ಟಿಷ್ಟು ಮಳೆ ಬಂದು ನಿಂತು ಬಿಟ್ಟರಂತೂ ಡೆಂಗ್ಯೂ ವೈರಸ್ ಹಬ್ಬುವಿಕೆಗೆ ಬಾರಿ ಪ್ರಶಸ್ತ್ಯ ಎನ್ನುತ್ತಾರೆ ವೈದ್ಯರು. ಡೆಂಗ್ಯೂ ವೈರಸ್‌ನ್ನು ಹಬ್ಬಿಸುವಲ್ಲಿ 'ಆಯಡೆಸ್ ಏಜಿಪ್ಟಿ' ಎಂಬ ಸೊಳ್ಳೆ ಕಡಿತವೇ ಪ್ರಮುಖ. ಇದು ಯಾವುದೇ ನಿಂತ ನೀರಿನಲ್ಲಿ ಮೊಟ್ಟೆ ಇಡುತ್ತದೆ. ಈ ಸೊಳ್ಳೆಯೇ ಜ್ವರದ ವೈರಾಣುವಿನ ವಾಹಕ. ಈ ಜ್ವರದಲ್ಲೂ ಎರಡು ಬಗೆಯಿದ್ದು ಸಾಮಾನ್ಯ ಸ್ವರೂಪದ ಡೆಂಗ್ಯೂ ಜ್ವರದ ಲಕ್ಷಣಕ್ಕೆ ಸಾಮಾನ್ಯ ಔಷದೋಪಚಾರದಿಂದ ಗುಣ ಲಕ್ಷಣದ ಶಮನ ಮಾಡಬಹುದು. ಆದರೆ ರಕ್ತಸ್ರಾವದ ಡೆಂಗ್ಯೂ ಜ್ವರ ಕೆಂಪು ರಕ್ತ ಕಣಗಳನ್ನು ಅತ್ಯಂತ ತೀವ್ರ ಗತಿಯಲ್ಲಿ ಇಲ್ಲವಾಗಿಸುತ್ತಾ ಬಹು ಅಂಗಗಳನ್ನು ಹಾನಿಗೊಳಿಸಿ ಸಾವನ್ನು ತರುವುದು. ಹೀಗಾಗಿ ಸಕಾಲದಲ್ಲಿ ವೈದ್ಯಕೀಯ ತಪಾಸಣೆ, ಪರೀಕ್ಷೆ, ಶುಶ್ರೂಷೆ ಅತೀ ಅಗತ್ಯ.

ನಿರ್ಲಕ್ಷ್ಯತೆ–ನಿರ್ಲಜ್ಯತೆ

ಇಂತಹ ಮಾರಣಾಂತಿಕ ಖಾಯಿಲೆಯ ಗಂಭೀರತೆಯ ಅರಿವು ಸರಕಾರಕ್ಕೆ ಇಲ್ಲವೆಂದು ಭಾವಿಸಲಾದರೂ ಹೇಗೆ ಸಾಧ್ಯ?. ಆದರೆ ಬೆಂಗಳೂರು ಮಹಾ ನಗರದಲ್ಲಿ ವೈರಾಣು ಪರೀಕ್ಷೆಯ ಸೌಲಭ್ಯ ಕೇವಲ ವಿಕ್ಟೋರಿಯಾ, ನಿಮ್ಹಾನ್ಸ್ ಆಸ್ಪತ್ರೆಗಳಲ್ಲಿ ಮಾತ್ರ ಲಭ್ಯವಿದೆ. ಪ್ರಾದೇಶಿಕ ಆಸ್ಪತ್ರೆಗಳಲ್ಲಿ ಲಭ್ಯವಿಲ್ಲ. ಹೀಗಾಗಿ ಜನತೆ ಅಷ್ಟು ಸುಲಭವಾಗಿ ತಪಾಸಣೆಗೆ ಬರಲೂ ಆಗದೇ ಖಾಸಗಿ ಕೇಂದ್ರಗಳಿಗೆ ಶರಣಾಗಿ ದುಬಾರಿ ಹಣ ತೆರಬೇಕಾಗುತ್ತಿದೆ. ನಾಗರೀಕರ ಆರೋಗ್ಯದ ಹೊಣೆಗಾರಿಕೆ ಇರುವ ಬೃ.ಬೆಂ.ಮಹಾನಗರ ಪಾಲಿಕೆಯಂತೂ ಕೈ ಝಾಡಿಸುತ್ತಿದೆ, ಮಾತ್ರವಲ್ಲ 'ಆರೋಗ್ಯದ ಬಗ್ಗೆ ಜಾಗೃತಿ– ರೋಗ ಹರಡದಂತೆ ಮುಂಜಾಗರೂಕತೆ ವಹಿಸಲು

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್



ಹಾಸ್ಟೆಲ್ ದಿನಗೂಲಿ ನೌಕರರ ಧರಣಿ

ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಅಡಿಗೆ, ಸ್ವಚ್ಚತಾ, ಕಾವಲು ಕಾಯುವ ಮುಂತಾದ ಕೆಲಸಗಳನ್ನು ಮಾಡುತ್ತಾ ಯಾವುದೇ ಕಾನೂನು ಬದ್ಧ ಸಂಬಳ ಸೌಲಭ್ಯಗಳಲ್ಲದೆ ಅನೇಕ ವರ್ಷಗಳಿಂದ ದುಡಿಯುತ್ತಾ ಇರುವ ದಿನಗೂಲಿ ನೌಕರರು ಇತ್ತೀಚಿಗೆ ಗುಲ್ಬರ್ಗಾ ಜಿಲ್ಲಾ ಪಂಚಾಯತ್ ಕಾರ್ಯಾಲಯದ ಎದುರು ಸಾಮೂಹಿಕ ಧರಣಿ ನಡೆಸಿ ತಮ್ಮನ್ನು ಎನ್.ಜಿ.ಓ. ಗಳ ಮೂಲಕ ದುಡಿಸುವುದನ್ನು ನಿಲ್ಲಿಸಿ, ಕಾಯಂಗೊಳಿಸಬೇಕೆಂದೂ, ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನ ಜಾರಿಮಾಡಬೇಕೆಂದೂ, ಕಳೆದ ಹತ್ತಾರು ತಿಂಗಳುಗಳಿಂದ ಸಂದಾಯವಾಗದಿರುವ ವೇತನವನ್ನು ಕೂಡಲೇ ಪಾವತಿ ಮಾಡಬೇಕೆಂದೂ, ತಿಂಗಳ ಸಂಬಳವನ್ನು ಚೆಕ್ ಮೂಲಕ ನೀಡುವಂತಾಗಬೇಕೆಂದು ಮತ್ತು ಸಂಬಳದಿಂದ ಕಡಿತಗೊಳಿಸಲಾಗುತ್ತಿರುವ ಇ.ಎಸ್.ಐ. ಮತ್ತು ಪಿ.ಎಫ್. ವಂತಿಗೆಯ ದಾಖಲೆಗಳನ್ನು ಒದಗಿಸಬೇಕೆಂದು ಆಗ್ರಹಿಸಿದರು. ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಮುಖಂಡರಾದ ಭೀಮಶೆಟ್ಟಿ ಯಂಪಳ್ಳಿ, ದಾವಲ್‌ಸಾಬ್ ನದಾಫ್, ಅಶೋಕ್ ಮ್ಯಾಗೇರಿ, ಹನುಮೇಗೌಡ, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾಧ ಮೇಘರಾಜ ಕಠಾರೆ, ವೀರಭದ್ರ ಕಲ್ಬುರ್ಗಿ ಅಲ್ಲದೆ ಹಾಸ್ಟೆಲ್ ನೌಕರರ ಮುಖಂಡರಾದ ನರಸಮ್ಮ ಚಂದನಕೇರಾ, ರೇವಣಸಿದ್ಧ ತೇಗಳತಿಪ್ಪಿ, ಪರುಶುರಾಮ ಜೇವರ್ಗಿ, ಚಂದ್ರಕಲಾ ಆಳಂದ, ಗುಂಡಮ್ಮ ಚಿಂಚೋಳಿ, ವಿಜಯಲಕ್ಷ್ಮಿ ಕಾಶಿ ಮೊದಲಾದವರು ಧರಣಿ ನೇತೃತ್ವ ವಹಿಸಿದ್ದರು.

ಗುಲ್ಬರ್ಗಾ ಜಿಲ್ಲೆಯಲ್ಲಿ, ರಾಜ್ಯದ ಇತರ ಜಿಲ್ಲೆಗಳಂತೆಯೇ ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ತೀವ್ರ ಶೋಷಣೆಗೆ ಒಳಪಟ್ಟಿದ್ದಾರೆ. ಅವರಲ್ಲಿ ಬಹುಸಂಖ್ಯಾತರು ಮಹಿಳೆಯರೇ ಆಗಿದ್ದು ದಲಿತ ಹಿಂದುಳಿದ ಸಮುದಾಯಗಳಿಗೆ ಸೇರಿದವರಾಗಿದ್ದಾರೆ. ಹತ್ತಿಪ್ಪತ್ತು ವರ್ಷಗಳಿಂದ ಇವರು ದುಡಿಯುತ್ತಿದ್ದರೂ ಇವರ ಸೇವೆಯನ್ನು ಕಾಯಂಗೊಳಿಸಲಾಗಿಲ್ಲ. ಇವರನ್ನು ಎನ್.ಜಿ.ಓ.ಗಳಿಗೆ ವಹಿಸಿಕೊಟ್ಟು ಗುತ್ತಿಗೆ ಆಧಾರದಲ್ಲಿ ದುಡಿಸುತ್ತಾರೆ. ಇವರಿಗೆ ಸರ್ಕಾರ ಒದಗಿಸುವ 4,872 ರೂ ಮತ್ತು 4,672 ರೂ ಗಳಲ್ಲಿ 2,600 ರೂ. ಮತ್ತು 2,400 ರೂ. ಮಾತ್ರ ಎನ್.ಜಿ.ಓ.ಗಳು ನೀಡುತ್ತಾರೆ. ಸಂಬಳದಲ್ಲಿ ಕಡಿತ ಮಾಡಲಾದ ಇ.ಎಸ್.ಐ ಮತ್ತು ಪಿ.ಎಫ್. ಹಣ ಎಲ್ಲಿದೆ ಎಂದು ಕೇಳಿದರೆ ಉತ್ತರ ಹೇಳುವವರಿಲ್ಲ. ಕಳೆದ 10–15 ತಿಂಗಳುಗಳಿಂದ ಇವರಿಗೆ ವೇತನವನ್ನೇ ಕೊಟ್ಟಿಲ್ಲ. ಇಲಾಖಾ ಅಧಿಕಾರಿಗಳನ್ನು ಕೇಳಿದರೆ, 'ಬಜೆಟ್ ಬಂದಾಗ ಕೊಡುತ್ತೇವೆ – ಮನಸ್ಸು ಬಂದ್ರೆ ಕೆಲ್ಸ ಮಾಡಿ, ಇಲ್ದೆ ಇದ್ರೆ ಹೋಗಿ ಬಿಡ್ರಿ' ಎನ್ನುತ್ತಾರೆ. ಕಳೆದ ಮೂರು ವರ್ಷಗಳಿಂದ ಇವರ ಜವಾಬ್ದಾರಿಯನ್ನು ಎನ್.ಜಿ.ಓ.ಗಳಿಗೆ ನೀಡಲಾಗಿದೆ. ಪ್ರತಿ ವರ್ಷ ಬೇರೆ ಬೇರೆ ಎನ್.ಜಿ.ಓ.ಗಳಿಗೆ ವಹಿಸಿಕೊಡುತ್ತಾರೆ. ಈ ನೌಕರರು ಅವರ ಮುಖವನ್ನೇ ನೋಡಿರುವುದಿಲ್ಲ. ಮೂರು ವರ್ಷಗಳ ಹಿಂದೆ ಎಲ್ಲಾ ನೌಕರರಿಗೆ 2 ತಿಂಗಳ ಸಂಬಳವನ್ನು ಚೆಕ್ ಮೂಲಕ ನೀಡಲಾಗಿತ್ತು. ಆ ನಂತರದಿಂದ ಇಲ್ಲಿಯವರೆಗೆ ಹಾಸ್ಟೆಲು ಮೇಲ್ವಿಚಾರಕರ ಮೂಲಕ ಸಂಬಳ ನೀಡಲಾಗುತ್ತದೆ. ಅವರು ಎಷ್ಟು ಕೊಡುತ್ತಾರೋ ಅಷ್ಟಕ್ಕೆ ನೌಕರರು ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಪ್ರಶ್ನೆ ಮಾಡಿದರೆ ಕೆಲಸದಿಂದ ತೆಗೆದುಹಾಕುವ ಬೆದರಿಕೆ ಹಾಕಲಾಗುತ್ತದೆ.

ಚಿಂಚೋಳಿ ತಾಲ್ಲೂಕಿನಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ನಡೆಸುತ್ತಾ ಬಂದಿರುವ ಹೋರಾಟಗಳಿಂದ ಪ್ರಭಾವಿತರಾದ ಈ ಹಾಸ್ಟೆಲು ನೌಕರರು ಚಿಂಚೋಳಿಯಲ್ಲಿರುವ ಸಿಪಿಐ(ಎಂ) ಆಫೀಸಿಗೆ ಬಂದು ಮುಖಂಡರಾದ ಭೀಮಶೆಟ್ಟಿ ಯಂಪಳ್ಳಿಯವರನ್ನು ಭೇಟಿಯಾಗಿ ತಮ್ಮ ಗೋಳನ್ನು ತೋಡಿಕೊಂಡಿದ್ದಾರೆ. ಮಾತ್ರವಲ್ಲ ತಮ್ಮ ಹೋರಾಟಕ್ಕೆ ಮಾರ್ಗದರ್ಶನ ಹಾಗೂ ನೇತೃತ್ವ ನೀಡಲು ಕೋರಿದ್ದಾರೆ. ಅನಂತರ ಚಿಂಚೋಳಿ ತಾಲ್ಲೂಕಿನ ನೌಕರರ ಸಂಘಟನೆಯನ್ನು ಏರ್ಪಡಿಸಿ ಹಾಸ್ಟೆಲು ದಿನಗೂಲಿ ನೌಕರರ ಸಂಘಟನೆಯನ್ನು ಕಟ್ಟುವ ಹಾಗೂ ತಮ್ಮ ಬೇಡಿಕೆಗಳಿಗಾಗಿ ಹೋರಾಟ ಮಾಡುವ ಕುರಿತು ಚರ್ಚಿಸಿದ್ದಾರೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಹೋಗಿ ಸಾಧ್ಯವಾದಷ್ಟು ಹಾಸ್ಟೆಲುಗಳಿಗೆ ಭೇಟಿ ಕೊಟ್ಟು ಸಂಘಟನೆಯನ್ನು ಕಟ್ಟುವ ಕುರಿತು ಪ್ರಚಾರ ಮಾಡಲು ನಿರ್ಧರಿಸಿದ್ದಾರೆ. ಜುಲೈ 14 ರಂದು ಜಿಲ್ಲಾ ಪಂಚಾಯತ್ ಕಾರ್ಯಾಲಯದ ಎದುರುಗಡೆ ಸಾಮೂಹಿಕ ಧರಣಿ ನಡೆಸಿ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ತಿರ್ಮಾನಿಸಿದ್ದಾರೆ. ಸದ್ಯದ ತೀರ್ಮಾನಗಳ ಜಾರಿಗಾಗಿ ಸ್ಥಳದಲ್ಲೇ 4,500 ರೂ ಗಳನ್ನು ಸಂಗ್ರಹಿಸಿದ್ದಾರೆ. ತೀರ್ಮಾನದಂತೆ ಭೀಮಶೆಟ್ಟಿ ಯಂಪಳ್ಳಿ ಅವರ ನೇತೃತ್ವದಲ್ಲಿ ಸೇಡಂ, ಚಿತ್ತಾಪೂರ, ಜೇವರ್ಗಿ, ಅಫಜಲ್‌ಪುರ, ಗುಲ್ಬರ್ಗಾ, ಆಳಂದ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ 4 ದಿನಗಳ ಕಾಲ ಸಂಚರಿಸಿ ಸುಮಾರು 50 ಹಾಸ್ಟೆಲುಗಳಿಗೆ ಭೇಟಿಕೊಟ್ಟು ಧರಣಿಯಲ್ಲಿ ಭಾಗವಹಿಸಲು ನೌಕರರಿಗೆ ಮನವಿ ಮಾಡಿದ್ದಾರೆ.

ಈ ಪ್ರಯತ್ನದ ಭಾಗವಾಗಿ ಜುಲೈ 16 ರ ಧರಣಿ ಯಶಸ್ವಿಯಾಗಿ ನಡೆದಿದೆ. ಮನವಿಯನ್ನು ಸ್ವೀಕರಿಸಿದ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನೌಕರರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವ ಭರವಸೆಯನ್ನು ಕೊಟ್ಟಿದ್ದಾರೆ. ಮಾತ್ರವಲ್ಲ ತಿಂಗಳ ಸಂಬಳವನ್ನು ಚೆಕ್ ಮೂಲಕವೇ ಸಂದಾಯ ಮಾಡುವ ಕ್ರಮವನ್ನು ಪುನಃ ಆರಂಭಿಸುವುದಾಗಿ ಹೇಳಿದ್ದಾರೆ. ತಮ್ಮ ಹೋರಾಟಕ್ಕೆ ಇತರ ಸಂಘಟನೆಗಳಿಂದ ದೊರೆತ ಬೆಂಬಲದಿಂದ ಉತ್ಸಾಹಿತರಾಗಿರುವ ನೌಕರರು ಸಂಘಟನೆಯನ್ನು ಇತರ ಜಿಲ್ಲೆಗಳಿಗೂ ವಿಸ್ತರಿಸಿ ಸಂಘಟಿತ ಹೋರಾಟದ ಮೂಲಕ ನ್ಯಾಯ ಪಡೆಯಲು ನಿರ್ಧರಿಸಿದ್ದಾರೆ. ತಮ್ಮ ಸೇವೆಯನ್ನು ಕಾಯಂಗೊಳಿಸಿ ಎನ್.ಜಿ.ಓ.ಗಳ ಮೂಲಕ ದುಡಿಸುವುದನ್ನು ಕೊನೆಗೊಳಿಸುವಂತೆ ಆಗ್ರಹಿಸಿ ಇದೇ ಆಗಸ್ಟ್ 4 ರಂದು ಬೆಂಗಳೂರಿನಲ್ಲಿ ಸಂಬಂಧಪಟ್ಟ ಇಲಾಖೆಯ ಸಚಿವರಿಗೆ ಮನವಿಯೊಂದನ್ನು ಸಲ್ಲಿಸಲು ತೀರ್ಮಾನಿಸಲಾಗಿದೆ.

ದಾವಲ್‌ಸಾಬ್. ನದಾಫ್.

ಸಾಂಕ್ರಾಮಿಕ ರೋಗಗಳ ಕುಣಿಕೆಯಲ್ಲಿ...

ಪುಟ 3 ರಿಂದ

ಪ್ರಚಾರದಂತಹ ಕಾರ್ಯಕ್ರಮ ಹಾಕಿಕೊಳ್ಳ ಬಹುದೇ ಹೊರತು ಚಿಕಿತ್ಸೆ ಕೊಡಿಸಲು ಸಾಧ್ಯವಿಲ್ಲ, ತಮ್ಮ ಕೆಲಸವೂ ಅದಲ್ಲ' ಎಂದೇ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ಹೇಳುತ್ತಾರೆ. ಈ ಖಾಯಿಲೆ ವ್ಯಾಪಕವಾಗಿ ಹಬ್ಬಲು ಅಶುಚಿತ್ವವೂ ಪ್ರಮುಖ. ಆದರೆ ಶುಚೀಕರಿಸುವ ಕೆಲಸವನ್ನು ಬಹುತೇಕ ಖಾಸಗೀಕರಿಸಿದ್ದು, ಹೆಚ್ಚಿನ ಹಣವೂ, ಅಗತ್ಯ ಸಿಬ್ಬಂದಿಯೂ ಇಲ್ಲದೇ ನಿರ್ಲಕ್ಷ್ಯಕ್ಕೆ ಈಡಾಗಿದೆ. ಇಂತಹ ಸ್ಥಿತಿಯಲ್ಲಿ ರಾಜ್ಯ ಸರಕಾರದ ಸಚಿವರು ವ್ಯಾಪಕ ಮುಂಜಾಗರೂಕತಾ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದೇನೆಂದು ಹೇಳುತ್ತಾರೆ. ಹೇಗಿದೆ ಜವಾಬ್ದಾರಿ ನಿಭಾವಣೆ!. ಜನರು ಸುಲಭವಾಗಿ ಸಾಯಲು ಇದಕ್ಕಿಂತ ಉತ್ತಮ ಅವಕಾಶ ಬೇರೆ ಬೇಕೆ?!.

ಉದಾರೀಕರಣದ ಹೆಮ್ಮಾರಿಗೆ ಬಲಿಗಳು

'ಇದಕ್ಕೆಲ್ಲಾ ಹಣ ಎಲ್ಲಿದೆ' ಯೆಂದೇ ಇವರು ಪ್ರಶ್ನಿಸುತ್ತಾರೆ. ಇಲ್ಲಿ ಮೂಲಭೂತ ಪ್ರಶ್ನೆಯೆಂದರೆ ಮೆದುಳು ಜ್ವರ, ಹಂದಿ ಜ್ವರವೆನ್ನಲಾಗುವ ಹೆಚ್1.ಎನ್1, ಡೆಂಗ್ಯೂ ಮುಂತಾದ ಮಾರಣಾಂತಿಕ ಸಾಂಕ್ರಾಮಿಕ ರೋಗಗಳ ತಡೆಗೆ, ಶುಶ್ರೂಷೆಗೆ ಮತ್ತು ಪ್ರಾಥಮಿಕ ಆರೋಗ್ಯದ ರಕ್ಷಣೆಗೆ ಸರಕಾರಗಳು ಅದೆಷ್ಟು ಬದ್ಧವಾಗಿವೆ ?. ಉದಾರೀಕರಣದ ನೀತಿಗಳ ಹೊಡೆತಕ್ಕೆ ಮೊದಲ ಬಲಿಗಳೇ ಸಾರ್ವಜನಿಕ ಆರೋಗ್ಯ–ಶಿಕ್ಷಣ, ಸಮಾಜ ಕಲ್ಯಾಣ ರಂಗಗಳು. ಹೀಗಾಗಿ ಸರಕಾರಗಳು ಆಯ–ವ್ಯಯದಲ್ಲಿ ಅಗತ್ಯ ಪ್ರಮಾಣದ ಹಣಕಾಸು ವಂಚಿಸದೇ ಈ ಸೇವೆಗಳನ್ನು ಖಾಸಗೀಕರಿಸುತ್ತಾ ಹೋಗುತ್ತಿದೆ. ರಾಜ್ಯದಲ್ಲಿ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಧಿಕಾರದಲ್ಲಿರುವ ಬಿಜೆಪಿ ತನ್ನ ಪಾಲಿನ ಹೊಣೆಯನ್ನೇ ಮರೆತು ಜನ ಕೊಟ್ಟ ಅಧಿಕಾರವನ್ನು ದುರ್ಬಳಕೆ ಮಾಡುತ್ತಾ ಕೇವಲ ಸಂಪನ್ಮೂಲಗಳ ಲೂಟಿ ಹೊಡೆಯುವುದರಲ್ಲೇ ಮಗ್ನವಾಗಿದೆ. ಶುಚಿತ್ವದ ವಿಷಯದಲ್ಲಿ ಬಹುತೇಕ ನಗರ, ಪಟ್ಟಣಗಳ ಸ್ಥಿತಿ ಒಂದೇ. ಅದರಲ್ಲೂ ಬೆಂಗಳೂರು ಮಹಾನಗರವೋ ಆಧುನಿಕ ಕೊಳಚೆ ಪ್ರದೇಶವಾಗಿದೆ.

ಇದನ್ನು ಬರೆಯುತ್ತಿರುವಾಗಲೇ ಬೆಂಗಳೂರಿನ ಚಿನ್ಮಯ ಆಸ್ಪತ್ರೆಯಲ್ಲಿ ಮತ್ತೊಬ್ಬ ಮಹಿಳೆ ಸತ್ತ ಸುದ್ದಿ ಬಂದಿದೆ. ಹೀಗೆ ಡೆಂಗ್ಯೂ ಜ್ವರದಿಂದ ಸಾವು–ರೋಗ ಹಬ್ಬುತ್ತಿರುವ ಪ್ರಕ್ರಿಯೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಸರಕಾರ ನೈರ್ಮಲ್ಯ ಕಾಪಾಡಲು, ಸೊಳ್ಳೆಗಳ ಮೂಲಕ ವೈರಸ್ ಪ್ರಸಾರ ತಡೆಯುವ ಕ್ರಮಗಳು ಅಗತ್ಯ. ಈ ಗಮನ ನೀಡುವಾಗಲೇ ಸಮಗ್ರ ಯೋಜನೆ ಜಾರಿಗೆ ಹೆಚ್ಚಿನ ಹಣ ನೀಡಬೇಕು. ತಪಾಸಣೆಗೆ ಜಿಲ್ಲಾ–ತಾಲೂಕು ಹಾಗೂ ಪ್ರಾಥಮಿಕ ಕೇಂದ್ರಗಳಲ್ಲಿ ಪ್ರಯೋಗಾಲಯಗಳನ್ನು (ಗ್ರಾಮಾಂತರದಲ್ಲಿ ಕನಿಷ್ಟ ರಕ್ತ ಸಂಗ್ರಹ ಕೇಂದ್ರಗಳು)ಆರಂಭಿಸಬೇಕು. ಉಚಿತ ಔಷದೋಪಚಾರ, ಶುಶ್ರೂಷೆ ಸಿಗಬೇಕು.

ಸರಕಾರವೇ ರೋಗ ಪೀಡಿತವಾದಾಗ?

ಈಗ ಮತ್ತೆ, ಮತ್ತೇ ಏಳುವ ಪ್ರಶ್ನೆಯೆಂದರೆ ಈ ಸರಕಾರದ ಕಾಳಜಿ ಎಂತಹುದು? ಈ ಹಿಂದೆ 2010ರಲ್ಲಿ ಡೆಂಗ್ಯೂ, ಚಿಕೂನ್ ಗುನ್ಯಾದಂತಹ ರೋಗಗಳು ಸಾಂಕ್ರಾಮಿಕವಾಗಿ ಜನತೆಯನ್ನು ಕಾಡುತ್ತಿದ್ದಾಗ ಆರೋಗ್ಯ ಸಚಿವ ಶ್ರೀರಾಮುಲು ಆಗಲೀ, ಸರಕಾರವಾಗಲೀ ಗಂಭೀರ ಗಮನವನ್ನೇ ಕೊಡಲಿಲ್ಲ. ಈಗಲೂ ಮುಖ್ಯಮಂತ್ರಿಗಳು, ಮಂತ್ರಿಗಳು ಬದಲಾದರೂ ಪ್ರವೃತ್ತಿ ಬದಲಾಗಿಲ್ಲ. ನೂತನ ಮುಖ್ಯಮಂತ್ರಿಗಳಾದರೂ ಅಗತ್ಯ ನೆರವು ನೀಡಿ ಇಲಾಖೆಗೆ ಚಾಟಿ ಬೀಸಿ ಕೆಲಸಕ್ಕೆ ಇಳಿಸಲು ಕ್ರಮವಹಿಸುತ್ತಿಲ್ಲ. ನೂತನ ಆರೋಗ್ಯ ಸಚಿವ ಸದನದ ಕಲಾಪಗಳಿಗೂ ಹಾಜರಾಗದೇ , ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ನೀಡಲೂ ಲಭ್ಯವಾಗದೇ ಸಭಾಧ್ಯಕ್ಷರಿಂದ ಛೀಮಾರಿ ಹಾಕಿಸಿಕೊಂಡ ಪ್ರಸಂಗವು ಅವರ ಬದ್ಧತೆ. ಮತ್ತು ಗಂಭೀರತೆಯ ಕೊರತೆ, ನಿರ್ಲಕ್ಷ್ಯತನವನ್ನು ತೋರಿಸುತ್ತಿದೆ.

ಹೀಗೆ ಒಂದರ್ಥದಲ್ಲಿ ಇಡೀ ಬಿಜೆಪಿ ಸರಕಾರವೇ ಡೆಂಗ್ಯೂ, ಚಿಕೂನ್ ಗುನ್ಯಾ, ಕ್ಯಾನ್ಸರಿನಂತಹ ರೋಗಗಳಿಂದ ಪೀಡಿತವಾಗಿದೆ. ಸರ್ವ ರೋಗಪೀಡಿತ ಸರಕಾರ ಜನತೆಯನ್ನು ರಕ್ಷಿಸುವುದಾದರೂ ಹೇಗೆ? ಆದ್ದರಿಂದ ಈ ಸರಕಾರಕ್ಕೇ ತುರ್ತು ಶಸ್ತ್ರ ಚಿಕಿತ್ಸೆಯ ಅಗತ್ಯ.

ಜನಶಕ್ತಿ
ಕನ್ನಡ ವಾರಪತ್ರಿಕೆ

'ಬರ ಎಂದರೆ ಎಲ್ಲರಿಗೂ ಇಷ್ಟ' ಅಂತ ಅಂತಾರೆ ಖ್ಯಾತ ಪರ್ತಕರ್ತ ಪಿ. ಸಾಯಿನಾಥ್. ಮುಂದಿನ ಚುನಾವಣೆ ಗೆದ್ದು ಮತ್ತೆ ಕುರ್ಚಿ ಹಿಡಿಯಬೇಕು ಎಂದುಕೊಂಡು ಕುರ್ಚಿಗಣ್ಣಾಗಿರುವವರಿಗೆ ಈಗ ಬರದ ವಿಷಯ ಸಹಾಯಕ್ಕೆ ಬರುತ್ತದೆಂಬ ನಿರೀಕ್ಷೆ ಇದೆ.

ನಿತ್ಯಾನಂದಸ್ವಾಮಿ

ಚುನಾವಣೆಯತ್ತ ತಿರುಗಿದ ಬರ ರಾಜಕಾರಣ

ಕೊನೆಗೂ ರಾಜ್ಯದಲ್ಲಿ 'ಬರ' ರಾಜಕಾರಣ ಚುನಾವಣೆಯತ್ತ ಮುಖಮಾಡಿದೆ. ವಿಧಾನ ಸಭೆಯಲ್ಲಿ ಆಡಳಿತ ಪಕ್ಷದವರು ಮತ್ತು ಪ್ರತಿಪಕ್ಷದವರು ಮೂರು ದಿನಗಳ ಕಾಲ ಬರದ ತೀವ್ರತೆ ಕುರಿತು ನಡೆಸಿದ ಬಿಸಿ ಬಿಸಿ ಚರ್ಚೆಯ ನಂತರ ಸದನಕ್ಕೆ ಉತ್ತರ ನೀಡಿದ ಮುಖ್ಯ ಮಂತ್ರಿ ಜಗದೀಶ್ ಶೆಟ್ಟರ್ 'ರಾಜ್ಯದ ಕೃಷಿ ಸಹಕಾರ ಸಂಘಗಳಲ್ಲಿ ರೈತರು ಪಡೆದ ಬೆಳೆಸಾಲ ಮತ್ತು ಅದರ ಬಡ್ಡಿ ಸೇರಿದಂತೆ 25 ಸಾವಿರ ರೂ ವರೆಗಿನ ಸಾಲವನ್ನು ಮನ್ನಾ ಮಾಡಲು ನಿರ್ಧರಿಸಿದ್ದೇವೆ ಎಂದು ಘೋಷಿಸಿದರು. 2011 ರ ಅಗಸ್ಟ್ 1 ರಿಂದ 2012 ಜೂನ್ 30 ರ ವರಗೆ ಪಡೆದ ಸಾಲಗಳನ್ನು ಮರುಪಾವತಿ ಮಾಡದೇ ಉಳಿದಿರುವ ಸಾಲಕ್ಕೆ ಮಾತ್ರ ಈ ಯೋಜನೆ ಅನ್ವಯವಾಗಲಿದೆ ಎಂದು ಹೇಳಿದ ಅವರು ಈ ವಿಶೇಷ ಯೋಜನೆಯಿಂದ ರಾಜ್ಯಾದ್ಯಂತ 16 ಲಕ್ಷ ರೈತ ಕುಟುಂಬಗಳಿಗೆ ಪ್ರಯೋಜನವಾಗಲಿದೆ. ಇದಕ್ಕಾಗಿ ಸುಮಾರು 3,500 ಕೋಟಿ ರೂ ಅನುದಾನ ಬಿಡುಗಡೆ ಮಾಡಲಾಗುವುದು ಎಂದರು. ಸರ್ಕಾರದ ಈ ನಿರ್ಣಯವನ್ನು ನಿರೀಕ್ಷೆಯಂತೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಸ್ವಾಗತಿಸಿದರು. ಆದರೆ ಸರ್ಕಾರದ ಈ ನಿರ್ಧಾರಕ್ಕೆ ಪ್ರತಿಪಕ್ಷದ ನಾಯಕ ಸಿದ್ಧರಾಮಯ್ಯ ತೀವ್ರ ಆಕ್ಷೇಪ ವ್ಯಕ್ತಪಡಿಸಿ 'ಇದು ರೈತರ ಮೂಗಿಗೆ ತುಪ್ಪ ಸವರುವ ಪ್ರಯತ್ನ' ಎಂದು ಟೀಕಿಸಿದರು. ಜೆ.ಡಿ(ಎಸ್) ನಾಯಕ ಎಚ್.ಡಿ.ರೇವಣ್ಣ 'ಇದು ಚುನಾವಣೆ ಗಿಮಿಕ್' ಎಂದು ಅಣಕಿಸಿದ್ದಾರೆ.

ಹಿಂದಿನ ದಿನ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕನಂತೆ, ಸರ್ಕಾರ ಮತ್ತು ಅಧಿಕಾರಿಗಳ ವೈಫಲ್ಯಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಯಡಿಯೂರಪ್ಪ ಅವರ ಮಾತುಗಳನ್ನು ಪರಿಶೀಲಿಸಿದರೆ ರಾಜ್ಯದಲ್ಲಿ ಚುನಾವಣಾ ಪರ್ವ ಆರಂಭವಾದಂತೆ ಭಾಸವಾಗುತ್ತಿದೆ.

ಚುನಾವಣೆ ಮೇಲೆ ಕಣ್ಣು

"ಮುಂದಿನ ಬಜೆಟ್‌ಗೂ ಮೊದಲೇ ಚುನಾವಣೆ ಬರಬಹುದು. ಜನತೆಗೆ ಹೊಸ ಅಶ್ವಾಸನೆ, ಹಣಕಾಸಿನ ನೆರವು ನೀಡಲಾಗದ ಸಂದಿಗ್ಧ ಪರಿಸ್ಥಿತಿ ಎದುರಾಗಬಹುದು. ಆದ್ದರಿಂದ ಈಗಾಗಲೇ ಮಂಡನೆಯಾಗಿರುವ ಒಂದು ಲಕ್ಷ ಕೋಟಿ ರೂಪಾಯಿ ಬಜೆಟ್‌ನಲ್ಲಿ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ರೈತರಿಗಾಗಿ ಮೀಸಲಿಡಬೇಕು" ಎಂದು ಹೇಳಿದ್ದ ಯಡಿಯೂರಪ್ಪನವರು ಅಷ್ಟಕ್ಕೆ ಸುಮ್ಮನಾಗದೆ ಆ ರಾತ್ರಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು ತಮ್ಮ ಮನೆಗೆ ಕರೆಸಿಕೊಂಡು ಇದೇ ವಿಷಯದಲ್ಲಿ ಒತ್ತಡ ಹೇರಿದ್ದು ವರದಿಯಾಗಿದೆ. ಇದರ ತಾತ್ಪರ್ಯ ಇಷ್ಟೇ. ಯಾವ ಕ್ಷಣದಲ್ಲಾದರೂ ಚುನಾವಣೆ ಬರಬಹುದು. ಮತದಾರರಿಗೆ ಆಮಿಷ ಒಡ್ಡಲು ವಿಳಂಬ ಮಾಡಬಾರದು. ಸಾಲ ಮನ್ನಾ ಮಾಡಲಾಗಿದೆ ಎಂದು ಮತದಾರರ ಮುಂದೆ ಹೋದರೆ ಮುಗ್ಧ ಮತದಾರರು ಹಿಂದಿನ ವಿಶ್ವಾಸ ದ್ರೋಹವನ್ನೆಲ್ಲಾ ಮರೆತು ಆಶೀರ್ವಾದ ಮಾಡುತ್ತಾರೆ ಎಂಬುದೇ ಯಡಿಯೂರಪ್ಪ ಅವರು ಜಗದೀಶ್ ಶೆಟ್ಟರ್ ಅವರಿಗೆ ಹೇಳಿದ 'ಅನುಭವ'ದ ಪಾಠ!



ಭೀಕರ ಬರ

1971 ರ ಬಳಿಕ ರಾಜ್ಯದಲ್ಲಿ ಭೀಕರ ಬರ ಕಾಣಿಸಿಕೊಂಡಿದೆ. ಕಳೆದ ವರ್ಷದ ಹಿಂಗಾರು ವೈಫಲ್ಯದ ಜತೆಗೆ, ಈ ಸಲದ ಮುಂಗಾರು ಮಳೆಯು ಕೈಕೊಟ್ಟ ಪರಿಣಾಮವಾಗಿ ರೈತರ ಮತ್ತು ಕೃಷಿ ಕೂಲಿಕಾರರ ಬದುಕು ಅತಂತ್ರವಾಗಿದೆ. 70 ಲಕ್ಷ ಹೆಕ್ಟೇರ್ ಬದಲಿಗೆ ಕೇವಲ 20 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆಯಾಗಿದೆ. ಈ ಪೈರೂ ಶೇ 90 ರಷ್ಟು ಒಣಗಿಹೋಗಿದೆ. ನೀರಾವರಿ ಪ್ರದೇಶಗಳಲ್ಲೂ ಬರ ಆವರಿಸಿದೆ. ಜಲಾಶಯಗಳು ಬರಿದಾಗಿ ಕಾಲುವೆಗಳಲ್ಲಿ ನೀರು ಹರಿಯದೆ ಇರುವುದರಿಂದ ಸಾವಿರಾರು ಹೆಕ್ಟರ್ ಬತ್ತದ ಗದ್ದೆಗಳಲ್ಲಿ ಸಸಿ ನಾಟಿ ಮಾಡಲಾಗಿಲ್ಲ. ಸಮಸ್ಯೆ ಇಷ್ಟೊಂದು ಗಂಭೀರ ಇರುವಾಗ ಸರ್ಕಾರ ಕೇವಲ ರೈತರ ಹತ್ತು ತಿಂಗಳ ಬೆಳೆಸಾಲವನ್ನು ಮನ್ನಾ ಮಾಡುವ ಘೋಷಣೆ ಮಾಡಿ ಕೈತೊಳೆದುಕೊಳ್ಳಲು ಮುಂದಾಗಿದೆ.

ರೈತರ ಎಲ್ಲಾ ಸಾಲ ಮನ್ನಾಮಾಡಿ

ಕೇವಲ 25 ಸಾವಿರ ರೂಪಾಯಿವರೆಗಿನ ಸಾಲವನ್ನು ಮಾತ್ರ ಮನ್ನಾ ಮಾಡುವುದರಿಂದ ರೈತರಿಗೆ ಹೆಚ್ಚೇನು ಪ್ರಯೋಜನ ಆಗುವುದಿಲ್ಲ. ಅದಕ್ಕಿಂತ ಹೆಚ್ಚು ಸಾಲ ಮಾಡಿದ ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಅಡ್ಡಿ ಇಲ್ಲ ಎನ್ನುವಂತಿದೆ ಸರ್ಕಾರ ! ಅಷ್ಟೇ ಅಲ್ಲ. ಈಗಾಗಲೇ ಕಷ್ಟಪಟ್ಟು ಸಾಲ ಮರುಪಾವತಿ ಮಾಡಿದ ರೈತರಿಗೂ ಇದರಿಂದ ಲಾಭ ಸಿಗಬೇಕು. ಕೃಷಿ ಸಹಕಾರ ಸಂಘಗಳಿಂದ ರೈತರು ಪಡೆದಿರುವ ಸಾಲಮನ್ನಾದಿಂದ ಬರ ಪೀಡಿತ ಪ್ರದೇಶಗಳ ಎಲ್ಲಾ ರೈತರಿಗೆ ಅನುಕೂಲ ಆಗುವುದೇ ಇಲ್ಲ. ಈ ಸಾಲ ಮನ್ನಾ ಯೋಜನೆ ಹಳೆಯ ಸಾಲಕ್ಕೆ ಅನ್ವಯವಾಗುವುದಿಲ್ಲ. ಸತತ ಎರಡು ವರ್ಷಗಳ ಬರಗಾಲದಿಂದ ಹಾನಿ ಅನುಭವಿಸಿದ ರೈತರಿಗೆ ಈ ಯೋಜನೆ ಅನ್ವಯಗೊಳಿಸದಿರುವುದು ಯಾವ ನ್ಯಾಯ ?

ನೋಟೀಸ್ ನೀಡಲಾಗುತ್ತಿದೆ

ಬಲವಂತದ ಸಾಲ ವಸೂಲಿ ಮಾಡಬಾರದು ಎಂಬ ಆದೇಶ ಇದ್ದರೂ ಕಟಬಾಕಿ ರೈತರಿಗೆ ಕೋರ್ಟ್ ಮೂಲಕ ನೋಟಿಸ್ ನೀಡಲಾಗುತ್ತಿದೆ. ಸಾಲದ ಬಾಧೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಸಂಖ್ಯೆ ಏರುತ್ತಾ ಇದೆ. ಖಾಸಗಿ ಸಾಲಕ್ಕೆ ಸಿಕ್ಕಿ ಹಾಕಿಕೊಂಡಿರುವ ರೈತರಿಗೂ ನೆರವು ನೀಡುವ ಬಗ್ಗೆ ಸರ್ಕಾರ ಪ್ರಾಮಾಣಿಕವಾಗಿದ್ದರೆ, ಅವರ ಎಲ್ಲಾ ಸಾಲವನ್ನು ಒಂದು ಬಾರಿಯ ಕ್ರಮವಾಗಿ ಮನ್ನಾ ಮಾಡಲು ಸರ್ಕಾರ ನಿರ್ಧರಿಸಬೇಕು. ಅದರಂತೆಯೇ ಕಳೆದ ಎರಡು ವರ್ಷಗಳಿಂದ ಬೆಳೆ ಹಾನಿ ಅನುಭವಿಸಿದ ರೈತರಿಗೆ ಎಕರೆಗೆ ಕನಿಷ್ಠ 5,000 ರೂಪಾಯಿಯಿಂದ ಗರಿಷ್ಠ 10,000 ಸಾವಿರ ರೂಪಾಯಿವರೆಗೆ ಪರಿಹಾರ ನೀಡಲು ಸರ್ಕಾರ ಮುಂದಾಗಬೇಕು. ರೈತರ ಸಾಲಮನ್ನಾ ಮಾಡುವಾಗ ಬರಗಾಲದಿಂದ ಅತಿಹೆಚ್ಚು ಸಂಕಷ್ಟಗಳಿಗೆ ಒಳಗಾಗುವ ಕೃಷಿ ಕೂಲಿಕಾರ ಕುಟುಂಬಗಳ ಸಾಲವನ್ನೂ ಮನ್ನಾ ಮಾಡಲು ಮರೆಯಬಾರದು.

ಗೋರಕ್ಷಣೆಯ ಬಗ್ಗೆ ಬಾರೀ ಕಾಳಜಿ ವ್ಯಕ್ತಪಡಿಸುತ್ತಿದ್ದ ಆರ್‌ಎಸ್‌ಎಸ್ ಒಸ್ಮೆಲೆಯ ಬಿಜೆಪಿಯವರಿಗೆ ರೈತರು ತಮ್ಮ ದನಕರುಗಳನ್ನು ಸಾಕಲಾಗದೆ ಅಗ್ಗದ ಬೆಲೆಗೆ ಮಾರಾಟ ಮಾಡುತ್ತಿರುವುದು ಕಣ್ಣಿಗೆ ಬೀಳದಿರುವುದು ದೊಡ್ಡ ವ್ಯಂಗ್ಯ. ಗೋಶಾಲೆಗಳನ್ನು ತೆರೆದು. ಗೋವುಗಳಿಗೆ ಸರಿಯಾಗಿ ಮೇವು. ನೀರು ಒದಗಿಸಲು ಸರ್ಕಾರಕ್ಕೆ ಸಾಧ್ಯವಾಗದಿರುವುದರಿಂದ ಅದರ ಬದಲಾಗಿ ರೈತರಿಗೆ ಆಯಾ ಗ್ರಾಮ ಪಂಚಾಯತಿಗಳ ಮೂಲಕ ಮೇವು ಸರಬರಾಜು ಮಾಡಲು ವ್ಯವಸ್ಥೆ ಮಾಡಬೇಕು.

ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಕಡ್ಡಾಯವಾಗಿ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಬೇಕು. ಯೋಜನೆಯ ಅನುಷ್ಠಾನವನ್ನು ಭ್ರಷ್ಟಾಚಾರ ಮುಕ್ತಗೊಳಿಸಲು ಸರ್ಕಾರ ತನ್ನ ಬದ್ಧತೆಯನ್ನು ಪ್ರದರ್ಶಿಸಬೇಕು. ಎಲ್ಲಾ ಕೆರೆಗಳ ಹೂಳೆತ್ತುವ ಕೆಲಸಕ್ಕೆ ಆದ್ಯತೆ ನೀಡಬೇಕು. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿದವರ ಬಾಕಿ ಕೂಲಿ ಹಣ ಸಂದಾಯ ಮಾಡಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ಬರ ಪೀಡಿತ ಪ್ರದೇಶಗಳ ಬಡ ರೈತ ಮತ್ತು ಕೃಷಿ ಕೂಲಿಕಾರ ಕುಟುಂಬಗಳಿಗೆ ಯಾವುದೇ ಷರತ್ತು ವಿಧಿಸದೆ ಉಚಿತ ರೇಷನ್ ವಿತರಣೆ ಮಾಡಬೇಕು. ಜನಗಳಿಗೆ ಮತ್ತು ದನಗಳಿಗೆ ಕುಡಿಯುವ ನೀರು ಪೂರೈಸಲು ಮೊದಲ ಆದ್ಯತೆ ನೀಡಬೇಕು. ಖಾಸಗಿ ಬಾವಿ ಅಥವಾ ಇತರ ನೀರಿನ ಮೂಲಗಳಿಂದ ಸಾರ್ವಜನಿಕ ನೀರು ಪೂರೈಕೆಗೆ ನೀರನ್ನು ಪಡೆಯಲು ಕ್ರಮವಹಿಸಬೇಕು. ಬಾಟಲಿಗಳಲ್ಲಿ ನೀರು ಪ್ಯಾಕ್ ಮಾಡಿ ಮಾರಾಟ ಮಾಡಿ ಬಾರೀ ಲಾಭಗಿಟ್ಟಿಸಿಕೊಳ್ಳುತ್ತಿರುವ ಕಂಪನಿಗಳ ಮೇಲೆ ಕಡಿವಾಣ ಹಾಕಬೇಕು.

ಸರ್ವಪಕ್ಷ ಉಸ್ತುವಾರಿ ಸಮಿತಿ ರಚಿಸಿ

ಎಲ್ಲಕ್ಕೂ ಮುಖ್ಯವಾಗಿ ಬರ ನಿರ್ವಹಣೆ ಭ್ರಷ್ಟಾಚಾರ ಮುಕ್ತವಾಗಿ ನಡೆಯುವಂತಾಗಲೂ ವಿವಿಧ ಹಂತದ ಸರ್ವಪಕ್ಷ ಉಸ್ತುವಾರಿ ಸಮಿತಿಗಳನ್ನು ತುರ್ತಾಗಿ ರಚಿಸಬೇಕು. ಇದನ್ನು ಮಾಡುವ ಬದಲು ಸರ್ಕಾರ ಬರ ನಿರ್ವಹಣೆಯನ್ನು ಚುನಾವಣಾ ಗಿಮಿಕ್ ಮಟ್ಟಕ್ಕೆ ಇಳಿಸಲು ಹೊರಟರೆ ಮುಂಬರುವ ಚುನಾವಣೆಯಲ್ಲಿ ಜನ ಇವರನ್ನು ಹುಚ್ಚುನಾಯಿಯನ್ನು ಅಟ್ಟಾಡಿಸುವಂತೆ ಬೆನ್ನು ಹತ್ತದೆ ಇರಲಾರರು. ●

ಮಠಾಧಿಪತಿಗಳು ತಮ್ಮ ಕೆಲಸ ಬಿಟ್ಟು ರಾಜಕಾರಣಕ್ಕೆ ಕೈಹಾಕುತ್ತಿದ್ದಾರೆ. ಯಾರಿಗೆ ಸಚಿವ ಸ್ಥಾನ ನೀಡಬೇಕು ಎಂಬ ಜಾತಿ ರಾಜಕಾರಣದಲ್ಲಿ ಮುಳುಗಿದ್ದಾರೆ.

– ಸಂತೋಷ ಹೆಗ್ಡೆ,
ನಿವೃತ ಲೋಕಾಯುಕ್ತ

ದಕ್ಷ ಆಡಳಿತ

ಈ ನಮ್ಮ ಆಡಳಿತ ಅತ್ಯಂತ ದಕ್ಷ
ಸ್ವಿಸ್ ಬ್ಯಾಂಕ್ ದೋಳಗುಂಟು ವಿದೇಶಿ ಭಿಕ್ಷ
ಈ ರೀತಿ ಪ್ರಜೆಗಾಗಿ ಕೂಡಿಟ್ಟ ಗಂಟು
ಗಣಿ, ಮರ, ಕರ, ಮಣ್ಣುಗಳಲ್ಲೂ ಉಂಟು
– ವಿಡಂಬಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಮನಪಾ ವಿರುದ್ಧ ಮಂಗಳೂರಿನ ಮಹಾಧರಣಿಗೆ ಸಿದ್ಧತೆ



ವರದಿ : ವಾ.ಉ.

ಬಿಜೆಪಿ ಆಡಳಿತದಲ್ಲಿರುವ ಮಂಗಳೂರು ಮಹಾನಗರ ಪಾಲಿಕೆಯ ನಾಲ್ಕೂವರೆ ವರ್ಷಗಳ ಆಡಳಿತ ಒಂದು ದುರಾಡಳಿತವೇ ಸರಿ. ಜನವಿರೋಧಿ ಧೋರಣೆಯ ಜೊತೆಗೆ, ತೀವ್ರ ಥರದ ಭ್ರಷ್ಟಾಚಾರ ಬೃಹದಾಕಾರ ತಾಳಿದೆ. ಬಿಲ್ಡರ್ ಮಾಫಿಯಾಗಳು, ಮರಳು ಮಾಫಿಯಾಗಳ ದಂಡೆ ಬಡವರ, ಮಧ್ಯಮ ವರ್ಗದವರ ಕತ್ತು ಹಿಸುಕುತ್ತಿದೆ.


ಸಮಸ್ಯೆಗಳ ಸಾಲು ಸಾಲು

ಕುಡಿಯುವ ನೀರಿನ ಖಾಸಗೀಕರಣ, ದರ ಏರಿಕೆ, ಅಸಮರ್ಪಕ ಬಿಲ್ ರೀಡಿಂಗ್; ಸುಲಿಗೆಕೋರ ಸ್ವಯಂಘೋಷಿತ ಆಸ್ತಿ ತೆರಿಗೆ; ಅವೈಜ್ಞಾನಿಕ ನಗರಾಭಿವೃದ್ಧಿ ಸಿ.ಡಿ.ಪಿ.ಯೋಜನೆ; ಬಿಲ್ಡರ್ ಮಾಫಿಯಾದ ದಬ್ಬಾಳಿಕೆಗಳು; ಬಡವರಿಗೆ ದಕ್ಕದ ನಿವೇಶನಗಳು, ಕಾಂಕ್ರೀಟೀಕರಣದೊಂದಿಗೆ ಇಲ್ಲವಾದ ಫುಟ್‌ಪಾತ್‌ಗಳು, ಒಳಚರಂಡಿಗಳು; ಸಕಾಲದಲ್ಲಿ ವಿಲೇವಾರಿಗೊಳ್ಳದ ತ್ಯಾಜ್ಯಗಳು; ದಲಿತರ ನಿಧಿಯ ದುರುಪಯೋಗ, ಅಕ್ರಮ ಕಟ್ಟಡಗಳಿಗೆ ಅನುಮತಿ; ಪರಿಹಾರ ಕಾಣದ ಕಸಾಯಿಖಾನೆ ವಿವಾದ, ಹೀಗೆ ಇನ್ನೂ ಕೆಲವು ರಂಗಗಳಲ್ಲಿ ಬಿಜೆಪಿ ಆಡಳಿತವು ವಿಫಲವಾಗಿದೆ. ಮಲೇರಿಯಾ, ಡೆಂಗ್ಯೂ, ಚಿಕೂನ್‌ಗೂನ್ಯಾ ಇತ್ಯಾದಿ ಸೊಳ್ಳೆ ಬಾಧಿತ ರೋಗಗಳು ಈ ಅವಧಿಯಲ್ಲಿ ಹೆಚ್ಚುತ್ತಾ ಸಾಗಿವೆ; ಕಾರಣವೇನೆಂದರೆ ಆರೋಗ್ಯ ಹಾಗೂ ನೈರ್ಮಲ್ಯೀಕರಣಕ್ಕೆ ಕನಿಷ್ಠ ಪ್ರಾಧಾನ್ಯ ನೀಡಲಾಗಿದೆ. ಭ್ರಷ್ಟಾಚಾರದಲ್ಲಿ ಭಾಗಿಯಾದ ಕಾರ್ಪೊರೇಟರುಗಳು, ಅಧಿಕಾರಿಗಳನೇಕರು ಲಕ್ಷಾಧೀಶರಾಗಿದ್ದಾರೆ. ಹೊಟ್ಟೆಪಾಡಿಗಾಗಿ ಬೀದಿ ಬದಿ ವ್ಯಾಪಾರ ಮಾಡುವವರ ಮೇಲೆ ಧಾಳಿ ನಡೆದಿದೆ.

ಬಿಜೆಪಿ ಪಕ್ಷದ ದುರಾಡಳಿತ, ಭ್ರಷ್ಟಾಚಾರ ಮತ್ತು ಜನವಿರೋಧಿ ಧೋರಣೆಗಳ ವಿರುದ್ಧ ಪಾಲಿಕೆಯಲ್ಲಿ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಯಾವೊಂದೂ ಸೊಲ್ಲೆತ್ತದೆ ಒಂದು ಬಗೆಯ ಸಹಭಾಗಿತ್ವ ವಹಿಸಿದೆ. ಜನಸ್ಪಂದಿಯಾದ ಸಿಪಿಐ(ಎಂ) ಮಾತ್ರ ಈ ಹಲವಾರು ಪ್ರಶ್ನೆಗಳಲ್ಲಿ ಪ್ರತಿಭಟನೆಗಳನ್ನು ನಡೆಸುವುದರ ಮೂಲಕ ನಗರಾಡಳಿತವನ್ನು ಎಚ್ಚರಿಸುವ ಕೆಲಸ ಮಾಡುತ್ತಾ ಬಂದಿದೆ. ಕುಡಿಯುವ ನೀರಿನ ದರ ಇಳಿಕೆಗೆ ಯಶಸ್ವಿ ಹೋರಾಟಗಳು, ನಿವೇಶನ ರಹಿತರ ಹಲವು ಪ್ರತಿಭಟನೆಗಳು, ದಲಿತರ ಮೀಸಲು ನಿಧಿ ವಂಚನೆ ವಿರುದ್ಧ ಹೋರಾಟಗಳು, ದಲಿತರ ಹಾಗೂ ಕೊರಗರ ನಿವೇಶನಕ್ಕಾಗಿ ಹೋರಾಟಗಳು, ಕಸಾಯಿಖಾನೆ ವಿಷಯದಲ್ಲಿ ಅಲ್ಪಸಂಖ್ಯಾತರ ಮೇಲೆ ದಾಳಿಯ ವಿರುದ್ಧ ಹೋರಾಟಗಳು, ಬೀದಿ ಬದಿ ವ್ಯಾಪಾರಸ್ಥರ ರಕ್ಷಣೆಗಾಗಿ ನಡೆಸಿದ ಹೋರಾಟಗಳು – ಹೀಗೆ ಹತ್ತು ಹಲವು ಹೋರಾಟಗಳನ್ನು ಸಿಪಿಐ(ಎಂ) ನಗರ ಸಮಿತಿ ಸಂಘಟಿಸಿದೆ. ಆದರೆ ರಾಜ್ಯ ಹಾಗೂ ಪಾಲಿಕೆಯಲ್ಲಿ ಅಧಿಕಾರ ಹೊಂದಿರುವ ದುರಹಂಕಾರದಿಂದ, ಬಿಜೆಪಿ ನಗರ ಪಾಲಿಕೆಯಲ್ಲಿ ತನ್ನ ದುರಾಡಳಿತವನ್ನು ಮುಂದುವರೆಸಿಕೊಂಡು ಬಂದಿದೆ.

ಚಳುವಳಿಯ ತೀರ್ಮಾನ

ಸಿಪಿಐ(ಎಂ) ಮಂಗಳೂರು ನಗರ ಸಮಿತಿಯು ಪಾಲಿಕೆಯ ಬಿಜೆಪಿ ದುರಾಡಳಿತ ಹಾಗೂ ಅದರ ಜನವಿರೋಧಿ ನೀತಿಯನ್ನು ವಿವರವಾಗಿ ಚರ್ಚಿಸಿತು. ಬಜಾಲು ವಾರ್ಡಿನ ಪ್ರತಿನಿಧಿ ಸಿಪಿಐ(ಎಂ)ನ ಏಕೈಕ ಸದಸ್ಯೆ ಜಯಂತಿ ಬಿ.ಶೆಟ್ಟಿ ಏಕಾಂಕಿಯಾಗಿ ಕಾರ್ಪರೇಷನ್ನಿನ ಒಳಗಡೆ ಆಡಳಿತಗಾರರೊಂದಿಗೆ ಸಂಘರ್ಷ ನಡೆಸುವುದರ ಜೊತೆಗೆನೇ, ತಮ್ಮ ವಾರ್ಡಿನಲ್ಲಿ ಗರಿಷ್ಠ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಿದ್ದಾರೆ. ಬಿಜೆಪಿ ನಗರಾಡಳಿತದ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಪರಿಹಾರವೇ ಕಾಣದ ಹಲವು ಪ್ರಶ್ನೆಗಳಿದ್ದು, ಎಲ್ಲ ಪ್ರಶ್ನೆ ಒಳಗೊಳ್ಳುವಂತಹ 'ಮಹಾಧರಣಿ' ಎಂಬ ಪ್ರತಿಭಟನೆಯೊಂದನ್ನು ಆಗಸ್ಟ್ 27 ರಂದು ನಡೆಸುವುದೆಂದು ತೀರ್ಮಾನಿಸಲಾಯಿತು.



ಮಹಾನಗರ ಪಾಲಿಕೆಯ ಅಸಮರ್ಪಕ ತ್ಯಾಜ್ಯ ನಿರ್ವಹಣೆಯ ವಿರುದ್ಧ

ಮಹಾಧರಣಿ ಎಂದರೆ....

ಮಹಾಧರಣಿಯು ನಗರದ ಸಾವಿರಾರು ಮಂದಿಯನ್ನು ಮನಪಾ ಕಚೇರಿಯೆದುರು ಅಣಿನೆರೆಸುವ ಪ್ರತಿಭಟನಾ ಪ್ರದರ್ಶನವಾಗಿರುತ್ತದೆ. ನಗರದ 5 ಮೂಲೆಗಳಿಂದ–ಕಂಕನಾಡಿ,ನಂತೂರು, ಸ್ಟೇಟ್‌ಬ್ಯಾಂಕ್, ಉರ್ವಸ್ಟೋರ್, ಕೂಳೂರು ಮೆರವಣಿಗೆಗಳು ಹೊರಟು ಪಾಲಿಕೆ ಎದುರು ರ್‍ಯಾಲಿಗೊಳ್ಳುವವು; ಕೆಲವು ಗಂಟೆಗಳ ಕಾಲ ಪಾಲಿಕೆ ಎದುರು ಸಾರಿಗೆ ಸ್ಥಬ್ದಗೊಳ್ಳಬಹುದಾದ ಕಾರ್ಯಕ್ರಮ ಇದಾಗಿದೆ. ಮಹಾಧರಣಿವರೆಗಿನ 2 ತಿಂಗಳ ಕಾಲಾವಧಿಯಲ್ಲಿ ನಗರದ ಎಲ್ಲಾ ವಾರ್ಡ್‌ಗಳಲ್ಲಿ ಹೋರಾಟ ಸಮಿತಿಗಳನ್ನು ರಚಿಸಲು ನಗರದ ಪಕ್ಷದ ಶಾಖೆಗಳಿಗೆ ಕರೆಕೊಡಲಾಯಿತು. ಬಿಜೆಪಿ ದುರಾಡಳಿತದ ಮಾಹಿತಿಯನ್ನೊಳಗೊಂಡ ಕರಪತ್ರವನ್ನು ಸಿದ್ಧಪಡಿಸಿ ನಗರದ ಎಲ್ಲಾ ಮನೆಗಳಿಗೂ ತಲಪಿಸುವ ಪ್ರಚಾರಾಂದೋಲನವನ್ನು ನಿರ್ದಿಷ್ಟ ದಿನದಂದು ಆರಂಭಿಸಲು ತೀರ್ಮಾನಿಸಲಾಯಿತು.

ವಿಚಾರ ಸಂಕಿರಣ

ಆಗಸ್ಟ್ 4 ರಂದು ಕುಡಿಯುವ ನೀರಿನ ಖಾಸಗೀಕರಣ ಹಾಗೂ ನೀರಿನ ಪೂರೈಕೆ ಪ್ರಶ್ನೆಗಳ ಸಂಬಂಧ ವಿಚಾರ ಸಂಕಿರಣವೊಂದನ್ನು ಹಮ್ಮಿಕೊಳ್ಳಲಾಗಿದೆ. ಬಳಿಕದ 3 ದಿನಗಳಲ್ಲಿ ನಗರದ 200 ರಸ್ತೆ ಮೂಲೆಗಳಲ್ಲಿ ವಾಹನ ಪ್ರಚಾರ ಜಾಥಾ ನಡೆಯಲಿರುವುದು. ಅಂತಿಮವಾಗಿ ಆಗಸ್ಟ್ 27 ರಂದು 5 ಮೆರವಣಿಗೆಗಳು ಒಗ್ಗೂಡಿ ಮಹಾಧರಣಿ ನಡೆಯಲಿರುವುದು. ಇದು ಈಗ ಆಂಯೋಜಿಸಿರುವ ಜನಾಂದೋಲನದ ಸ್ವರೂಪ.

ಜುಲಾಯಿ 20 ರೊಳಗಾಗಿ ಎಲ್ಲೆಡೆ ವಾರ್ಡ್ ಹೋರಾಟ ಸಮಿತಿಗಳನ್ನು ರಚಿಸಲಾಗಿದೆ. ನಗರ ವ್ಯಾಪ್ತಿಯ ಸಾಮೂಹಿಕ ಸಂಘಟನೆಗಳ ಪ್ರತ್ಯೇಕ–ಪ್ರತ್ಯೇಕ ಸಭೆ ಕರೆದು ವಾರ್ಡು ಹೋರಾಟ ಸಮಿತಿಗಳೊಡನೆ ಸಹಯೋಗದೊಂದಿಗೆ ಕಾರ್ಯಾಚರಿಸುವ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಅಳಪೆ, ಪದವು ಮತ್ತು ಮಂಗಳೂರು ಬೀಡಿ ಕಾರ್ಮಿಕರ ಸಂಘಗಳು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘ, ಬೀದಿ ಬದಿ ವ್ಯಾಪಾರಿಗಳ ಸಂಘ, ಹಮಾಲಿ ಕಾರ್ಮಿಕ ಸಂಘ, ಬಂದರು ಕಾರ್ಮಿಕರ ಸಂಘ, ಮೀನು ಸಾಗಾಟ ಕಾರ್ಮಿಕರ ಸಂಘಗಳ ಸಭೆಗಳನ್ನಲ್ಲದೆ ಮಧ್ಯಮ ವರ್ಗದ ಹಿತೈಷಿಗಳ ಸಭೆ, ಡಿವೈಎಫ್‌ಐ, ಎಸ್‌ಎಫ್‌ಐ ಸದಸ್ಯರ ಸಭೆಗಳನ್ನೂ ನಡೆಯಿಸಿ ಆಂದೋಲನದ ವಿವರಣೆ ನೀಡಲಾಗಿದೆ. ಅಲ್ಲದೆ ಈಗಾಗಲೇ ಕೊಂಚಾಡಿ, ಕಣ್ಣೂರು, ಪಂಜಿಮೊಗರು, ಉರ್ವಸ್ಟೋರ್, ಶಕ್ತಿನಗರ, ಕಂಕನಾಡಿ, ತಣ್ಣೀರುಬಾವಿ, ನಂತೂರು, ಅಳಪೆ, ಜಪ್ಪಿನಮೊಗರು, ಬಜಾಲು – ಈ ಮೊದಲಾದೆಡೆ ದೊಡ್ಡ ಸಂಖ್ಯೆಯಲ್ಲಿ ಪಕ್ಷದ ಬೆಂಬಲಿಗರ ಸಭೆಗಳು ನಡೆದಿದ್ದು, ಅಲ್ಲೆಲ್ಲಾ ಈ ಜನಾಂದೋಲನಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಮಹಾಧರಣಿಯನ್ನು ಅತ್ಯಂತ ಯಶಸ್ವಿಗೊಳಿಸಬೇಕೆಂಬ ದೃಢ ನಿಶ್ಚಯ ವ್ಯಕ್ತವಾಗಿದೆ.

ಮನೆ ಮನೆ ಪ್ರಚಾರ.......

ಜುಲಾಯಿ 22 ರಂದು 18 ವಾರ್ಡು ಹೋರಾಟ ಸಮಿತಿಗಳು ಹಲವಾರು ತಂಡಗಳಲ್ಲಿ ಮಹಾಧರಣಿಯ ಪ್ರಚಾರಾಂದೋಲನದ ಕರಪತ್ರಗಳನ್ನು ಮನೆ ಮನೆ ತಲಪಿಸುವ ಕಾರ್ಯಕ್ರಮ ಪ್ರಾರಂಭಿಸಿವೆ. ಮೊದಲ ದಿನ 35 ತಂಡಗಳಲ್ಲಿ 235 ಸದಸ್ಯರು ಭಾಗವಹಿಸಿರುತ್ತಾರೆ. ಮನೆಮನೆಗಳಲ್ಲಿ ವ್ಯಾಪಕ ಸ್ವಾಗತ ದೊರೆತಿದ್ದು, ಹೋರಾಟಕ್ಕೆ ಧನ ಸಹಾಯವನ್ನೂ ರೂ.10ರ ಕೂಪನ್ ಕೊಳ್ಳುವ ಮೂಲಕ ಸಾರ್ವಜನಿಕರು ಈ ಸಂದರ್ಭದಲ್ಲಿ ನೀಡಿರುತ್ತಾರೆ. ಬಿಜೆಪಿ ಪಾಲಿಕೆಯ ದುರಾಡಳಿತದ 20 ಪ್ರಮುಖ ಅಂಶಗಳನ್ನು ಕರಪತ್ರದಲ್ಲಿ ಪಟ್ಟಿ ಮಾಡಿ ವಿವರಿಸಲಾಗಿದೆ. ಒಟ್ಟಿನಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ದುರಾಡಳಿತಕ್ಕೆ ಅಂತ್ಯ ಕಾಣಿಸಲು, ಮಹಾಧರಣಿಯೊಂದೇ ಏಕೈಕ ಆಯುಧವೆಂದು ಮಂಗಳೂರಿನ ಮಹಾಜನತೆ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ.

ನಾರುತ್ತಿರುವ ರಸ್ತೆ ವಿರುದ್ಧ ಪ್ರತಿಭಟನೆ:

ನಗರದ ಪ್ರಮುಖ ರಸ್ತೆಯಾದ ಕೇಂದ್ರ ಮಾರುಕಟ್ಟೆಯಿಂದ ಬಂದರು ಪ್ರದೇಶದ ಸಂಪರ್ಕ ರಸ್ತೆಯ ಮಧ್ಯೆ ಲೇಡಿಗೋಶನ್ ಆಸ್ಪತ್ರೆಯ ಕಾಂಪೌಂಡಿಗೆ ತಾಗಿಕೊಂಡು ರಾಶಿ ಬಿದ್ದು ನಾರುತ್ತಿದ್ದ ತ್ಯಾಜ್ಯ ವಿಲೇವಾರಿಗೆ ಒತ್ತಾಯಿಸಿ ಜುಲಾಯಿ 19 ರಂದು ಸಿಪಿಐ(ಎಂ) ಮಂಗಳೂರು ನಗರ ಸಮಿತಿಯ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಅಧಿಕಾರಿಗಳು ಬರುವವರೆಗೆ ರಸ್ತೆತಡೆ ಮುಂದುವರೆಯಿತು.

ಮಹಾನಗರ ಪಾಲಿಕೆಯ ಆರೋಗ್ಯ ಅಧಿಕಾರಿಗಳು ಹಾಗೂ ಪೋಲೀಸ್ ಅಧಿಕಾರಿಗಳು ಆಗಮಿಸಿ 2 ದಿನದೊಳಗಾಗಿ ರಸ್ತೆ ಶುಚಿಗೊಳಿಸುವ ಭರವಸೆ ನೀಡಿದ ಮೇರೆಗೆ ಪ್ರತಿಭಟನೆಯನ್ನು ಹಿಂತೆಗೆಯಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ, ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಬಿ.ಎಂ.ಮಾಧವ, ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ದಿಡೀರ್ ಪ್ರತಿಭಟನೆಯಲ್ಲೂ ನೂರಕ್ಕೆ ಮೀರಿ ಕಾರ್ಯಕರ್ತರು ಭಾಗವಹಿಸಿದರು. ಪಾಲಿಕೆ ಅಧಿಕಾರಿಗಳು ಮಾತುಕೊಟ್ಟಂತೆ ಎರಡನೇ ದಿನದೊಳಗೆ ರಸ್ತೆಯನ್ನು ಸ್ವಚ್ಛಗೊಳಿಸಿರುತ್ತಾರೆ.

ಮಹಾಧರಣಿ ಸಿದ್ಧತೆ ನಡೆಸುತ್ತಿರುವ ಪಕ್ಷದ ಕಾರ್ಯಕರ್ತರ ರಣೋತ್ಸಾಹ ಈ ಪ್ರತಿಭಟನೆಯಲ್ಲಿ ವ್ಯಕ್ತವಾಗುತ್ತಿತ್ತು. ಬೀದಿ ಬದಿ ವ್ಯಾಪಾರಿಗಳು ಹಾಗೂ ಹಮಾಲಿ ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಆಹಾರದ ಹಕ್ಕು ಒಂದು ಮೂಲಭೂತ ಹಕ್ಕು

'ಪೀಪಲ್ಸ್ ಡೆಮಾಕ್ರೆಸಿ' ವಾರ ಪತ್ರಿಕೆಯ ಜುಲೈ 29, 2012 ರ ಸಂಚಿಕೆಯ ಸಂಪಾದಕೀಯ

ಮಾನ್ಯ ರಾಷ್ಟ್ರಪತಿಗಳೇ, ನಮ್ಮ ದೇಶದ ಪ್ರತಿಯೊಂದು ಕುಟುಂಬಕ್ಕೆ ಪ್ರತಿ ತಿಂಗಳು ಕೆ.ಜಿ.ಗೆ 2ರೂ.ದರದಲ್ಲಿ 35 ಕೆ.ಜಿ. ಆಹಾರಧಾನ್ಯಗಳನ್ನು ಒದಗಿಸುವಂತೆ ಮಾಡುವ, ಆಹಾರದ ಹಕ್ಕನ್ನು ಮೂಲಭೂತ ಹಕ್ಕಾಗಿ ಮಾಡುವ ಒಂದು ಕಾನೂನನ್ನು ತಂದಾಗ ಮಾತ್ರವೇ, 'ಅದೃಷ್ಟದೊಂದಿಗೆ ಸಮಾಗಮ'ದ ತಾವು ಹೇಳಿರುವ 'ಹೊಸದೊಂದು ಕಣ್ನೋಟ'ವನ್ನು ಈಡೇರಿಸಿಕೊಳ್ಳುವ ಪಯಣವನ್ನು ಆರಂಭಿಸಲು ಸಾಧ್ಯ. ಈ ಕಣ್ನೋಟದ ಬಗ್ಗೆ ತುಸುವಾದರೂ ಪ್ರಾಮಾಣಿಕತೆ ಇದ್ದರೆ, 'ತಮ್ಮ ಸರಕಾರಕ್ಕೆ' ಈ ಬಗ್ಗೆ ನಿರ್ದೇಶನ ನೀಡಿ !

ಆಹಾರ ಭದ್ರತೆಯ ಪ್ರಶ್ನೆಯ ಮೇಲೆ ನಾಲ್ಕು ಎಡಪಕ್ಷಗಳು ಒಂದು ತಿಂಗಳಿಂದ ನಡೆಸುತ್ತಿರುವ ಜಂಟಿ ಪ್ರಚಾರಾಂದೋಲನ ಜುಲೈ 30ರಿಂದ ಸಂಸತ್ತಿನ ಎದುರು ನಡೆಯುವ ಐದು ದಿನಗಳ ಧರಣಿಯೊಂದಿಗೆ ಕೊನೆಗೊಳ್ಳಲಿದೆ.

ಈ ಒಂದು ತಿಂಗಳ ಪ್ರಚಾರಾಂದೋಲನದಲ್ಲಿ ದೇಶದೆಲ್ಲೆಡೆ ಎಲ್ಲ ಬಡವಿಭಾಗಗಳಿಗೆ ಬಿಪಿಎಲ್ ಕಾರ್ಡುಗಳು, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳು ಮತ್ತು ಇತರ ಆವಶ್ಯಕ ಸರಕುಗಳ ಪೂರೈಕೆ ಮತ್ತು ಪಡಿತರ ವ್ಯವಸ್ಥೆಯಿಂದ ಆಹಾರ ಧಾನ್ಯಗಳನ್ನು ಲಾಭಕೋರತನ ಮತ್ತು ಕಾಳಸಂತೆಯತ್ತ ತಿರುಗಿಸುವುದನ್ನು ನಿಲ್ಲಿಸಬೇಕೆಂದು ಹೋರಾಟಗಳು ನಡೆದಿವೆ.

ಯುಪಿಎ-2 ಸರಕಾರ ದೇಶದ ಪ್ರತಿಯೊಂದು ಕುಟುಂಬಕ್ಕೆ, ಅದು ಎಪಿಎಲ್ ಇರಲಿ, ಬಿಪಿಎಲ್ ಇರಲಿ, ಪ್ರತಿ ತಿಂಗಳು ಕೆ.ಜಿ.ಗೆ 2ರೂ.ನಲ್ಲಿ ಪ್ರತಿ ತಿಂಗಳು 35 ಕೆ.ಜಿ. ಆಹಾರ ಧಾನ್ಯಗಳನ್ನು ಒದಗಿಸುವಂತಹ ಒಂದು ಆಹಾರ ಭದ್ರತಾ ಕಾನೂನನ್ನು ತರಬೇಕು ಎಂದು ಒತ್ತಡ ತರುವುದು ಈ ಪ್ರಚಾರಾಂದೋಲನದ ಕೇಂದ್ರ ಬಿಂದು. ಹಸಿವು ಮತ್ತು ಆಹಾರ ಅಭದ್ರತೆಯ ಸಮಸ್ಯೆಗಳನ್ನು ಪರಿಹರಿಸಬಹುದಾದ ಏಕೈಕ ಮಾರ್ಗ ಇದು.

ನಾಚಿಕೆಗೇಡಿನ ಸಂಗತಿ

ವಿಶ್ವಸಂಸ್ಥೆಯ ಜಾಗತಿಕ ಹಸಿವು ಸೂಚ್ಯಂಕದ ಪ್ರಕಾರ ಜನತೆ ವಿಪರೀತ ಹಸಿವಿನಿಂದ ಬಳಲುತ್ತಿರುವ 80 ದೇಶಗಳಲ್ಲಿ ಭಾರತದ ಸ್ಥಾನ 67ನೇಯದು. ಇಂದು ಜಗತ್ತಿನ ಹಸಿದವರಲ್ಲಿ 25ಶೇ. ಭಾರತೀಯರು ಎಂಬುದು ನಾಚಿಕಗೇಡಿನ ಸಂಗತಿ. ಈ ಸೂಚ್ಯಂಕದ ಪ್ರಕಾರ ಭಾರತದ ಸ್ಥಾನ ಉತ್ತರ ಕೊರಿಯಾ ಮತ್ತು ಈಗ ಇಬ್ಭಾಗಗೊಂಡು ಅಂತರ್ಯುದ್ಧದಿಂದ ಪೀಡಿತವಾದ ಸುಡಾನ್‌ಗಿಂತಲೂ ಕೆಳಗಿದೆ.

ಜಗತ್ತಿನಲ್ಲಿ ಅಪೌಷ್ಟಿಕತೆಯಿಂದ ನರಳುತ್ತಿರುವ ಐದು ವರ್ಷಗಳ ಕೆಳಗಿನ ಮಕ್ಕಳಲ್ಲಿ ಮೂರನೇ ಒಂದು ಭಾರತದಲ್ಲಿ ಇವೆ. ನಮ್ಮ ಮಕ್ಕಳಲ್ಲಿ 44 ಶೇ. ಕಡಿಮೆ ತೂಕದವರು. 72ಶೇ. ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಇನ್ನೂ ಬೇಸರದ ಸಂಗತಿಯೆಂದರೆ, 52ಶೇ. ಗರ್ಭಿಣಿಯರು ರಕ್ತಹೀನತೆಯಿಂದ ನರಳುತ್ತಿದ್ದಾರೆ. ಅವರು ಭಾರತದ ಭವಿಷ್ಯಕ್ಕೆ ಜನ್ಮ ನೀಡುವವರು. ಪ್ರತಿದಿನ ನಮ್ಮ ದೇಶದಲ್ಲಿ ಸಾವಿರಾರು ಮಕ್ಕಳು ಸಂಪೂರ್ಣವಾಗಿ ಗುಣಪಡಿಸಬಹುದಾದ ಕಾಯಿಲೆಗಳಿಂದ ಸಾವನ್ನಪ್ಪುತ್ತಿದ್ದಾರೆ.

ಈ ವಿಷಯದಲ್ಲೂ ಎರಡು ಭಾರತಗಳು ನಿರ್ಮಾಣವಾಗುತ್ತಿವೆ. ನಮ್ಮ ಜನಗಳಲ್ಲಿ 11ಶೇ. ಮಂದಿ 'ಅತಿಪೋಷಣೆ'ಯಿಂದ, ಅಂದರೆ ವಿಪರೀತ ತಿನ್ನುವುದರಿಂದ ಅಥವ ತಪ್ಪು ರೀತಿಯ ಕ್ಯಾಲರಿಗಳನ್ನು ವಿಪರೀತ ಪ್ರಮಾಣದಲ್ಲಿ ತಿಂದು ನರಳುತ್ತಿದ್ದಾರೆ. ಈ ಪಂಕ್ತಿಯ ಇನ್ನೊಂದು ತುದಿಯಲ್ಲಿ, ಬೊಜ್ಜು ತುಂಬಿರುವ ಜನಗಳ ಸಂಖ್ಯೆಯೂ ಭಾರತದಲ್ಲಿಯೇ ಅತಿ ಹೆಚ್ಚು. ಇದು ಸಮೃದ್ಧಿ ತಂದ ಕಾಯಿಲೆಗಳಿಂದ ನರಳುತ್ತಿರುವ 'ಹೊಳೆಯುತ್ತಿರುವ' ಭಾರತ.

ಹಸಿವು ಬೆಂಬಿಡದೆ ಕಾಡುತ್ತಿರಲು

ಅಪೌಷ್ಟಿಕತೆಯ ಪ್ರಧಾನ ಕಾರಣ ಆಹಾರ ಅಭದ್ರತೆಯಿಂದಾಗಿ ಸರಿಯಾದ ಪೋಷಣೆಯು ಲಭ್ಯವಾಗದಿರುವುದು. ಹಸಿವು ಬೆಂಬಿಡದೆ ಕಾಡುತ್ತಿರಲು ಇದು ಮುಖ್ಯ ಕಾರಣ. ಒಂದು ಕನಿಷ್ಟ ಅಂದಾಜಿನ ಪ್ರಕಾರವೂ ಪ್ರತಿದಿನ ಕೇವಲ ಬದುಕುಳಿಯಲು ಬೇಕಾಗುವಷ್ಟೂ ಕ್ಯಾಲರಿಗಳು ಸಿಗದ ಭಾರತೀಯರ ಸಂಖ್ಯೆ ಗ್ರಾಮೀಣ ಪ್ರದೇಶಗಳಲ್ಲಿ 75 ಶೇ. ಮತ್ತು ನಗರಗಳಲ್ಲಿ 73ಶೇ.

ದೇಶದ ಜಿಡಿಪಿ ಬೆಳವಣಿಗೆ ದರ ಮರಳಿದರೆ, ಇಂತಹ ಪರಿಸ್ಥಿತಿ ಬದಲಾಗುತ್ತದೆ ಎಂಬ ವಾದ ಕೂಡ ವಾಸ್ತವಕ್ಕೆ ದೂರವಾದದ್ದು. ಉನ್ನತ ಜಿಡಿಪಿ ಬೆಳವಣಿಗೆ ದರ ಕಂಡ ಈ ಶತಮಾನದ ಮೊದಲ ದಶಕದಲ್ಲಿ ಆಹಾರಧಾನ್ಯಗಳ ಉತ್ಪತ್ತಿಯಲ್ಲಿ ಬೆಳವಣಿಗೆಯ ವಾರ್ಷಿಕ ದರ 1.3ಶೇ.ಕ್ಕೆ ಇಳಿಯಿತು. ಆರ್ಥಿಕ ಸುಧಾರಣೆಯ ಹಿಂದಿನ ದಶಕದಲ್ಲಿ, ಅಂದರೆ 1980ರ ದಶಕದಲ್ಲಿ ಅದು 2.7ಶೇ. ಇತ್ತು. ಇದರಿಂದಾಗಿ 1990ರಲ್ಲಿ ತಲಾ ಪ್ರತಿದಿನ ಆಹಾರ ಲಭ್ಯತೆ 494ಗ್ರಾಂ ಇದ್ದದ್ದು 2009ರಲ್ಲಿ 438 ಗ್ರಾಂ ಗಿಳಿಯಿತು.



ನವ-ಉದಾರವಾದಿ ಆರ್ಥಿಕ ಸುಧಾರಣೆಗಳನ್ನು ಆರಂಭಿಸುವುದರೊಂದಿಗೆ, 1997ರಲ್ಲಿ ಪಡಿತರ ಚೀಟಿಗಳ ಮೂಲಕ ಸಾರ್ವತ್ರಿಕ ವಿತರಣಾ ವ್ಯವಸ್ಥೆಯನ್ನು ಕೈಬಿಡಲಾಯಿತು. ಈ ವ್ಯವಸ್ಥೆಯಲ್ಲಿ ಸಾರ್ವತ್ರಿಕವಾಗಿ ಕೊರತೆಗಳು ಇದ್ದರೂ, ಭ್ರಷ್ಟಾಚಾರಗಳಿದ್ದರೂ 1991ರಲ್ಲಿ 2.1 ಕೋಟಿ ಟನ್ ಆಹಾರಧಾನ್ಯಗಳನ್ನು, ಅಂದರೆ ಲಭ್ಯವಿದ್ದ ಆಹಾರ ದಾಸ್ತಾನಿನ 45 ಶೇ. ದಷ್ಟನ್ನು ರೇಶನ್ ಅಂಗಡಿಗಳ ಮೂಲಕ ಹಂಚಲು ಅವಕಾಶ ಕಲ್ಪಿಸಿತ್ತು. 2001ರ ವೇಳೆಗೆ ಈ ವಿತರಣೆಯ ಪ್ರಮಾಣ ಕೇವಲ 1.3 ಕೋಟಿ ಟನ್ನಿಗಿಳಿಯಿತು.

ಸಾವಿನ ವ್ಯಾಪಾರಿಗಳು

ವ್ಯಂಗ್ಯವೆಂದರೆ, ಸರಕಾರ, ಬಹುಪಾಲು ಭಾರತೀಯ ಜನತೆ ಬಡತನ ಮತ್ತು ಸಂಕಟಗಳಿಗೀಡಾಗಿದ್ದಾರೆ ಎಂಬ ವಾಸ್ತವತೆಯನ್ನು ಒಪ್ಪಲು ನಿರಾಕರಿಸುತ್ತಲೇ ಇದೆ. ಕೇಂದ್ರ ಸರಕಾರದ ಗೋದಾಮುಗಳಲ್ಲಿ ಇರುವ ಹೆಚ್ಚುವರಿ ಆಹಾರ ದಾಸ್ತಾನುಗಳನ್ನು ರಾಜ್ಯಗಳಿಗೆ ಬಿಪಿಎಲ್ ದರಗಳಲ್ಲಿ ಬಡವರಲ್ಲಿ ಹಂಚಲಿಕ್ಕೆ ಬಿಡುಗಡೆ ಮಾಡಲು ಅದು ನಿರಾಕರಿಸುತ್ತಿದೆ. ಜೂನ್ 1, 2012ರ ವೇಳೆಗೆ ಸರಕಾರ 8.23 ಕೋಟಿ ಟನ್‌ಗಳ ಆಹಾರ ದಾಸ್ತಾನುಗಳನ್ನು ಹೊಂದಿತ್ತು. ಕಾಪು ದಾಸ್ತಾನಿಗೆ ಬೇಕಾಗಿರುವುದು 5 ಕೋಟಿ ಟನ್ ಮಾತ್ರ. ಅಂದರೆ ಅಷ್ಟೊಂದು ಹೆಚ್ಚುವರಿ ಆಹಾರ ದಾಸ್ತಾನು ಇತ್ತು. ಸರಕಾರದ ಗೋದಾಮುಗಳು ತುಂಬಿ ಹೋಗಿರುವುದರಿಂದ, ಇವುಗಳಲ್ಲಿ ಇದರಲ್ಲಿ 66ಲಕ್ಷ ಟನ್ ಗೋದಾಮುಗಳ ಹೊರಗೆ ಕೊಳೆಯುತ್ತಿವೆ. ಆದರೂ ಯುಪಿಎ-2 ಸರಕಾರ ಈ ದಾಸ್ತಾನುಗಳನ್ನು ಬಿಡುಗಡೆ ಮಾಡಲು ನಿರಾಕರಿಸುತ್ತಿದೆ. ಪ್ರಸಕ್ತ ಸೀಜನ್ನಿನಲ್ಲಿ ಖರೀದಿಸುವ ಆಹಾರಧಾನ್ಯಗಳನ್ನು ದಾಸ್ತಾನು ಮಾಡಲು ಸರಕಾರ 20,000 ಕೋಟಿ ರೂ.ಗಳನ್ನು ಖರ್ಚು ಮಾಡಬೇಕಾಗಿದೆ ಎಂದು ಈಗ ಭಾರತದ ರಾಷ್ಟ್ರಪತಿಗಳಾಗಿರುವ ಆಗಿನ ಹಣಕಾಸು ಮಂತ್ರಿಗಳು ಸಂಸತ್ತಿಗೆ ಹೇಳಿದ್ದರು. ಆದರೂ ಸರಕಾರ ಈ ದಾಸ್ತಾನುಗಳನ್ನು ಬಿಡುಗಡೆ ಮಾಡಲು ನಿರಾಕರಿಸುತ್ತಿದೆ. ಬದಲಾಗಿ, ನಮ್ಮ ಜನಗಳನ್ನು ಹಸಿದುಕೊಂಡಿರಲು ಬಿಟ್ಟು, ಈ ಧಾನ್ಯಗಳನ್ನು ರಫ್ತು ಮಾಡಿ ಲಾಭ ಗಳಿಸುವ ಬಗ್ಗೆ ಯೋಚಿಸುತ್ತಿದೆ. ಇವರು ಸಾವಿನ ವ್ಯಾಪಾರಿಗಳಲ್ಲದೆ ಬೇರೇನು?

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ನಮ್ಮ ಗಣತಂತ್ರದ 13ನೇ ರಾಷ್ಟ್ರಪತಿಗಳು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ತನ್ನ ಸ್ವೀಕಾರ ಭಾಷಣದಲ್ಲಿ ಆರ್ಥಿಕ ಸಮತ್ವ ಎಲ್ಲಾ ಸಮಾನತೆಗಳಲ್ಲಿ ಅತ್ಯಂತ ಮಹತ್ವದ್ದು ಎಂದು ಅವರು ನಿರೂಪಿಸಿದ್ದಾರೆ. "ನಮ್ಮ ಅಭಿವೃದ್ಧಿ ವಾಸ್ತವವಾಗಬೇಕಾದರೆ, ನಮ್ಮ ನಾಡಿನ ಕಡು ಬಡವರಿಗೆ ತಾವು ಎದ್ದೇಳುತ್ತಿರುವ ಭಾರತದ ನಿರೂಪಣೆಯ ಭಾಗ ಎಂದು ಅನಿಸುವಂತಿರಬೇಕು" ಎಂದಿದ್ದಾರೆ. ಈ ಆಧಾರದಲ್ಲಿ, "ಬಡತನದ ಶಾಪವನ್ನು ನಿರ್ಮೂಲ ಮಾಡಲು, ಮತ್ತು ನಮ್ಮ ಯುವಜನತೆ, ಭಾರತವನ್ನು ದಾಪುಗಾಲುಗಳನ್ನಿಟ್ಟು ಮುನ್ನಡೆಸುವಂತೆ ಮಾಡಬಲ್ಲ ಅವಕಾಶಗಳನ್ನು ಸೃಷ್ಟಿಸಲು" ಅವರು ನಮ್ಮ 'ಅದೃಷ್ಟದೊಂದಿಗೆ ಸಮಾಗಮ'ದ ಹೊಸದೊಂದು ಕಣ್ನೋಟ ಕೊಡುತ್ತಾರೆ, "ಹಸಿವಿಗಿಂತ ಹೆಚ್ಚು ನಿಂದನೀಯವಾದ ಬೇರೊಂದು ಅವಮಾನವಿಲ್ಲ. ಅಭಿವೃದ್ಧಿಯ ಫಲಗಳು ಮೇಲಿನಿಂದ ಕೆಳಗೆ ತೊಟ್ಟಿಕ್ಕುತ್ತವೆ ಎಂಬಂತಹ ಸಿದ್ಧಾಂತಗಳು ಬಡವರ ಕಾನೂನುಬದ್ಧ ಆಕಾಂಕ್ಷೆಗಳನ್ನು ಈಡೇರಿಸುವುದಿಲ್ಲ. ನಾವು ತಳದಲ್ಲಿರುವವರನ್ನು ಮೇಲೆತ್ತಿ ಬಡತನವನ್ನು ಆಧುನಿಕ ಭಾರತದ ಶಬ್ದಕೋಶದಿಂದ ಅಳಿಸಿ ಹಾಕಬೇಕಾಗಿದೆ" ಎನ್ನುತ್ತಾರೆ.

ಈ ಕಣ್ನೋಟವನ್ನು ಈಡೇರಿಸುವಲ್ಲಿ ತುಸುವಾದರೂ ಪ್ರಾಮಾಣಿಕತೆಯಿದ್ದರೆ, ರಾಷ್ಟ್ರಪತಿಗಳು 'ತನ್ನ ಸರಕಾರಕ್ಕೆ' ಆಹಾರದ ಹಕ್ಕು ನಮ್ಮೆಲ್ಲಾ ಜನತೆಗೆ ಮೂಲಭೂತ ಹಕ್ಕು ಎಂಬ ಶಾಸನವನ್ನು ತರುವಂತೆ ನಿರ್ದೇಶಿಸಬೇಕು. ಮಾನ್ಯ ರಾಷ್ಟ್ರಪತಿಗಳೇ, ನಮ್ಮ ದೇಶದ ಪ್ರತಿಯೊಂದು ಕುಟುಂಬವೂ ಪ್ರತಿ ತಿಂಗಳು ಕೆ.ಜಿ.ಗೆ 2ರೂ.ದರದಲ್ಲಿ 35 ಕೆ.ಜಿ. ಆಹಾರಧಾನ್ಯಗಳನ್ನು ಒದಗಿಸುವಂತೆ ಮಾಡುವ ಒಂದು ಕಾನೂನನ್ನು ನಾವು ತಂದಾಗ ಮಾತ್ರವೇ ಈ ಕಣ್ನೋಟವನ್ನು ಈಡೇರಿಸಿಕೊಳ್ಳುವ ಪಯಣವನ್ನು ಆರಂಭಿಸಲು ಸಾಧ್ಯ.

ಈ ಗುರಿಸಾಧನೆಗಾಗಿಯೇ, ಆಮೂಲಕ ನಮ್ಮ ದೇಶದಿಂದ ಹಸಿವನ್ನು ಓಡಿಸಿ ಬಿಡಲಿಕ್ಕಾಗಿಯೇ, ಎಡಪಕ್ಷಗಳು ಸಂಸತ್ತಿನ ಮುಂದೆ ತಮ್ಮ ಐದು ದಿನಗಳ ಧರಣಿಯ ಮೂಲಕ ಯುಪಿಎ ಸರಕಾರದ ಮೇಲೆ ಒತ್ತಡ ಹಾಕುತ್ತಿವೆ. ಹಸಿವು ಮತ್ತು ಬಡತನ ಇರದ ಒಂದು ಉತ್ತಮ ಭಾರತದ ನಿರ್ಮಾಣಕ್ಕಾಗಿ ಭವಿಷ್ಯದಲ್ಲಿ ಇಂತಹ ಜನಾಂದೋಲನಗಳನ್ನು ಶಕ್ತಿಸಂಪನ್ನಗೊಳಿಸಬೇಕಾಗಿದೆ.

ಬರದ ದವಡೆಯಲ್ಲಿ ಮದ್ದೂರು ಮೇವು-ನೀರಿಗೆ ಆಹಾಕಾರ

ಮದ್ದೂರು ಎಂಬುದು ಇಲ್ಲಿ ಒಂದು ಉದಾಹರಣೆ ಮಾತ್ರ. ರಾಜ್ಯದ ಬಹುತೇಕ ಕಡೆ ಇದೇ ದೃಶ್ಯವೇ ಕಣ್ಣು ಕುಕ್ಕುತ್ತಿದೆ. ಆದರೆ ಅದು ಆಳುವವರ ಕಣ್ಣು ತೆರೆಸುತ್ತಿಲ್ಲವೆಂಬುದೇ ದುರಂತ.

ಟಿ.ಯಶವಂತ

ಆತಗೂರು, ಕೊಪ್ಪ, ಚಿಕ್ಕರಸಿನಕೆರೆ ಮತ್ತು ಕಸಬಾ ಹೋಬಳಿಗಳಿಂದ ಕೂಡಿದ ಮದ್ದೂರು ತಾಲ್ಲೂಕು, ಬರದ ರಾಕ್ಷಸ ದವಡೆಗೆ ಸಿಲುಕಿ ನರಳುತ್ತಿದೆ. ಈ ತಾಲ್ಲೂಕನ್ನು ಎರಡು ಭಾಗ ಮಾಡಿ ಹರಿಯುವ ಶಿಂಷಾ ನದಿ ಬತ್ತಿಹೋಗಿದೆ. ಕಾವೇರಿ ನದಿಗೆ ಕಟ್ಟಲಾಗಿರುವ ಕೆ.ಆರ್.ಎಸ್. ಅಣೆಕಟ್ಟು ವಿ.ಸಿ. ನಾಲೆಯ ಕೊನೆಯ ತುದಿಯಾಗಿ ಮದ್ದೂರು ತಾಲ್ಲೂಕಿನ ಶಿಂಷಾ ಬಲದಂಡೆ ಪ್ರದೇಶದ ಸಂಪರ್ಕ ಹೊಂದಿದೆ. ಕಟ್ಟೆ ತುಂಬಿದಾಗಲೂ ನೀರು ಸಾಕಷ್ಟು ಸಿಗುವುದಿಲ್ಲ. ಶಿಂಷಾ ಎಡದಂಡೆ ಇಷ್ಟು ವರ್ಷವಾದರೂ ಮಳೆಯಾಶ್ರಿತ ಪ್ರದೇಶವಾಗಿ ಮುಂದುವರೆದಿದೆ.

ಕೆಆರ್‌ಎಸ್ ಖಾಲಿ ಖಾಲಿ

ಕಳೆದ ವರ್ಷ ಜುಲೈ 3ನೇ ವಾರದ ಹೊತ್ತಿಗೆ ಭರ್ತಿಯಾಗಿದ್ದ ಕೆಆರ್‌ಎಸ್ ಅಣೆಕಟ್ಟು ಈಗ ಖಾಲಿ ಖಾಲಿ. 42 ಟಿ.ಎಂ.ಸಿ. ಸಾಮರ್ಥ್ಯದ ಈ ಕಟ್ಟೆಯಲ್ಲಿ ಈಗ ಇರುವುದು ಕೇವಲ 7 ಟಿ.ಎಂ.ಸಿ. ಮಾತ್ರ. ಇಡೀ ಜಿಲ್ಲೆಯ ಜೀವನಾಡಿ ಅಣೆಕಟ್ಟಿನ ಪರಿಸ್ಥಿತಿಯೇ ಇಂತಹ ಶೋಚನೀಯ ಸ್ಥಿತಿಯಲ್ಲಿರುವಾಗ ವಿ.ಸಿ.ನಾಲಾ ಕೊನೆಭಾಗದ ಶಿಂಷಾ ಬಲದಂಡೆ ಪ್ರದೇಶ, ಶಾಶ್ವತ ಮಳೆಯಾಶ್ರಿತ ಪ್ರದೇಶವಾಗಿರುವ ಶಿಂಷಾ ಎಡದಂಡೆ ಪ್ರದೇಶದ ರೈತಾಪಿ ಜನ-ಜಾನುವಾರುಗಳ ಪರಿಸ್ಥಿತಿ ನರಕ ಸದೃಶ್ಯವಾಗಿರುವಂತಹದ್ದು ಎಂತಹ ಕಲ್ಲೆದೆಯನ್ನು ಕರಗಿಸದೇ ಇರದು.

ಶಿಂಷಾ ಬಲದಂಡೆ ಪ್ರದೇಶದಲ್ಲಿ ಕಬ್ಬು, ರೇಷ್ಮೆ, ಭತ್ತ ಮುಖ್ಯ ಬೆಳೆಗಳಾದರೆ ಎಡದಂಡೆ ಪ್ರದೇಶದಲ್ಲಿ ರಾಗಿ, ಅಲಸಂದೆ ಮುಂತಾದ ದ್ವಿದಳ ಧಾನ್ಯಗಳು, ಕೊಳವೆಬಾವಿ ಮತ್ತು ಹೊಳೆ ನೀರಿಗೆ ಪೈಪ್ ಮೂಲಕ ಸಂಪರ್ಕ ಕಲ್ಪಿಸಿಕೊಳ್ಳಲು ಸಾಧ್ಯವಿರುವ ರೈತರು ರೇಷ್ಮೆ, ಕಬ್ಬು ಕೃಷಿ ಮಾಡುತ್ತಾರೆ.

ಮೋಡವೇ ಇಲ್ಲದ ವಾತಾವರಣ, ಆಷಾಡದ ಬೀಸುಗಾಳಿಗೆ ಬೇಸಿಗೆ ಸುಡು ಬಿಸಿಲಿನಂತಹ ಬಿಸಿಲು ಸೇರಿ ಎಲ್ಲಾ ಬೆಳೆಗಳನ್ನು ಒಣಗಿಸಿ, ಮುಂಗಾರು ವರ್ಷಧಾರೆಯ ನಿರೀಕ್ಷೆಯಲ್ಲಿದ್ದ ರೈತರನ್ನು ಏನೂ ಮಾಡಲಾಗದ ಅಸಹಾಯಕ ಹತಾಶ ಸ್ಥಿತಿಗೆ ದೂಡಿದೆ.

ಮೇವೂ ಖಾಲಿ

ಕಳೆದ ವರ್ಷದ ಮೇವಿನ ದಾಸ್ತಾನು ಮುಗಿದಿದ್ದು, ಈ ವರ್ಷದ ಮೇವಿಗೆ ಚೆಲ್ಲಿದ್ದ ಜೋಳ, ಎಳ್ಳು, ಹುರಳಿ ಬೆಳೆ ಪೂರ್ಣ ನಾಶವಾಗಿದೆ. ಬೇಸಿಗೆ ಭತ್ತ ಬೆಳೆಯಲು ಸಾಧ್ಯವಾಗಿಲ್ಲ. ಇದು ಜಾನುವಾರುಗಳ ಮೇವಿನ ಲಭ್ಯತೆ ಮೇಲೆ ತೀವ್ರ ಕೆಟ್ಟ ಪರಿಣಾಮ ಬೀರಿದ್ದು, ತಾವು ನಂಬಿರುವ ರಾಸುಗಳಿಗೆ ಮೇವು ಒದಗಿಸಲಾಗದೆ ಕೇಳಿದಷ್ಟು ಹಣಕ್ಕೆ ಜಾನುವಾರುಗಳನ್ನು ರೈತರು ಮಾರಾಟ ಮಾಡುತ್ತಿದ್ದಾರೆ. ಇಂತಹ ಕಷ್ಟದ ಮಧ್ಯೆಯೂ ಜಾನುವಾರುಗಳನ್ನು ರಕ್ಷಿಸಿಕೊಳ್ಳಲು ಬಯಸುತ್ತಿರುವ ರೈತರು, ಅತಿ ಹೆಚ್ಚು ದುಬಾರಿ ದರಕ್ಕೆ ಮೇವು ಖರೀದಿಸಿ ಅತಿ ಮಿತವಾಗಿ ಜಾನುವಾರುಗಳಿಗೆ ಒದಗಿಸುತ್ತಿದ್ದಾರೆ. ಇದರ ಪರಿಣಾಮವಾಗಿ ರಾಸುಗಳಲ್ಲಿ ತೂಕ ದಿನೇ ದಿನೇ ಇಳಿಕೆಯಾಗತೊಡಗಿದೆ.



ಆತಗೂರು ಗ್ರಾಮದ ಬಸವರಾಜು ಎಂಬ ರೈತ "1 ಮೀಟರ್ ಉದ್ದ 5 ಅಡಿ ಎತ್ತರದ ಭತ್ತದ ಹುಲ್ಲಿಗೆ 5 ಸಾವಿರ ರೂ.ಗೆ ಖರೀದಿಗೆ ತಂದೆ, ಸಾಗಾಣಿಕೆ ವೆಚ್ಚವೇ ಒಂದು ಸಾವಿರ ರೂ. ಆಯಿತು ಒಟ್ಟು 6 ಸಾವಿರ ರೂ. ಮೇವನ್ನು ಎಷ್ಟೇ ಕಡಿಮೆ ಬಳಸಿದರೂ 15 ದಿನದಲ್ಲಿ ಮುಗಿಯಲಿದೆ. ಮತ್ತೆ ಮೇವು ಖರೀದಿಗೆ ಹೋದರೆ ಈ ದರಕ್ಕೆ ಸಿಗುವುದಿಲ್ಲ. ಮುಂದೇನು ಮಾಡುವುದು" ಎಂದು ಪರಿತಪಿಸಿದ. ಇದೇ ರೀತಿ ಪರಿತಪಿಸುವ ನೂರಾರು ರೈತರು ಮದ್ದೂರು ತಾಲ್ಲೂಕಿನಾದ್ಯಂತ ಸಿಗುತ್ತಾರೆ. ವಿಶೇಷವಾಗಿ ಈ ಸಮಸ್ಯೆ ಹೆಚ್ಚಿರುವ ಶಿಂಷಾ ಎಡದಂಡೆ ಪ್ರದೇಶದ ಮಲ್ಲನಕುಪ್ಪೆ, ಹೂತಗೆರೆ, ಕೆಸ್ತೂರು, ಹೆಮ್ಮನಹಳ್ಳಿ, ಕದಲೂರು, ನಿಢಘಟ್ಟ, ಸೋಮನಹಳ್ಳಿ, ಆತಗೂರು, ಕೆ. ಹೊನ್ನಲಗೆರೆ, ಕೊಕ್ಕರೆಬೆಳ್ಳೂರು, ಕೂಳಗೆರೆ, ಆಲೂರು ಮುಂತಾದ ಗ್ರಾ.ಪಂ. ವ್ಯಾಪ್ತಿಯ ಸುಮಾರು 80 ಹಳ್ಳಿಗಳ ನೂರಾರು ರೈತಾಪಿ ಕುಟುಂಬಗಳು ಜಾನುವಾರುಗಳ ಜೊತೆ ಮೂಕವೇದನೆಯನ್ನು ಹಂಚಿಕೊಂಡಿವೆ.

ನೂರು ಕತೆಗಳಿಗಾಗಿ ಮಿಗುವ ನೋವು

ಈ ಹಳ್ಳಿಗಳ ಎಷ್ಟೋ ರೈತರು ಸಾಲ ಸೋಲ ಮಾಡಿ 1 ಎಕರೆ ಭತ್ತದ ಹುಲ್ಲಿಗೆ 20 ಸಾವಿರಕ್ಕಿಂತ ಹೆಚ್ಚಿನ ದರದಲ್ಲಿ ಖರೀದಿ ಮಾಡಿರುವವರು ಇದ್ದಾರೆ. ತುಂಬಾ ದೂರದಿಂದ ತರಬೇಕಾದ ಸ್ಥಿತಿ ಇರುವುದರಿಂದ ಸಾಗಾಣಿಕೆ ವೆಚ್ಚವೂ ದುಬಾರಿಯಾಗಿದೆ. ನ್ಯಾನೋದಂತಹ ಕಾರುಗಳ ಖರೀದಿ, ತಿಂಗಳ ಪೂರ್ತಿ ದುಡಿಯುವ ಸಾಮರ್ಥ್ಯದ ಜೋಡಿ ದನಗಳ ಖರೀದಿಗಿಂತ ಸುಲಭವಾಗಿರುವ ವಿಲಕ್ಷಣ ಪರಿಸ್ಥಿತಿಯಲ್ಲಿ, ತಾನು ಹೊಂದಿಸಬಹುದಾದ ದುಡಿಮೆ ಬಂಡವಾಳಕ್ಕೆ ಎಷ್ಟೂ ಪಾಲು ದೊಡ್ಡದಾಗಿರುವ ದುಬಾರಿ ದರದ ದನಗಳನ್ನು ಇಂತಹ ಬರದಲ್ಲೂ ಉಳಿಸಿಕೊಳ್ಳಲು ರೈತ ಪಡುತ್ತಿರುವ ಪಾಡು ನೂರಾರು ಕಥೆಗಳನ್ನು ಬರೆದರೂ ಮಿಗುವಷ್ಟಿದೆ.



ಪ್ರಾಂತ ರೈತ ಸಂಘದ ತಾಲ್ಲೂಕು ಉಪಾಧ್ಯಕ್ಷರೂ ಆಗಿರುವ ಯರಗನಹಳ್ಳಿಯ ಶಿವಣ್ಣನ ರೀತಿಯಲ್ಲೇ ಇದೇ ಊರಿನ ಮತ್ತು ಅಕ್ಕಪಕ್ಕದ ಊರಿನ ರೈತರು ಬೆಳಗಿನ ಜಾವ 4 ಗಂಟೆಗಿಂತ ಮುಂಚೆಯೇ 3 ರಿಂದ 6 ಕಿ.ಮೀ ದೂರವಿರುವ ಶಿಂಷಾ ನದಿ ದಂಡೆಯಲ್ಲಿರುಬಹುದಾದ ಹುಲ್ಲು ಕೊಯ್ಯಲು ಹೋಗುತ್ತಾರೆ. ಕೇವಲ ಹುಲ್ಲಿಗಷ್ಟೇ ಅಲ್ಲದೆ, ಜಾನುವಾರುಗಳಿಗೆ ನೀರು ಒದಗಿಸಲು ಕೂಡ ಶಿಂಷಾ ದಂಡೆಗೆ ಹೋಗಬೇಕಾಗಿದೆ. ಕದಲೂರು ಗ್ರಾಮದ ಪುಟ್ಟರಾಮಯ್ಯ "ತಾನು ಸ್ವತಃ ಪ್ರತಿದಿನ 4 ಕಿ.ಮೀ. ದೂರದ ನದಿಗೆ ಹಸು-ದನಗಳೆನ್ನು ಮೇಯಲು, ನೀರು ಕುಡಿಸಲು ಹೊಡೆದುಕೊಂಡು ಹೋದರೂ, ಅಲ್ಲಿ ಶುದ್ಧ ನೀರಿಲ್ಲದಿರುವುದು 'ಇಸುಬು' ನಂತಹ ಚರ್ಮ ವ್ಯಾಧಿಗಳಿಗೆ ತುತ್ತಾಗುತ್ತಿರುವುದನ್ನು ವಿವರಿಸುತ್ತಾ, ಹೀಗಿದ್ದರೂ ಬೇರೆ ದಾರಿ ಇಲ್ಲದೆ ಅಂತಹ ಅನಾರೋಗ್ಯದ ನೀರನ್ನೇ ಅವಲಂಬಿಸಿದ್ದೇವೆ ಎನ್ನುತ್ತಾರೆ.


ಕೊಕ್ಕರೆ ಬೆಳ್ಳೂರು ಪಂಚಾಯಿತಿ ವ್ಯಾಪ್ತಿಯ ಹಳ್ಳಿಕೆರೆ ಗ್ರಾಮದ ಹಿರಿಯ ರೈತ ತಗಡಯ್ಯರವರು "3 ಎಕರೆ ಖುಷ್ಕಿ ಭೂಮಿಯಲ್ಲಿ ಬಿತ್ತಿದ್ದ ಎಳ್ಳು, ಜೋಳ, ಹುರಳಿ ಬೆಳೆ ಕೈಗೆ ಸಿಕ್ಕಿದ್ದರೆ ದನಗಳಿಗೆ ಮೇವು ಆಗುತ್ತಿತ್ತು ಜೊತೆಗೆ ರಾಗಿ ಬಿತ್ತನೆ-ನಾಟಿಗೆ ಖರ್ಚು ಹುಟ್ಟುತ್ತಿತ್ತು. ಮಳೆ ಕೈ ಕೊಟ್ಟಿದ್ದರಿಂದ ಉಳುಮೆ, ಬಿತ್ತನೆ ಬೀಜ ಮತ್ತಿತರ ವೆಚ್ಚಕ್ಕೆ ಹಾಕಿದ 6 ಸಾವಿರ ರೂ ಮಣ್ಣುಪಾಲಾಗಿದೆ. ರಾಗಿ ಬೆಳೆ ಈ ವರ್ಷ ಬೆಳೆಯಲು ಸಾಧ್ಯವಿಲ್ಲ" ಎಂದು ತನ್ನ ಅಳಲನ್ನು ತೋಡಿಕೊಂಡರು. ಇದೇ ರೀತಿ ನೂರಾರು ಎಕರೆ ಎಳ್ಳು, ಜೋಳ, ತಗಣಿ, ಹುರಳಿ ಬೆಳೆಗಳು, ರೇಷ್ಮೆ, ಕಬ್ಬು ಸಂಪೂರ್ಣವಾಗಿ ನಾಶವಾಗಿ ಕೋಟ್ಯಾಂತರ ರೂ ನಷ್ಟ ಸಂಭವಿಸಿದೆ.

ಹೆಮ್ಮನಹಳ್ಳಿ ಪಂಚಾಯಿತಿಯ ಹನುಮಂತಪುರ ಎಂಬ 300 ಕುಟುಂಬಗಳು ವಾಸವಾಗಿರುವ ಈ ಗ್ರಾಮ ಒಂದರಲ್ಲೇ 40 ಎಕರೆ ಕಬ್ಬು, 150 ಎಕರೆ ಎಳ್ಳು, ಜೋಳ, 30 ಎಕರೆ ರೇಷ್ಮೆ ಕಡ್ಡಿ ಒಣಗಿದ ವಿವರಗಳನ್ನು ಇದೇ ಗ್ರಾಮದ ರೈತ ಮರಿಸ್ವಾಮಿ ನೀಡಿದ್ದಾರೆ. ಇದೇ ರೀತಿ ಇಡೀ ತಾಲ್ಲೂಕಿನ ಎಲ್ಲಾ ಹಳ್ಳಿಗಳಲ್ಲಿ ಒಟ್ಟು ಬೆಳೆ ನಷ್ಟದ ಪರಿಣಾಮ ಘೋರ ಮತ್ತು ಭೀಕರವಾಗಿದೆ.

ಕುಡಿವ ನೀರಿಗೂ ತತ್ವಾರ

ಕುಡಿಯುವ ನೀರಿನ ಪರಿಸ್ಥಿತಿ

ಗಂಭೀರವಾಗಿದೆ. ವಾರಕ್ಕೆ ಒಂದು ಸಲ ತಲಾ 3–4 ಬಿಂದಿಗೆಯಷ್ಟು ನೀರು ಸಿಗುವುದು ಕೂಡ ಎಷ್ಟೋ ಹಳ್ಳಿಗಳಲ್ಲಿ ದುಸ್ತರವಾಗಿದೆ. ಆಲಂಶೆಟ್ಟಿಹಳ್ಳಿ ಗ್ರಾಮದ ಕಲಾವತಿ ರೀತಿಯಲ್ಲಿ ಬಟ್ಟೆ ತೊಳೆಯಲು 6 ಕಿ.ಮೀ.ಗಿಂತ ಹೆಚ್ಚು ದೂರದ ಶಿಂಷಾ ಹೊಳೆಗೆ ಹೋಗಬೇಕಾದ ದುಸ್ಥಿತಿಗೆ ಇಲ್ಲಿನ ಹತ್ತಾರು ಹಳ್ಳಿಗಳ ಮಹಿಳೆಯರು ದೂಡಲ್ಪಟ್ಟಿದ್ದಾರೆ.



ಹಾಲು ಉತ್ಪಾದನೆ ಕಡಿಮೆಯಾಗುತ್ತಿದೆ

ಮನೆ ಬಳಕೆಗೆ, ಮಕ್ಕಳಿಗೆ ಹಾಲು ಸಿಗಲೆಂದು ಸಾಕಿಕೊಂಡಿದ್ದ ಎಮ್ಮೆ–ಹಸುಗಳನ್ನು ಬೇಕಾಬಿಟ್ಟಿಯಾಗಿ ಮಾರಲಾಗುತ್ತಿದ್ದರೆ, ಇನ್ನೊಂದು ಕಡೆ ಮೇವಿನ ಕೊರತೆಯಿಂದ ಹಾಲು ಉತ್ಪತ್ತಿ ಕಡಿಮೆಯಾಗಿದೆ. ಇದು ಈಗಾಗಲೇ ಸಾಕಷ್ಟು ಅಪೌಕಷ್ಠಿತೆಯಿಂದ ಬಳಲುತ್ತಿರುವ ಮಕ್ಕಳು–ಮಹಿಳೆಯರ ಆರೋಗ್ಯ ಮತ್ತು ಆಯುಷ್ಯದ ಮೇಲೆ ಖಂಡಿತವಾಗಿ ದೀರ್ಘಕಾಲದ ದುಷ್ಪರಿಣಾಮಕ್ಕೆ ಎಡೆಮಾಡಿಕೊಡಲಿದೆ. ಅಷ್ಟೆ ಅಲ್ಲದೆ ತಿಂಗಳ ಜೀವನಕ್ಕೆ ಮೂಲಾಧಾರವಾಗಿದ್ದ ಹೈನುಗಾರಿಕೆಗೆ ಪೆಟ್ಟುಬಿದ್ದಿದೆ.

ಆಹಾರ–ಕೆಲಸಕ್ಕಾಗಿ ಆಕ್ರಂದನ

ಕೃಷಿ ಚಟುವಟಿಕೆಗಳ ಪರಿಸ್ಥಿತಿ ಈ ರೀತಿ ಇರುವಾಗ ಈ ಕೆಲಸಗಳನ್ನು ನಂಬಿಕೊಂಡಿದ್ದ ಭೂಹೀನ ಕೃಷಿಕೂಲಿಕಾರರು, ಸಣ್ಣ ಮತ್ತು ಅತಿಸಣ್ಣ ರೈತರು ಕೆಲಸವಿಲ್ಲದೆ ಪ್ರತಿ ಊರಿನ ಅರಳಿಕಟ್ಟೆಯ ಮೇಲೆ, ಇನ್ನಿತರ ಜಗಲಿಗಳಲ್ಲಿ ತಲೆ ಮೇಲೆ ಕೈ ಹೊತ್ತು, ಉತ್ಸಾಹವಿಲ್ಲದೆ, ಭರವಸೆ ಇಲ್ಲದೆ ರಾಜಕೀಯ ಪಕ್ಷಗಳನ್ನು ಶಪಿಸುತ್ತಾ ಕೂರುವ ನೂರಾರು ಜನ ಸಿಗುತ್ತಾರೆ. ಎಲ್ಲೆಡೆ ಕೆಲಸಕ್ಕಾಗಿ ಹಾತೊರೆಯಲಾಗುತ್ತಿದೆ. ಈ ಸಂದರ್ಭದಲ್ಲಿ ನಿಜವಾಗಲೂ ಸಹಾಯಕ್ಕೆ ಬರಬಹುದಾಗಿದ್ದ ಉದ್ಯೋಗ ಖಾತರಿ ಯೋಜನೆ ಜಾರಿಗೊಳ್ಳುತ್ತಿಲ್ಲ. 42 ಗ್ರಾಮ ಪಂಚಾಯಿತಿಗಳಷ್ಟೆ ಬೆರಳೆಣಿಕೆಯ ಪಂಚಾಯಿತಿಗಳಲ್ಲಿ ಮಾತ್ರ ಕೆಲಸ ನೀಡಲಾಗಿದೆ. ಇದರಲ್ಲೂ ಬಹುತೇಕ ತಿಂಗಳು ಕಳೆದರೂ ಕೂಲಿಹಣ ನೀಡದೆ ಮತ್ತು ಕೆಲಸ ನೀಡದೇ ಸತಾಯಿಸಲಾಗುತ್ತಿದೆ.

ಈ ವೇಳೆಯಲ್ಲಿ ದ್ವಿದಳ ಧಾನ್ಯಗಳ ಒಕ್ಕಣೆ ಕೆಲಸ, ರಾಗಿ, ಭತ್ತದ ಬಿತ್ತನೆ ಕೆಲಸಗಳು ಸಿಗುತ್ತಿದ್ದವು. ಸಾಕಷ್ಟು ಕಬ್ಬಿನ ಬೆಳೆ ಒಣಗಿರುವುದರಿಂದ ಕಬ್ಬಿನ ಕಟಾವು ಕೆಲಸದಲ್ಲಿ ತೀವ್ರವಾದ ಕಡಿತ ಉಂಟಾಗಲಿದೆ. ರೇಷ್ಮೆ ಬೇಸಾಯ ಕುಂಠಿತಗೊಂಡಿದ್ದು, ದಿನಕ್ಕೆ ಒಂದು ಅಥವಾ ಎರಡು ಗಂಟೆ ಮಾತ್ರ ಸಿಗುವ ತ್ರಿಫೇಸ್ ವಿದ್ಯುತ್ ಮತ್ತು ಶಿಂಷಾ ಎಡದಂಡೆ ಪ್ರದೇಶದಲ್ಲಿ ಶೇ. 80 ಕ್ಕೂ ಹೆಚ್ಚು ಬೋರ್ ವೆಲ್‌ಗಳು ಸ್ಥಗಿತಗೊಂಡಿರುವುದು (ಇತರೆಡೆಯಲ್ಲಿ ಈ ಪ್ರಮಾಣ ಶೇ. 60 ರಷ್ಟು ಇದೆ.) ಕೃಷಿ ಚಟುವಟಿಕೆ ಹಾಗೂ ತತ್ಪರಿಣಾಮವಾಗಿ ಸೃಷ್ಟಿಯಾಗುವ ಉದ್ಯೋಗ ಭಾರೀ ಪ್ರಮಾಣದಲ್ಲಿ ಕಡಿತಗೊಂಡಿರುವಲ್ಲಿ ಕಾರಣೀಭೂತ ಅಂಶಗಳಾಗಿವೆ.

ಮಾರುವವರೇ ಈಗ ಕೊಳ್ಳಬೇಕಾಗಿದೆ

ಬಿತ್ತಿದ್ದ ದ್ವಿದಳ ಧಾನ್ಯ ಬೆಳೆ ಕೈಗೆ ಸಿಗದೇ ಇರುವುದು. ಈಗ ಭತ್ತ ಮತ್ತು ರಾಗಿ ಆಹಾರ ಧಾನ್ಯಗಳ ಬೆಳೆ ಬೆಳೆಯಲು ಅವಕಾಶ ಕ್ಷೀಣಿಸಿರುವುದು ಆಹಾರದ ತಲಾ ಲಭ್ಯತೆಯ ಮೇಲೆ ದುಷ್ಪರಿಣಾಮ ಬೀರಿದೆ. ರಾಗಿ, ಭತ್ತ ಮಾರುತ್ತಿದ್ದ ಕುಟುಂಬಗಳು ಕೊಳ್ಳಬೇಕಾದ ದುಸ್ಥಿತಿ ಎದುರಾಗಿದೆ. ಮುಂದಿನ ಜೀವನಕ್ಕೆ ಕಡ್ಡಿ–ಕಾಳು, ರೇಷನ್ ಇಲ್ಲವಾಗಿದೆ. ನ್ಯಾಯ ಬೆಲೆ ಅಂಗಡಿಗಳಲ್ಲಿ ಯೂನಿಟ್ ಪದ್ಧತಿ ಪ್ರಕಾರ ತಲಾ 4 ಕೆ.ಜಿ.ಯಂತೆ ಗರಿಷ್ಠ 20 ಕೆ.ಜಿ. ಮಾತ್ರ, ಅದೂ ಕೂಡ ಬಿ.ಪಿ.ಎಲ್. ಕಾರ್ಡ್ ಇರುವ ಕುಟುಂಬಗಳಿಗೆ ನೀಡಲಾಗುತ್ತಿದೆ. ಬಿ.ಪಿ.ಎಲ್. ನಿಗದಿ ಮಾಡುವ ಮಾನದಂಡದಲ್ಲಿ ವಿಪರೀತ ಗೊಂದಲವಿರುವುದು ಹಾಗೂ ಪಡಿತರ ಪಡೆಯುತ್ತಿರುವ ಕುಟುಂಬಗಳಲ್ಲಿ ಕೊರತೆ ಧಾನ್ಯ ತುಂಬಿಕೊಳ್ಳಲು ಅವಕಾಶವೇ ಇಲ್ಲದಿರುವುದು ತೀವ್ರವಾದ ಆಹಾರದ ಕೊರತೆಯನ್ನು ಉಂಟು ಮಾಡಿ ವಲಸೆಗೆ ಪ್ರೇರಣೆ ನೀಡುತ್ತಿದೆ. ಎಲ್ಲಾ ಕುಟುಂಬಗಳಿಗೂ ಆಹಾರ ಧಾನ್ಯವನ್ನು ಒದಗಿಸುವ ಕೆಲಸ ಮಾಡಿದರೆ ಮಾತ್ರ ಇಂತಹ ಸಂದರ್ಭಗಳಲ್ಲಿ ಸಹಾಯವಾಗುತ್ತದೆ. ಏರುತ್ತಿರುವ ಸಾಲದ ಹೊರೆ ಒಂದು ಕಡೆ, ದುಬಾರಿಯಾಗುತ್ತಿರುವ ಜೀವನ ವೆಚ್ಚ ಇನ್ನೊಂದು ಕಡೆ ವಲಸೆ–ಆತ್ಮಹತ್ಯೆಗಳನ್ನು ಉತ್ತೇಜಿಸುತ್ತಿವೆ.


ಗರಿಗೆದರಿದ ಚುನಾವಣಾ ರಾಜಕೀಯ

ಈ ಸಂದರ್ಭವನ್ನು ಇನ್ನು ಒಂದು ವರ್ಷ ಇರುವ ಚುನಾವಣಾ ತಯಾರಿಗೆ, ಟಿಕೇಟ್ ಪಡೆಯಲು ತಮ್ಮ ಹೈ ಕಮಾಂಡ್ ಮೇಲೆ ಪ್ರಭಾವ ಬೀರಲು, ರಾಜಕಾರಣಿಗಳ ಹುಟ್ಟು ಹಬ್ಬದ ನೆಪದಲ್ಲಿ ಸಾಮೂಹಿಕ ಬೋಜನ ಏರ್ಪಡಿಸಿ ದೊಡ್ಡ ಸಂಖ್ಯೆಯಲ್ಲಿ ಜನ ಸೇರುವಂತೆ ಬಳಸಿಕೊಳ್ಳಲಾಗುತ್ತಿದೆಯೇ ಹೊರತು, ಇಂತಹ ಸಂದರ್ಭದಲ್ಲಿ ಜನರ ಸ್ವಾಭಿಮಾನದ ಬದುಕಿನ ರಕ್ಷಣೆಗೆ ಅಗತ್ಯವಿರುವ ಬರಪರಿಹಾರ ಮುಂತಾದ ಕ್ರಮಗಳಿಗೆ ಮುಂದಾಗುತ್ತಿಲ್ಲ.

ನಿಷ್ಕ್ರಿಯ ಸರ್ಕಾರ

ಜನರ ಕಷ್ಟ ಇಷ್ಟು ದೊಡ್ಡ ಪ್ರಮಾಣದಲ್ಲಿ ತೀವ್ರಗೊಂಡು ತುರ್ತು ನೆರವಿಗೆ ಧಾವಿಸುವ ಸಂದರ್ಭ ಸೃಷ್ಟಿಯಾಗಿದ್ದರೂ ಇಡೀ ಸರ್ಕಾರವೇ ಏನೂ ನಡೆದಿಲ್ಲವೆಂಬಂತೆ ನಿಷ್ಕ್ರಿಯವಾಗಿದೆ.

ಈ ಸಂಬಂಧ ಅಹವಾಲು ತಂದ ಕೆಲವು ರೈತರಿಗೆ ಕಂದಾಯ ಇಲಾಖೆ ಅಧಿಕಾರಿಗಳು ಪೂರ್ಣ ಒಣಗಿ ಕೆಂಪು ಬಣ್ಣಕ್ಕೆ ತಿರುಗಿರುವ ಅಥವಾ ಸುಟ್ಟು ಭಸ್ಮವಾಗಿರುವ ಜಮೀನು ತೋರಿ ಇದನ್ನು ಮಾತ್ರವೇ ಪಟ್ಟಿ ಮಾಡಿಕೊಳ್ಳುತ್ತೇವೆ ಎಂದು ಹೇಳುತ್ತಿರುವುದು ಹಾಸ್ಯಾಸ್ಪದವಾಗಿದೆ. ಪಂಚಾಯಿತಿರಾಜ್ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆ ಕುರುಡಾಗಿದೆ. ಮೇವು ಕೇಂದ್ರ ತೆರೆಯಲು, ಎಲ್ಲಾ ರಾಸುಗಳಿಗೆ ಅಗತ್ಯವಿರುವಷ್ಟು ಮೇವು, ನೀರು ಒದಗಿಸಲು ಆಗ್ರಹ ಎಲ್ಲೆಡೆ ಮಾರ್ದನಿಸುತ್ತಿದ್ದರೂ ಈ ಸರ್ಕಾರ ಕಿವಿಗೆ ಹಾಕಿಕೊಂಡಿಲ್ಲ. ಇಡೀ ತಾಲ್ಲೂಕಿನಾದ್ಯಂತ ಮೇವು–ನೀರು, ಆಹಾರ–ಕೆಲಸಕ್ಕಾಗಿ ಹಾಹಾಕಾರ ಮೊಳಗುತ್ತಿದೆ. ಇದೇ ರೀತಿಯ ಪರಿಸ್ಥಿತಿ ಮಂಡ್ಯ ಜಿಲ್ಲೆಯ ಉಳಿದ ಪ್ರದೇಶಗಳಲ್ಲೂ ಇದೆ.



ಸತತ ಬರದಿಂದ ಕಂಗಲಾದ ಕೋಲಾರ ಜಿಲ್ಲೆ

ಜುಲೈ ತಿಂಗಳು ಮುಗಿಯುತ್ತಾ ಬಂದರೂ ಮಳೆಯಾಗದಿರುವುದರಿಂದ ಕೋಲಾರ ಜಿಲ್ಲೆಯಲ್ಲಿ ರೈತರು ಕಂಗಾಲಾಗಿದ್ದಾರೆ. ಮಳೆಯ ಅಭಾವದಿಂದ ಕೋಲಾರ ಜಿಲ್ಲೆ ಕಳೆದ 3 ವರ್ಷಗಳಿಂದ ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಿದೆ. ಮೇ ತಿಂಗಳಲ್ಲಿ ಅಲ್ಪಸ್ವಲ್ಪ ಮಳೆ ಬಿತ್ತು. ರೈತರು ತಮ್ಮ ಭೂಮಿಯನ್ನು ಹದಮಾಡಿಕೊಂಡರು. ಆದರೆ ಮತ್ತೆ ಮಳೆ ಬರಲಿಲ್ಲ. ಕೃಷಿ ಚಟುವಟಿಕೆಗಳು ಮುಂದುವರೆಯಲಿಲ್ಲ. ಕಳೆದ ವರ್ಷ ಜೂನ್ 15 ರೊಳಗಾಗಿ ಸರಾಸರಿ 222.9 ಮಿ.ಮಿ. ಮಳೆಯಾಗಿತ್ತು. ಈ ವರ್ಷ ಇದೇ ಅವಧಿಯಲ್ಲಿ ಕೇವಲ 171.7 ಮಿ.ಮಿ. ಮಳೆಯಾಗಿದೆ. ಅಂದರೆ 51 ಮಿ.ಮಿ. ರಷ್ಟು ಕಡಿಮೆ ಮಳೆಯಾಗಿದೆ. ಇದರಿಂದಾಗಿ ಬಿತ್ತನೆಗೆ ಬಾರೀ ಹಿನ್ನಡೆಯಾಗಿದೆ.

ಈ ಸಲ ಮುಂಗಾರು ಕೊರತೆಯಿಂದಾಗಿ ಕೋಲಾರ ಜಿಲ್ಲೆಯಲ್ಲಿ ಬಿತ್ತನೆ ಆಗಬೇಕಾಗಿದ್ದ 1.02 ಲಕ್ಷ ಹೇಕ್ಟೆರ್ ಭೂಮಿಯಲ್ಲಿ ಬಿತ್ತನೆ ಆಗಿರುವುದು ಅತ್ಯಲ್ಪ. ಸುಮಾರು 7,000 ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆಯಾದ್ದರೂ ಮಳೆ ಕೊರತೆಯಿಂದ ಬಿತ್ತಿದ ಬೀಜ ಮಣ್ಣು ಪಾಲಾಗಿದೆ. ಇಷ್ಟರೊಳಗಾಗಿ 15,000 ರಿಂದ 16,000 ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆ ಕಾರ್ಯ ಮುಗಿದಿರಬೇಕಾಗಿತ್ತು ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಸಿ.ಚಿಕ್ಕಣ್ಣ ಹೇಳುತ್ತಾರೆ. 15 ರಿಂದ 20 ಮಿ.ಮಿ. ರಷ್ಟು ಮಳೆಯಾಗಿದ್ದರೂ ಬಿತ್ತನೆ ನಡೆಸಬಹುದಾಗಿತ್ತು. ಇತ್ತೀಚೆಗೆ ಆಗಿರುವ ಅಲ್ಪ ಸ್ವಲ್ಪ ಮಳೆ ಬಿತ್ತನೆಗೆ ಸಾಲದು. ಮಣ್ಣಿನಲ್ಲಿ ತೇವಾಂಶದ ಕೊರತೆ ಇರುವಾಗ ಬೀಜ ಮೊಳಕೆಯೊಡೆಯುವುದಿಲ್ಲ.

ಈಗಾಗಲೇ ಆಗಿರುವ ಮಳೆ ರಾಗಿ, ಹುರುಳಿ ಮೊದಲಾದ ಅಲ್ಪಾವಧಿ ಬೆಳೆಗಳಿಗೆ ಸಹಕಾರಿಯಾಗಿದ್ದರೂ ಕಡಲೆಕಾಯಿ, ತೊಗರಿ, ಭತ್ತದಂತಹ ದೀರ್ಘಾವಧಿ ಬೆಳೆಗಳನ್ನು ಬೆಳೆಯಲು ಸಾಕಾಗುವುದಿಲ್ಲ. ಇಷ್ಟರೊಳಗಾಗಿ ಮಳೆ ಆಗದಿದ್ದರೆ ಈ ವರ್ಷ ಕಡಲೆಕಾಯಿ ಬೆಳೆಯುವುದನ್ನು ಮರೆತುಬಿಡಬೇಕಾಗುತ್ತದೆ. ಕಡಲೆಕಾಯಿ, (ನೆಲಕಡಲೆ) ಕೋಲಾರ ಜಿಲ್ಲೆಯ ಒಂದು ಪ್ರಮುಖ ಬೆಳೆಯಾಗಿದೆ.

ಕೃಷಿ ಅಧಿಕಾರಿಯ ಪ್ರಕಾರ ಜಿಲ್ಲೆಯಲ್ಲಿ ಬೀಜ ಮತ್ತು ರಸಗೊಬ್ಬರಗಳಿಗೆ ಕೊರತೆ ಇಲ್ಲ. ಕೃಷಿ ಇಲಾಖೆ, ಖಾಸಗಿ ವ್ಯಾಪಾರಿಗಳು ಮತ್ತು ಸಹಕಾರಿ ಸಂಘಗಳ ಅಡಿಯಲ್ಲಿ 16,240 ಟನ್ ರಸಗೊಬ್ಬರ ಲಭ್ಯವಿದೆ. ಆದರೆ ರೈತರು, ಮಳೆಯ ಅಭಾವದಿದಾಗಿ, ಬೀಜವನ್ನು ಮತ್ತು ರಸಗೊಬ್ಬರಗಳನ್ನು ಕೊಂಡುಕೊಳ್ಳಲು ಮುಂದೆ ಬರುತ್ತಿಲ್ಲ.

ಬರಿದಾದ ಬಸವಸಾಗರ

ಯಾದಗಿರಿ ಜಿಲ್ಲೆಯ ರೈತರ ಜೀವನಾಡಿಯಾಗಿರುವ ನಾರಾಯಣಪುರ(ಬಸವಸಾಗರ) ಜಲಾಶಯ ಬರಿದಾಗಿದೆ. ಕೊಳವೆ ಬಾವಿ ನೀರನ್ನು ಬಳಸಿ ರೈತರು ಬತ್ತದ ಸಸಿ ಬೆಳೆಸಿದ್ದಾರೆ. 45 ದಿನಗಳ ಬಳಿಕ ನಾಟಿ ಮಾಡಬೇಕು. ಜೂನ್ ಮೊದಲ ವಾರದಲ್ಲಿ ಹಾಕಿದ ಸಸಿ ಇಷ್ಟರೊಳಗಾಗಿ ನಾಟಿಯಾಗಬೇಕಾಗಿತ್ತು. 45 ದಿನ ದಾಟಿದ ಮೇಲೆ ನಾಟಿ ಮಾಡಿದರೆ ಇಳುವರಿ ಕಡಿಮೆ ಆಗುತ್ತದೆ. ಇದುವರೆಗೂ ಕಾಲುವೆಯಲ್ಲಿ ನೀರು ಹರಿಯದೆ ಇರುವುದರಿಂದ ನಾಟಿ ಮಾಡಲಾಗದೆ ರೈತರು ಆತಂಕಕ್ಕೆ ಒಳಗಾಗಿದ್ದಾರೆ.

ಇತರ ನೀರಾವರಿ ಅಚ್ಚುಕಟ್ಟು ಪ್ರದೇಶಗಳಂತೆ ಇಲ್ಲಿಯೂ ರೈತರು ವರ್ಷಕ್ಕೆ ಎರಡು ಬಾರಿ ಬತ್ತದ ಬೆಳೆ ಬೆಳೆಯುತ್ತಾರೆ. ಕಳೆದ ವರ್ಷ ಹಿಂಗಾರಿ ಬತ್ತ ಬೆಳೆಯುವ ಸಮಯದಲ್ಲಿ ಕಾಲುವೆ ರಿಪೇರಿ ಹೆಸರಿನಲ್ಲಿ ನೀರು ಬಿಟ್ಟಿರಲಿಲ್ಲ. ಆದ್ದರಿಂದ ಬತ್ತ ಬೆಳೆಯಲು ಸಾಧ್ಯವಾಗಿರಲಿಲ್ಲ. ಬಹುದಿನಗಳ ಬೇಡಿಕೆಯಾದ ನಾರಾಯಣಪುರ ಎಡದಂಡೆ ಕಾಲುವೆ ನವೀಕರಣ ಕಾಮಗಾರಿ ಮುಗಿದಿದೆ. ಆದರೆ ರೈತರ ಭವಣೆ ಮುಗಿಯುವ ಲಕ್ಷಣಗಳು ಕಾಣುತ್ತಿಲ್ಲ. ಬತ್ತದ ನಾಟಿಗಾಗಿ ಸಸಿಗಳನ್ನು ಸಿದ್ಧಪಡಿಸಿಕೊಂಡಿರುವ ರೈತರು ಕಾಲುವೆಗಳಲ್ಲಿ ನೀರು ಹರಿದು ಬರುವುದನ್ನೇ ಎದುರು ನೋಡುತ್ತಿದ್ದಾರೆ. ಸುಮಾರು 200 ಕೋಟಿ ರೂ ವೆಚ್ಚಮಾಡಿ ಮುಖ್ಯ ಕಾಲುವೆ ನವೀಕರಣಗೊಂಡಿದ್ದು ತಮ್ಮ ಭೂಮಿಗೂ ಈ ಸಲ ನೀರು ಹರಿದು ಬರಲಿದೆ ಎಂಬ ನಿರೀಕ್ಷೆಯಲ್ಲಿದ್ದ ಕಾಲುವೆಯ ಕೊನೆಯ ಭಾಗದ ರೈತರಿಗೆ ಮತ್ತೊಮ್ಮೆ ನಿರಾಸೆಯಾಗಿದೆ.

ಬಸವಸಾಗರ ಜಲಾಶಯದಲ್ಲಿ ಇದೀಗ ಕೇವಲ 5 ಟಿಎಂಸಿ ನೀರು ಸಂಗ್ರಹವಿದೆ ಎಂದು ಕೃಷ್ಣಾ ಭಾಗ್ಯ ಜಲ ನಿಗಮದ ಅಧಿಕಾರಿಗಳು ಹೇಳುತ್ತಿದ್ದಾರೆ. ಸದ್ಯಕ್ಕೆ 1,408 ಕ್ಯೂಸೆಕ್ಸ್ ಒಳಹರಿವಿದ್ದು 208 ಕ್ಯೂಸೆಕ್ಸ್ ನೀರನ್ನು ಹೊರಗೆ ಬಿಡಲಾಗುತ್ತಿದೆ. ಅಗತ್ಯ ಪ್ರಮಾಣಧ ನೀರು ಲಭ್ಯ ಇಲ್ಲದಿರುವುದರಿಂದ ನೀರಾವರಿ ಕಾಲುವೆಗೆ ನೀರು ಹರಿಸುವುದು ಸಾಧ್ಯವಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಜಿಲ್ಲೆಯಾದ್ಯಂತ ವಾಡಿಕೆಗಿಂತ 204 ಮಿ.ಮಿ. ಕಡಿಮೆ ಮಳೆಯಾಗಿದೆ. ಬಿತ್ತನೆಯಾಗಬೇಕಾಗಿದ್ದ 2,68,238 ಹೆಕ್ಟೇರ್ ಭೂಮಿಯಲ್ಲಿ ಕೇವಲ 53,606 ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆಯಾಗಿದೆ. ಭತ್ತ, ತೊಗರಿ, ಹೆಸರು, ಉದ್ದು ಇಲ್ಲಿಯ ಪ್ರಮುಖ ಬೆಳೆಗಳು. ಮಳೆ ಕೊರತೆಯಿಂದಾಗಿ ಬಿತ್ತಿದ ಬೀಜ ಮೊಳಕೆಯೊಡೆಯುವ ಹಂತದಲ್ಲೇ ಕಮರಿಹೋಗುತ್ತಿದೆ. ರಾಜ್ಯದ ಬಹುತೇಕ ಜಲಾಶಯಗಳ ಪರಿಸ್ಥಿತಿ ಇದೇ ರೀತಿಯಲ್ಲಿದ್ದು ನೀರಾವರಿ ಪ್ರದೇಶದ ರೈತರು ಸಹ ಬರದ ಬಿಸಿಯನ್ನು ಅನುಭವಿಸುತ್ತಿದ್ದಾರೆ.



ಭೂ ಸುಧಾರಣಾ ಕಾಯ್ದೆಗೆ ತರುತ್ತಿರುವ ಮಾರಕ ಜನ ವಿರೋಧಿ ತಿದ್ದುಪಡಿ ವಿರೋಧಿಸಿ ಜುಲೈ 14 ರಂದು ಬೆಂಗಳೂರು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ತಿದ್ದುಪಡಿ ಮಸೂದೆಯ ಪ್ರತಿ ದಹನ
ಕೆಪಿಆರ್‌ಎಸ್–ಕೃಷಿಕೂಲಿಕಾರ ಸಂಘಟನೆಗಳಿಂದ

ಜಲಾಶಯಗಳ ನೀರಿನ ಮಟ್ಟ
24–07–2012 ವರೆಗೆ

	ಪ್ರಸ್ತುತಸಂಗ್ರಹ	ಗರಿಷ್ಠ ಸಾಮರ್ಥ್ಯ
ಕೆಆರ್‌ಎಸ್	75.30	124 ಅಡಿ
ಹೇಮಾವತಿ	2887	2922 ಅಡಿ
ಹಾರಂಗಿ	2835.95	2859 ಅಡಿ
ಕಬಿನಿ	2269.09	2284 ಅಡಿ
ಆಲಮಟ್ಟಿ	508.66	519.60 ಅಡಿ
ತುಂಗಭದ್ರಾ	1595.45	1633 ಅಡಿ
ಲಿಂಗನಮಕ್ಕಿ	1759.55	1819 ಅಡಿ
ಭದ್ರಾ	142.00	186 ಅಡಿ

ಕೃಪೆ : ವಿಜಯವಾಣಿ

ಕರ್ನಾಟಕ ರಾಜ್ಯದಲ್ಲಿ ಮಳೆ ಕೊರತೆ – ಬರ ಪರಿಸ್ಥಿತಿ

ಮಳೆ ತೀವ್ರ ಕೊರತೆ	12–07–2012 ವರೆಗೆ		
ಜಿಲ್ಲೆ	ವಾಡಿಕೆ ಮಳೆ	ಈ ಬಾರಿ ಮಳೆ	ಕೊರತೆ
ಬೀದರ್	189.4	210.4	11
ಗುಲ್ಬರ್ಗಾ	155.9	120.9	–22
ಯಾದಗಿರಿ	149.2	117.4	–21
ವಿಜಾಪುರ	117.5	64.3	–45
ಬಾಗಲಕೋಟೆ	99.1	48	–52
ಬೆಳಗಾವಿ	220.1	112	–49
ಕೊಪ್ಪಳ	89.5	31.5	–65
ಬಳ್ಳಾರಿ	90	26.9	–70
ಹಾವೇರಿ	178.5	67.6	–62
ಚಿತ್ರದುರ್ಗ	67.6	19.8	–71
ಬೆಂಗಳೂರ ಗ್ರಾ, ಜಿ	93.9	27.2	–71
ಬೆಂಗಳೂರ ನಗರ	91.4	17.6	–81
ಮಂಡ್ಯ	67.7	23.1	–66
ಚಾಮರಾಜನಗರ	75.5	26.9	–64
ಕೊರತೆ			
ರಾಯಚೂರು	106.06	56.2	–47
ಗದಗ	108.8	44.4	–59
ಧಾರವಾಡ	176.5	72	–59
ಶಿವಮೊಗ್ಗ	740.5	390	–47
ದಾವಣಗೆರೆ	104.6	41.8	–60
ತುಮಕೂರು	81.7	30	–63
ಹಾಸನ	246.8	116.7	–53
ಚಿಕ್ಕಬಳ್ಳಾಪುರ	86.7	38.2	–56
ಕೋಲಾರ	85.4	53.7	–37
ರಾಮನಗರ	93.2	19.6	–79
ಮೈಸೂರು	129.3	54.6	–58
ಸಾಮಾನ್ಯ:–			
ಉತ್ತರ ಕನ್ನಡ	987	682.3	–31
ಉಡುಪಿ	1,771.7	1,287.6	–27
ಚಿಕ್ಕಮಂಗಳೂರು	471.6	252.2	–47
ದಕ್ಷಿಣ ಕನ್ನಡ	1,394.4	1,43.1	–25
ಕೊಡಗು	964.3	500.7	–48

ಕೃಪೆ : ವಿಜಯವಾಣಿ

ಆಹಾ ಬಿಜೆಪಿ ಸರ್ಕಾರದ ಸಾಮರಸ್ಯವೇ ??

ಅದು 2008 ರ ರಾಜ್ಯ ವಿಧಾನ ಸಭಾ ಚುನಾವಣೆಯ ಸಂದರ್ಭ. ಬಿಜೆಪಿ ಪಕ್ಷ ತಾನು ಕರ್ನಾಟಕದಲ್ಲಿ ದಕ್ಷಿಣ ಭಾರತದ ಮೊದಲ ಸರ್ಕಾರವನ್ನು ರಚಿಸಿಯೇ ತೀರುತ್ತೇನೆಂದು ಹೇಳಿಕೊಂಡು ಹೊರಟಿತ್ತು. ರಾಜ್ಯದ ಪ್ರಜಾಪ್ರಭುತ್ವವಾದಿಗಳಿಗೆ, ಕರ್ನಾಟಕ ರಾಜ್ಯದ ಜನರಲ್ಲಿ ಬಿಜೆಪಿ- ಸಂಘಪರಿವಾರಗಳು ತಾವು ಬಯಸಿದಷ್ಟು ಕೋಮು ಧೃವೀಕರಣವನ್ನು ತರಲು ಸಾಧ್ಯವಾಗಿಲ್ಲ, ರಾಜ್ಯದ ವಿಶಾಲ ಜನ ಸಮುದಾಯ ಇನ್ನೂ ಬಹುಪಾಲು ಜಾತ್ಯತೀತರಾಗಿದ್ದಾರೆ ಎಂಬ ಭರವಸೆ ಇತ್ತು. ಆದರೆ ಸಂಘಪರಿವಾರ ರಾಜ್ಯದ ಅಧಿಕಾರವನ್ನು ಹಿಡಿಯಲು ಕೇವಲ ಕೋಮುವಾದವನ್ನು ಮಾತ್ರ ನಂಬಿಕೊಂಡು ಕೂತಿರಲಿಲ್ಲ. ಅದರ ಬತ್ತಳಿಕೆಯಲ್ಲಿ ನಾನಾ ಬಾಣಗಳಿದ್ದವು. ಜಾತಿವಾದ, ಕೋಮುವಾದ, ಆಪರೇಷನ್ ಕಮಲವೆಂಬ ಅನೈತಿಕ ಭ್ರಷ್ಟ ಕಾರ್ಯಾಚರಣೆ, ಅಧಿಕಾರದ ಆಮಿಷವೊಡ್ಡುವುದು, ಪಕ್ಷಾಂತರ ...ಹೀಗೆ ಅದು ಅದು ಮಾಡದ ಕೆಲಸವೇ ಇರಲಿಲ್ಲ.

ರಾಜ್ಯದ ಖನಿಜ ಸಂಪತ್ತನ್ನು ಕೊಳ್ಳೆ ಹೊಡೆದು ಇನ್ನಷ್ಟು ದೋಚಲು ಸಿದ್ದರಾಗುತ್ತಿದ್ದ ಜನಾರ್ಧನ ರೆಡ್ಡಿ ಗ್ಯಾಂಗ್ ರಾಜ್ಯ ರಾಜಕಾರಣದಲ್ಲಿ ತನ್ನ ಆಟಾಟೋಪ ನಡ್ಡೆಸುತ್ತಿತ್ತು. ಪಕ್ಷದೊಳಗೆ ಕಚ್ಚಾಟ, ಕಿತ್ತಾಟ, ಟಿಕೆಟ್‌ಗಾಗಿ ಬಡಿದಾಟ ಎಳೆದಾಟಗಳು ನಡೆಯುತ್ತಿದ್ದವು.

ಆಗಿನ ಸಂದರ್ಭದ ಆ ಪರಿಸ್ಥಿತಿ, ಬಿಜೆಪಿ ಪಕ್ಷದ ಚಹರೆ, ನೈತಿಕ ಅಧೋಗತಿಯನ್ನು ನೋಡಿದರೆ ಮತ್ತು ಟಿಕೆಟ್ ವಂಚಿತರು ಅಂದು ಬಿಜೆಪಿ ಪಕ್ಷದೊಳಗೆ ನಡೆಯುತ್ತಿದ್ದುದರ ಬಗೆಗೆ ಹೇಳಿದ್ದ ಮಾಹಿತಿಯನ್ನು ಗಮನಿಸಿದರೆ ಮುಂದೆ ಒಂದೊಮ್ಮೆ ಬಿಜೆಪಿ ಅಧಿಕಾರಕ್ಕೆ ಬಂದು ಬಿಟ್ಟರೆ ಅದು ಎಂತಹ ಸರ್ಕಾರ ಕೊಡಬಲ್ಲುದು ಎಂಬುದನ್ನು ಸಾರುತ್ತಿತ್ತು. ಮುಂದೆ ಯಡಿಯೂರಪ್ಪ, ಸದಾನಂದ ಗೌಡರ ನೇತೃತ್ವದ ಸರ್ಕಾರಗಳು ರಾಜ್ಯದ ಅಭಿವೃದ್ಧಿಗೆ ಕೊಟ್ಟ ಅಮೋಘ ಕೊಡುಗೆಯನ್ನು ದೇಶದ ಜನರೆಲ್ಲಾ ನೋಡುವಂತಾಯಿತು.

ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಈಗ ಜಗದೀಶ್ ಶೆಟ್ಟರ್ ನೇತೃತ್ವದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಈಗಿನ ಈ ಸನ್ನಿವೇಶ ಹೇಗಿದೆ ? ಬಿಜೆಪಿಯ ವಿರೋಧಿಗಳನ್ನು ಬಿಡಿ, ಬಿಜೆಪಿಯೊಳಗಿನ ಜನ ಬಿಜೆಪಿಯ ಸುತ್ತಮುತ್ತಲ ಜನ ಏನು ಹೇಳುತ್ತಿದ್ದಾರೆಂದು ನೋಡಿದರೆ ಈ ಸರ್ಕಾರ ಜನತೆಗೆ ಏನು ಕೊಡುಗೆ ಕೊಡಬಹುದು ಎಂಬುದು ಸ್ಪಷ್ಟವಾಗುತ್ತದೆ.

ಮುಂದೆ ಅಂತಹ ಕೆಲವು ಹೇಳಿಕೆಗಳಿವೆ. ಓದಿ ನೋಡಿ ನೀವೇ ತೀರ್ಮಾನಿಸಿ.

3 ಲಕ್ಷದ ಕಾಮಗಾರಿಗೆ 30 ಲಕ್ಷ ರೂ

"ಕೆರೆ ಹೂಳೆತ್ತುವ ಕಾಮಗಾರಿಯಲ್ಲಿ ಬಾರಿ ಅವ್ಯವಹಾರ ನಡೆದಿದೆ. 3 ಲಕ್ಷ ರೂಗಳಲ್ಲಿ ಆಗುವ ಕಾಮಗಾರಿಗೆ 30 ಲಕ್ಷ ರೂ. ಖರ್ಚು ಮಾಡಲಾಗಿದೆ. ಅವ್ಯವಹಾರದಲ್ಲಿ ಅಧಿಕಾರಿಗಳು ಹಾಗೂ ಕೆಲಜನಪ್ರತಿನಿಧಿಗಳು ಭಾಗಿಯಾಗಿದ್ದಾರೆ. ಇದರ ಬಗೆಗೆ ಸರ್ಕಾರ ಸಿಒಡಿ ತನಿಖೆ ನಡೆಸಬೇಕು." ಎಂದು ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ ಅವರು ಮೇಲ್ಮನೆಯಲ್ಲಿ ಜುಲೈ



25 ರಂದು ಸಣ್ಣ ನೀರಾವರಿ ಸಚಿವರ ವಿರುದ್ದ ಗಂಭೀರ ಆರೋಪ ಮಾಡುತ್ತಾರೆ.

ಭಾರತಿ ಶೆಟ್ಟಿಯವರೇನು ವಿರೋಧ ಪಕ್ಷದ ಮುಖಂಡರಲ್ಲ. ಅವರು ಬಿಜೆಪಿ ಪಕ್ಷದ ಮೇಲ್ಮನೆ ಸದಸ್ಯೆ. ಕಾರಜೋಳ ಆರೋಪ ನಿರಾಕರಿಸುತ್ತಾರೆ. ವರದಿ ಪಡೆದುಕೊಳ್ಳುತ್ತೇನೆ ಎಂದು ಹೇಳುತ್ತಾರೆ.

ಜೆನರಿಕ್ ಔಷಧಿ ಹಗರಣ ??

"ಕಡಿಮೆ ಬೆಲೆಗೆ ಔಷಧಿ ಸರಬರಾಜು ಮಾಡುವುದಾಗಿ ಸುಳ್ಳು ಹೇಳಿ 10 ಪಟ್ಟು ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಈ ಅಕ್ರಮದಲ್ಲಿ ವೈದ್ಯಕೀಯ ಸಚಿವ ಎ. ರಾಮದಾಸ್ ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗಿಯಾಗಿದ್ದಾರೆ. ಅಕ್ರಮದಲ್ಲಿ ಭಾಗಿಯಾಗಿರುವ ಸಚಿವರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಬೇಕು. ಜೆನರಿಕ್ ಔಷಧಿ ಮಾರಾಟಕ್ಕೆ ಅವಕಾಶ ಕೋರಿ ಖಾಸಗಿ ಸಂಸ್ಥೆಗಳು ಸಲ್ಲಿಸಿದ ಮನವಿಗೆ ಒಂದೆರಡು ದಿನದಲ್ಲೇ ಒಪ್ಪಿಗೆ ನೀಡಲಾಗಿದೆ. ಇದಕ್ಕೆ ಪೂರಕವಾಗಿ ಮಳಿಗೆಗಳನ್ನು ಕೂಡ ಆರಂಭಿಸಲಾಯಿತು. ತರಾತುರಿಯ ತೀರ್ಮಾನಗಳನ್ನು ಗಮನಿಸಿದರೆ ಅಕ್ರಮಗಳು ನಡೆದಿರುವ ಬಗೆಗೆ ಶಂಕೆ ಇದ್ದು ತನಿಖೆ ನಡೆಸಬೇಕು." ಎಂದು ಶಾಸಕ ಡಾ. ಸಾರ್ವಭೌಮ ಬಗಲಿ ಜುಲೈ 23, 2012 ರಂದು ವಿಧಾನ ಸಭೆಯಲ್ಲಿ ಗಂಭೀರ ಟೀಕೆ ಮಾಡಿದರು.

ಈ ಟೀಕೆಗೆ ಸಚಿವ ರಾಮದಾಸ್ ಅವರು ಬಗಲಿಯವರು ತೋರಿಸಿರುವ ಬಿಲ್‌ಗಳು ವಿಕ್ಟೋರಿಯಾ ಆಸ್ಪತ್ರೆ ಆವರಣದ ಜೆನರಿಕ್ ಮಳಿಗೆಯವಲ್ಲ. ಸರ್ಕಾರಿ ಮೆಡಿಕಲ್ ಕಾಲೇಜು ಆವರಣಕ್ಕೆ ಸೇರಿದ ಜೆನರಿಕ್ ಮಳಿಗೆಯದ್ದು ಎಂದು ಸ್ಪಷ್ಟೀಕರಣ ಕೊಡಲು ಪ್ರಯತ್ನಿಸಿದ್ದಾರೆ. ಆದರೆ ಸಚಿವರ ಸ್ಪಷ್ಟನೆ ಒಪ್ಪದ ಡಾ. ಬಗಲಿಯವರು ಮತ್ತೆ ತಮ್ಮ ವಾದ ಪುನರುಚ್ಚರಿಸಿದ್ದಾರೆ. ಈ ಬಗ್ಗೆ ಸೂಕ್ತ ಪರಿಶೀಲನೆ, ಅಗತ್ಯವಿದ್ದಲ್ಲಿ ತನಿಖೆ ನಡೆಯಬೇಕಿದೆ. ಇಷ್ಟಕ್ಕೂ ಡಾ. ಬಗಲಿಯವರು ಯಾವ ಪಕ್ಷದವರು ? ಅದೇ ರಾಮದಾಸ್‌ರವರ ಬಿಜೆಪಿ ಪಕ್ಷದವರು.

ಭ್ರಷ್ಟರೇ ಮಂತ್ರಿಗಳು

"ಬಿಜೆಪಿ ಸಂಪುಟದಲ್ಲಿರುವ ಮಂತ್ರಿಗಳು ಭ್ರಷ್ಟರು, ವಿವಿಧ ಆರೋಪ ಹೊತ್ತಿರುವವರೇ ಮಂತ್ರಿಗಳಾಗಿದ್ದಾರೆ. ರಾಜಕೀಯ ಇತಿಹಾಸದಲ್ಲಿ ಇಂತಹ ಭ್ರಷ್ಟ ಮಂತ್ರಿಗಳನ್ನು ಎಂದೂ ಕಂಡಿರಲಿಲ್ಲ. ಸಾವಿರಾರು ಕೋಟಿ ಲೂಟಿ ಹೊಡೆದವರಿಗೆ ಸಚಿವ ಸ್ಥಾನ ನೀಡಲಾಗಿದೆ. ಇದನ್ನು ಪ್ರಶ್ನಿಸಿದರೆ ಆರೋಪ ಇನ್ನೂ ಸಾಬೀತಾಗಿಲ್ಲ ಎನ್ನುತ್ತಾರೆ. ಉಪ ಮುಖ್ಯಮಂತ್ರಿ ಅಶೋಕ್, ಸಚಿವರಾದ ವಿ.ಸೋಮಣ್ಣ, ಸಿ.ಟಿ.ರವಿ, ರೇಣುಕಾಚಾರ್ಯ, ಆನಂದ ಸಿಂಗ್ ಇತರರ ಮೇಲೆ ಅನೇಕ ಹಗರಣದ ಆರೋಪಗಳಿವೆ. ಇವರಿಗೆ ಸಚಿವಸ್ಥಾನ ನೀಡಿರುವುದು ಎಷ್ಟು ಸರಿ ? ಎಂದು ಹೊಳಲ್ಕೆರೆ, ಬಿಜೆಪಿ ಶಾಸಕ ಎಂ. ಚಂದ್ರಪ್ಪ ಹೇಳಿದರೆ " ಸಚಿವ ರಾಮದಾಸ್ ಯಾರ ಚೇಲಾ ಅಂತ ಗೊತ್ತಿದೆ. ಏಟ್ರಿಯಾ ಹೋಟೆಲ್‌ನಲ್ಲಿ ಭಿನ್ನಮತ ಆರಂಭಿಸಿದ್ದೇ ರಾಮದಾಸ್. ಈಗ ಅವರು ನಮಗೆ ಬುದ್ದಿ ಹೇಳಬೇಕಿಲ್ಲ." ಎಂದು ಮತ್ತೊಂದು ಪ್ರಸಂಗದಲ್ಲಿ ಬಿಜೆಪಿ ಶಾಸಕ ಬೇಳೂರ ಗೋಪಾಲಕೃಷ್ಣ ಕುಟುಕಿದ್ದಾರೆ.

ಬೇಳೂರು ಗೋಪಾಲಕೃಷ್ಣರಿಗೆ ಬಿಜೆಪಿ ಸಂಸ್ಕೃತಿ ಗೊತ್ತಿಲ್ಲ. ಅವರು ಬೇರೆ ಪಕ್ಷದಿಂದ ಬಂದವರು ಎಂದು ಬಿಜೆಪಿ ಪಕ್ಷದ ರಾಜ್ಯ ಅಧ್ಯಕ್ಷ ಈಶ್ವರಪ್ಪನವರು ಹೇಳುತ್ತಾರೆ. ಆದರೆ ಈ ಮುಂದಿನ ಹೇಳಿಕೆ ಕೊಟ್ಟಿರುವುದು ಬಿಜೆಪಿ ಸಂಸ್ಕೃತಿಗೆ ಹೊಸಬರೇನು ಅಲ್ಲ. ಅವರು ಬಿಜೆಪಿ ಹಿರಿಯರ ವೇದಿಕೆಯ ಮುಖಂಡರು.

"ನೂತನ ಸರ್ಕಾರದಲ್ಲಿರುವ ಕಳಂಕಿತ ಸಚಿವರನ್ನು ಕೈಬಿಟ್ಟು ಪ್ರಾಮಾಣಿಕರಿಗೆ ಸಚಿವ ಸ್ಥಾನ ನೀಡಬೇಕು" ಅಂತ ಬಿಜೆಪಿ ಹಿರಿಯರ ವೇದಿಕೆಯ ಹಲವಾರು ಜನ ಹಿರಿಯರ ಪರವಾಗಿ ಬಿಜೆಪಿ ಪಕ್ಷದ ಮಾಜಿ ರಾಜ್ಯ ಅಧ್ಯಕ್ಷ ಬಿ.ಬಿ. ಶಿವಪ್ಪ ಹೇಳಿದ್ದಾರೆ.

ಬಿಜೆಪಿ ದರ್ಬಾರ್



ಆರ್. ರಾಮಕೃಷ್ಣ

ಬಾಲಂಗೋಚಿ

ಕರ್ನಾಟಕ ರಾಜ್ಯದ ಬಿಜೆಪಿ ವರಾತಗಳನ್ನು ಕೇಳ್ತಾ, ನೋಡ್ತಾ ಇದ್ದರೆ ತಲೆ ಚಿಟ್ಟು ಹಿಡಿಯುತ್ತದೆ. ಅದು ಬೇಡ ಅಂದರೆ ಪ್ರಧಾನಿ ಆಕಾಂಕ್ಷಿ ಬಿಜೆಪಿಗರ ಕಣ್ಮಣಿ ನರೇಂದ್ರ ಮೋದಿಯವರ ಬಗೆಗೆ ಅದೇ ಪಕ್ಷದ ಹಿರಿಯ ಮುಖಂಡರು ಏನು ಹೇಳುತ್ತಾರೆ ನೋಡಿ.

"ಮೋದಿ ಒಬ್ಬ ದಪ್ಪ ಚರ್ಮದ ಘೇಂಡಾಮೃಗ. ಅವರೂಬ್ಬ ಎಸೆಯಬೇಕಾದ ಸ್ಥಿತಿಯಲ್ಲಿರುವ ಕೊಳೆತ ಹಣ್ಣು"

– ಕೇಶುಭಾಯ್ ಪಟೇಲ್
ಬಿಜೆಪಿ ನಾಯಕ ಗುಜರಾತ್

★

"ಬಿಜೆಪಿ ಪಕ್ಷದಲ್ಲಿ ಈಗ ಆಗುತ್ತಿರುವ ಎಲ್ಲ ಅವಾಂತರಗಳಿಗೆ ನಾನೇ ಮೂಲ ಕಾರಣೀಕರ್ತ ಎನ್ನುತ್ತಿದ್ದಾರೆ. ಈ ಆರೋಪವನ್ನು ಸ್ವೀಕರಿಸುತ್ತೇನೆ. ಇದು ನನಗೆ ಸಿಕ್ಕ ಕ್ರೆಡಿಟ್"

ನ್ಯಾ. ಸಂತೋಷ ಹೆಗ್ಡೆ

ಬರದ ಬೇಗೆ;

ಯಜ್ಞ-ಯಾಗ ಪರಿಹಾರವೇ ?

ಬರದಿಂದ ರಾಜ್ಯವೇ ಕಂಗೆಟ್ಟಿದೆ. ಮೇವು ನೀರಿಗೆ ತತ್ವಾರ ಬಂದಿದೆ. ಜೊತೆಗೆ ಸರ್ಕಾರ ಮೇವು, ನೀರು ಇರುವ ಕಡೆಯಿಂದ ಇಲ್ಲದ ಕಡೆಗೆ ಪೂರೈಸುವ ವ್ಯವಸ್ಥೆ ಮಾಡಬೇಕು. ಇದನ್ನು ಬಿಟ್ಟು ಸರ್ಕಾರ ದೇವರ ಮೊರೆ ಹೊಕ್ಕಿದೆ! ಮೋಡ ಬಿತ್ತನೆ ಮಾಡಿಸುವುದಾಗಿ ಹೇಳುತ್ತಿದ್ದ ಸರಕಾರ ಏನೊಂದೂ ಮಾಡದೇ ಇದ್ದಕ್ಕಿದ್ದ ಹಾಗೆ ರಾಜ್ಯದಲ್ಲಿ ಮುಜರಾಯಿ ಇಲಾಖೆ ಅಡಿಯಲ್ಲಿರುವ 34,266 ದೇವಸ್ಥಾನಗಳಲ್ಲಿ ಅಭಿಷೇಕ, ಜಲಾಭಿಷೇಕ, ಪೂಜೆ, ಯಾಗ, ಜಲಮಂತ್ರ ಜಪ ಇತ್ಯಾದಿ ಮಾಡಿ ಮಳೆ ಬರಿಸುವ ವಿನೂತನ ತಂತ್ರಕ್ಕೆ ಇಳಿದಿದೆ. ಅದಕ್ಕಾಗಿ ತಲಾ 5,000 ರೂಪಾಯಿಗಳವರೆಗೂ ಖರ್ಚು ಮಾಡಲು ಸೂಚಿಸಿದೆ. ಭಕ್ತರ ಕಾಣಿಕೆ ಹಣ ವೆಚ್ಚ ಮಾಡಲು ಸೂಚಿಸಿರುವುದಾಗಿ ಹೇಳತೊಡಗಿದೆ. ಮತನಿರಪೇಕ್ಷಿತವಾಗಿ ವರ್ತಿಸಬೇಕಾದ ಸರಕಾರ ಹೀಗೆ ಒಂದು ಧಾರ್ಮಿಕ ಆಚರಣೆ ಅನುಸರಿಸುವುದು ಸಂವಿಧಾನ ವಿರೋಧಿ. ಮಾತ್ರವಲ್ಲ, ಜವಾಬ್ದಾರಿಯಿಂದ ಜಾರಿಕೊಳ್ಳುವ ವಂಚನೆ ಮತ್ತು ಮೂಢ ನಂಬಿಕೆಗೆ ಕುಮ್ಮಕ್ಕು.


"ಆದಿವಾಸಿಗಳ ಹಕ್ಕುಗಳಿಗಾಗಿ ಹೋರಾಟ ನಿಲ್ಲದು"

ಜಾಮೀನಿನ ಮೇಲೆ ಬಿಡುಗಡೆಯಾಗಿರುವ ವಿಠಲ ಮಲೆಕುಡಿಯ ಘೋಷಣೆ.

"ನನ್ನನ್ನು ಮತ್ತು ನನ್ನ ತಂದೆಯನ್ನು ಬಂಧಿಸಿ ಜೈಲಿಗೆ ಕಳುಹಿಸುವ ಮೂಲಕ ನಮ್ಮ ಹೋರಾಟವನ್ನು ನಿಲ್ಲಿಸಲು ಸಾಧ್ಯವಿಲ್ಲ" ಎಂದು ಜಾಮೀನಿನ ಮೇಲೆ ಬಿಡುಗಡೆಯಾಗಿರುವ ಆದಿವಾಸಿ ವಿದ್ಯಾರ್ಥಿ ವಿಠಲ ಮಲೆಕುಡಿಯ ಹೇಳಿದರು. ವಿಠಲ ಮಲೆಕುಡಿಯ ಮತ್ತು ಅವರ ತಂದೆಯ ಬಿಡುಗಡೆಗಾಗಿ ರಚಿಸಲಾಗಿದ್ದ ರಕ್ಷಣಾ ಸಮಿತಿಯು ಬೆಂಗಳೂರಿನಲ್ಲಿ ಜುಲೈ 20, 2012 ರಂದು ಏರ್ಪಡಿಸಿದ್ದ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

"ಬೆಳ್ತಂಗಡಿಯಿಂದ 12 ಕಿ.ಮೀ. ದೂರದಲ್ಲಿರುವ ಕಾಡಿನಲ್ಲಿ ನಾವು ವಾಸವಿದ್ದೇವೆ. ಕುದುರೆಮುಖ ರಾಷ್ಟ್ರೀಯ ಉದ್ಯಾನದ ನೆಪದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ನಕ್ಸಲ್ ನಿಗ್ರಹ ಪಡೆ (ಎಎನ್‌ಎಫ್) ಯ ಪೋಲಿಸ್ ಅಧಿಕಾರಿಗಳು ನಕ್ಸಲ್ ಬೆಂಬಲಿಗರು ಎಂಬ ಹಣೆಪಟ್ಟಿ ಕಟ್ಟಿ ನಮ್ಮನ್ನು ಜೈಲಿಗೆ ಕಳುಹಿಸಿದರು" ಎಂದು ಆರೋಪಿಸಿದ ಅವರು ಇಂತಹ ದೌರ್ಜನ್ಯಗಳಿಂದ ಆದಿವಾಸಿಗಳ ಹಕ್ಕುಗಳಿಗಾಗಿ ಪ್ರಗತಿಪರ ಸಂಘಟನೆಗಳು ನಡೆಸುತ್ತಿರುವ ಹೋರಾಟ ನಿಲ್ಲದು" ಎಂದು ಸ್ಪಷ್ಟಪಡಿಸಿದರು.

ಮಂಗಳೂರು ವಿಶ್ವ ವಿದ್ಯಾಲಯದಲ್ಲಿ ಪತ್ರಿಕೋದ್ಯಮದ ಎರಡನೇ ಸೆಮಿಸ್ಟರ್‌ನಲ್ಲಿ ಅಧ್ಯಯನ ಮಾಡುತ್ತಿದ್ದ ವಿಠಲ ಮಲೆಕುಡಿಯ ಅವರನ್ನು ಮತ್ತು ಅವರ ತಂದೆಯನ್ನು ಪೋಲಿಸರು ಮಾರ್ಚ್ 4 ರಂದು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಸುಳ್ಳು ಆರೋಪವನ್ನು ಹೊರಸಿ ಬಂಧಿಸಲಾದ ಅವರಿಬ್ಬರನ್ನೂ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ಸಿಪಿಐ(ಎಂ), ಡಿವೈಎಫ್‌ಐ ಮತ್ತಿತರ ಪ್ರಗತಿಪರ ಸಂಘಟನೆಗಳು ಹಾಗೂ ಪ್ರಗತಿಪರ ಚಿಂತಕರು, ಬರಹಗಾರರು ಸೇರಿಕೊಂಡು ಮಂಗಳೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಹೋರಾಟಗಳನ್ನು ನಡೆಸಿದ್ದವು. ನ್ಯಾಯಾಲಯದ ಆದೇಶಕ್ಕೆ ಅನುಗುಣವಾಗಿ ವಿಶ್ವ ವಿದ್ಯಾಲಯವು ದ್ವಿತೀಯ ಸೆಮಿಸ್ಟರ್ ಪರೀಕ್ಷೆ ಬರೆಯಲು ಅವಕಾಶ ನೀಡಿತ್ತು. ಆದರೆ ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದಿರುವ ವಿಠಲ ಮಲೆಕುಡಿಯ ಅವರಿಗೆ ಹಾಜರಾತಿ ಕೊರತೆಯ ಹೆಸರಿನಲ್ಲಿ ಮುಂದಿನ ಸೆಮಿಸ್ಟರ್‌ಗೆ ಪ್ರವೇಶಾವಕಾಶ ನಿರಾಕರಿಸಿದೆ.



ಪ್ರವೇಶ ಕೊಡಬೇಕು

ಈ ವಿಷಯವನ್ನು ಎತ್ತಿಕೊಂಡು ಮಾತನಾಡಿದ ವಿಮರ್ಶಕ ಡಾ. ಕೆ. ಮರುಳಸಿದ್ದಪ್ಪ, ಪರೀಕ್ಷೆ ಬರೆಯವ ಸಂದರ್ಭದಲ್ಲಿ ಹಾಜರಾತಿ ಲೆಕ್ಕಿಸದ ವಿಶ್ವ ವಿದ್ಯಾಲಯವು ಮುಂದಿನ ಸೆಮಿಸ್ಟರ್‌ನ ಪ್ರವೇಶಕ್ಕಾಗಿ ಹಾಜರಾತಿ ಕೇಳುವುದು ತಪ್ಪಾಗುತ್ತದೆ. ಈ ವಿಚಾರದಲ್ಲಿ ವಿಶ್ವ ವಿದ್ಯಾಲಯ ಸರಿಯಾದ ನಿರ್ಧಾರ ಕೈಗೊಳ್ಳದೆ ಇದ್ದರೆ ಪ್ರಗತಿಪರ ಸಂಘಟನೆಗಳು ಬೀದಿಗಿಳಿಯಲಿವೆ ಎಂದು ಎಚ್ಚರಿಸಿದರು.

ಪ್ರಜಾಪ್ರಭುತ್ವದ ಅಣಕ

ನಂತರ ಮಾತನಾಡಿದ ಚಿಂತಕ ಜಿ.ಕೆ. ಗೋವಿಂದರಾವ್ "ಯಾವುದೇ ಆಧಾರ ಇಲ್ಲದೆ ನಕ್ಸಲ್ ಬೆಂಬಲಿಗರು ಎಂದು ಆರೋಪ ಹೊರಿಸಿ ವಿಠಲ ಮತ್ತು ಅವರ ತಂದೆಯನ್ನು ಜೈಲಿಗೆ ಕಳುಹಿಸಿದ್ದು ಪ್ರಜಾಪ್ರಭುತ್ವದ ಅಣಕ" ಎಂದು ವಿಷಾದಿಸಿದರು. ವಿಠಲ ಮಲೆಕುಡಿಯ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ ಅವರು ಮುಂದಿನ ಸೆಮಿಸ್ಟರ್‌ಗೆ ಪ್ರವೇಶ ದೊರಕಿಸಿಕೊಳ್ಳಲು ನಡೆಸುವ ಹೋರಾಟಕ್ಕೆ ಎಲ್ಲ ಪ್ರಗತಿಪರ ಸಂಘಟನೆಗಳು ಬೆಂಬಲ ನೀಡಬೇಕೆಂದು ಮನವಿ ಮಾಡಿದರು.

ಡಿವೈಎಫ್‌ಐ ಘಟಕದ ರಾಜ್ಯ ಉಪಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ ಕಾಡಿನಲ್ಲಿ ವಾಸಿಸುತ್ತಿರುವ ಆದಿವಾಸಿ ಗಿರಿಜನರು ಒಂದುಕಡೆ ನಕ್ಸಲೀಯರು ಮತ್ತೊಂದು ಕಡೆ ನಕ್ಸಲ್ ನಿಗ್ರಹ ಪಡೆಯವರ ನಡುವೆ ಅನುಭವಿಸುತ್ತಿರುವ ಕಿರುಕುಳದ ಕುರಿತು ಬೆಳಕು ಚೆಲ್ಲಿದರು. ನಿವೃತ್ತ ಪೋಲಿಸ್ ಅಧಿಕಾರಿ ಬಿ.ಕೆ. ಶಿವರಾಂ, ಡಿವೈಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಭರತ್‌ರಾಜ್, ಕಾರ್ಯದರ್ಶಿ ಬಿ.ರಾಜಶೇಖರ್ ಮೂರ್ತಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯಾರೆಡ್ಡಿ ಉಪಸ್ಥಿತರಿದ್ದರು.

"ರೇಷನ್ ಕೊಡಿ, ಕಾರ್ಡ್ ಕೊಡಿ ಇಲ್ಲದಿದ್ರೆ ಕುರ್ಚಿ ಬಿಡಿ"

ಆಹಾರ ಹಕ್ಕಿನ ಚಳುವಳಿ ಜನರಿಂದ ಉತ್ತಮ ಪ್ರತಿಕ್ರಿಯೆ

ಆಹಾರದ ಹಕ್ಕಿಗಾಗಿ ದೇಶದಾದ್ಯಂತ ಚಳುವಳಿ ನಡೆಸಲು ಎಡಪಕ್ಷಗಳು ನೀಡಿದ ಕರೆಯ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯಾದ್ಯಂತ ಸಿಪಿಐ(ಎಂ) ನೇತೃತ್ವದಲ್ಲಿ ಪ್ರಚಾರ ಪ್ರತಿಭಟನೆಗಳು ನಡೆಯುತ್ತಿವೆ. ರಾಜ್ಯದ ಸುಮಾರು 28 ಜಿಲ್ಲೆಗಳಲ್ಲಿ ಒಂದಲ್ಲ ಒಂದು ಕಾರ್ಯಕ್ರಮ ನಡೆಯುತ್ತಿದೆ.

ಈಗಾಗಲೇ ಬಂದಿರುವ ವರದಿಗಳ ಪ್ರಕಾರ ತುಮಕೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ 200ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಮಧುಗಿರಿಯಲ್ಲಿ ಸಿಐಟಿಯು ಮತ್ತು ಜನವಾದಿ ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ತಹಶೀಲ್ದಾರ ಕಚೇರಿಯ ಮುಂದೆ ಪ್ರತಿಭಟನೆಗಳು ನಡೆದಿವೆ. ತುಮಕೂರಲ್ಲಿ 8 ದಿನಗಳ ಕಾಲ ಮನೆ ಮನೆಗೆ ಪ್ರಚಾರ ನಡೆಸಿದ್ದು ಜುಲೈ 19 ರಂದು ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲಾಗಿದೆ. 25,000 ಕ್ಕೂ ಹೆಚ್ಚು ಕರಪತ್ರ ಮುದ್ರಿಸಲಾಗಿದ್ದು ಜನರ ನಡುವೆ ಪ್ರಚಾರ ಮುಂದುವರಿಯುತ್ತಿದೆ. ಬೃಹತ್ ಸಂಖ್ಯೆಯಲ್ಲಿ ಬೆಂಗಳೂರು ಧರಣಿಯಲ್ಲಿ ಪಾಲ್ಗೊಳ್ಳಲು ತಯಾರಿ ನಡೆಯುತ್ತಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಸಮರಶೀಲ ಹೋರಾಟ:

ಜುಲೈ 26 ರಂದು ಬಳ್ಳಾರಿ ಜಿಲ್ಲೆಯ ಕುರುಗೋಡು ಮತ್ತು ಹೊಸಪೇಟೆಗಳಲ್ಲಿ 2 ರೂ ದರದಲ್ಲಿ 35 ಕೆ.ಜಿ. ಆಹಾರ ಧಾನ್ಯಗಳನ್ನು ನೀಡಬೇಕೆಂದು ಒತ್ತಾಯಿಸಲಾಗಿದೆ. ನ್ಯಾಯಬೆಲೆ ಅಂಗಡಿಗಳಲ್ಲಿ ನಡೆಯುತ್ತಿರುವ ಅನ್ಯಾಯವನ್ನು ಕಂಡು ಕಾಣದಂತೆ ಕುರುಡಾಗಿ ಕುಳಿತಿರುವ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಎರಡು ಕೇಂದ್ರಗಳಲ್ಲಿ ತಾಲ್ಲೂಕು ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಿದರು. ಹೊಸಪೇಟೆಯಲ್ಲಿ ಸುಮಾರು 300 ಕಾರ್ಯಕರ್ತರ ಬಂಧನದ ನಂತರವೇ ಕಚೇರಿಯ ಬಾಗಿಲು ತೆರೆಯಲು ಸಾಧ್ಯವಾಯಿತು. ಬಳ್ಳಾರಿ ಜಿಲ್ಲಾ ಕೇಂದ್ರದಲ್ಲಿ ನಡೆದ ಧರಣಿಯಲ್ಲಿ ಸುಮಾರು 200 ಕಾರ್ಯಕರ್ತರು ಭಾಗವಹಿಸಿದ್ದರು.

ಜುಲೈ 27 ರಂದು ಸಿರುಗುಪ್ಪದಲ್ಲಿ ಧರಣಿ ನಿರತ ಕಾರ್ಯಕರ್ತರು ಅಧಿಕಾರಿಗಳಿಗೆ ಕೆಲಸ ಮಾಡಲು ತಡೆಯೊಡ್ಡಿದ್ದು ವರದಿಯಾಗಿದೆ. ಅಧಿಕಾರಿಗಳು ರೇಷನ್ ಸಮಸ್ಯೆಯನ್ನು ಬಗೆಹರಿಸುವುದಾಗಿ ತಿಳಿಸಿದ ನಂತರವಷ್ಟೇ ಧರಣಿಯನ್ನು ಹಿಂತೆಗೆದುಕೊಳ್ಳಲಾಯ್ತು.

ಜಿಲ್ಲೆಯ ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ, ತೋರಣಗಲ್ಲು ಪ್ರದೇಶಗಳಲ್ಲಿ ಜುಲೈ 30, ರಿಂದ ಪ್ರತಿಭಟನೆ ನಡೆಯಲಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜುಲೈ 30, ರಂದು ತಾಲ್ಲೂಕು ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದ್ದು ಪೂರ್ವಭಾವಿಯಾಗಿ ತಾಲ್ಲೂಕು, ವಲಯ ಸಮಿತಿಗಳಿಂದ ವಾಹನ ಜಾಥಾ ಹಮ್ಮಿಕೊಳ್ಳಲಾಗಿದೆ. ಜನರ ಸಮಸ್ಯೆಗಳಿಗೆ ಹೋರಾಡುವವರು ಸಿಪಿಐ(ಎಂ) ಮಾತ್ರವೆಂದು ಜನರು ಮಾತನಾಡುವಂತಾಗಿದೆ.

ಬೆಂಗಳೂರು ನಗರದಲ್ಲಿ ಸಿಪಿಐ(ಎಂ) ಪಕ್ಷದ ಸಂಘಟನೆ, ಪ್ರಭಾವ ಇರುವ ಕಡೆಗಳಲ್ಲಿ ಬೀದಿ ಬೀದಿ ಸುತ್ತಿ ಮನೆ ಮನೆಗೆ ಕರಪತ್ರ ವಿತರಣೆ ಪ್ರಚಾರ ನಡೆಯುತ್ತಿದೆ. ಜುಲೈ 30, 31 ರಂದು ಸರ್ಕಾರಿ ಕಚೇರಿಗಳ ಮುತ್ತಿಗೆ, ಆಹಾರ ಉಗ್ರಾಣಗಳಿಗೆ ಮುತ್ತಿಗೆ ಕಾರ್ಯಕ್ರಮ ನಡೆಯಲಿದೆ.

ದಾವಣಗೆರೆ ಚಿತ್ರದುರ್ಗ ಜಿಲ್ಲಾ ಸಂಘಟನಾ ಸಮಿತಿಯ ಆಶ್ರಯದಲ್ಲಿ 9 ಕಡೆಗಳಲ್ಲಿ ಪ್ರಚಾರ ನಡೆಸಲು ನಿರ್ಧರಿಸಲಾಗಿದೆ. ಬೆಂಗಳೂರಿನ ಧರಣಿ 600ಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ.

ಬೆಳಗಾವಿ ಜಿಲ್ಲೆಯ ನಿಪ್ಪಾಣಿ, ರಾಮದುರ್ಗ, ಸವದತ್ತಿ, ಬೆಳಗಾವಿ ನಗರಗಳಲ್ಲಿ ಪ್ರಚಾರ ನಡೆಸಲು ನಿರ್ಧರಿಸಲಾಗಿದೆ.

ಉತ್ತರಕನ್ನಡ ಜಿಲ್ಲೆಯಲ್ಲಿ ಜುಲೈ 30 ರಂದು ಜಿಲ್ಲಾಧಿಕಾರಿ ಕಚೇರಿ ಮುಂದೆ ಪಿಕೆಟಿಂಗ್ ನಡೆಸಲು ತೀರ್ಮಾನಿಸಲಾಗಿದೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಪ್ರಚಾರ, ಪ್ರಷ್ಟೋಭೆ ನಡೆಯಲಿದೆ.

ಶಿವಮೊಗ್ಗ ಭದ್ರಾವತಿ ತಾಲ್ಲೂಕಿನಲ್ಲಿ ಜುಲೈ 26, 27 ರಂದು ವಾಹನ ಜಾಥ ನಡೆಯುತ್ತಿದೆ. 26 ರವರಗೆ 24 ಕಡೆಗಳಲ್ಲಿ ಸಭೆಗಳನ್ನು ನಡೆಸಲಾಗಿದೆ. ಕೂಡ್ಲು ಕೆರೆ ಸಂತೆಯಲ್ಲಿ ನಡೆಸಲಾದ ಸಭೆಯಲ್ಲಿ ಬಾರಿ ಜನ ಪಾಲ್ಗೊಂಡಿದ್ದರು. 28 ಕ್ಕೆ ಮೆರವಣಿಗೆ ಯೋಜಿಸಲಾಗಿದೆ.

ಗದಗ ಜಿಲ್ಲೆಯ ಗಜೇಂದ್ರಗಡದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ 200 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು. ಸಭೆ ನಡೆಯಿತು. ವಿದ್ಯಾರ್ಥಿ ಸಂಘಟನೆ, ಕಟ್ಟಡ ಕಾರ್ಮಿಕರ ಸಂಘ, ಡಿವೈಎಫ್‌ಐ ಮತ್ತು ಸಿಪಿಐ(ಎಂ) ಪಕ್ಷಕ್ಕೆ ಸೇರಿದ ಕಾರ್ಯಕರ್ತರು ಜುಲೈ 27 ರಂದು ತಹಶೀಲ್ದಾರ್ ಕರ್ಚೇರಿಗೆ ಮುತ್ತಿಗೆ ಹಾಕಲು ನಿರ್ಧರಿಸಿದ್ದಾರೆ. ಅತ್ಯಂತ ಬಡತನದಲ್ಲಿ ಜೀವಿಸುತ್ತಿರುವ ಲಂಬಾಣಿ ತಾಂಡಾದ ಬಹುತೇಕ ಕುಟುಂಬಗಳಿಗೆ ಕಾರ್ಡು ನೀಡದಿರುವ ಕ್ರಮವನ್ನು ಖಂಡಿಸಿದ ಸಭೆಯು ಎಲ್ಲಾ ಬಡವರಿಗೆ ಬಿಪಿಎಲ್ ಕಾರ್ಡನ್ನು ನೀಡಬೇಕೆಂದು ಒತ್ತಾಯಿಸಿತು.

ಹುಬ್ಬಳ್ಳಿ ತಹಶೀಲ್ದಾರರ ಕಛೇರಿ ಎದುರು ಜುಲೈ 28 ರಂದು ಪ್ರತಿಭಟನೆ ಏರ್ಪಡಿಸಲಾಗಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಜುಲೈ 21 ರಂದು ಕರ್ನಾಟಕ ರಾಜ್ಯ ಆಹಾರ ನಿಗಮದ ಉಗ್ರಾಣದ ಎದುರು ಬೃಹತ್ ಪ್ರತಿಭಟನೆಯನ್ನು ನಡೆಸಲಾಗಿದೆ. ಸುಮಾರು 2 ಗಂಟೆಗಳ ಕಾಲ ಉಗ್ರಾಣಕ್ಕೆ ಮುತ್ತಿಗೆ ಹಾಕಲಾಯಿತ್ತು. ಸುಮಾರು 2000 ಜನ ಭಾಗವಹಿಸಿದ್ದರು. ಕೃಷಿಕೂಲಿಕಾರರು, ಬಡರೈತರು, ಹಮಾಲಿಕಾರ್ಮಿಕರು, ದೇವದಾಸಿ ಮಹಿಳೆಯರು, ವಿದ್ಯಾರ್ಥಿಯು ಜನರು ಪಾಲ್ಗೊಂಡಿದ್ದರು. ರೇಷನ್‌ಕಾರ್ಡ್ ವಿತರಣೆ, ಸಮರ್ಪಕ ರೇಷನ್ ಹಂಚಿಕೆ, ಉದ್ಯೋಗಖಾತ್ರಿ ಯೋಜನೆಯ ಸಮರ್ಪಕಜಾರಿ ಮುಂತಾದ ಬೇಡಿಕೆಗಳನ್ನು ಚರ್ಚಿಸಲು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಅಗಸ್ಟ್ 10 ರಂದು ಸಭೆ ನಡೆಸುವುದಾಗಿ ತಹಶೀಲ್ದಾರರು ಭರವಸೆ ಕೊಟ್ಟ ನಂತರ ಮುತ್ತಿಗೆಯನ್ನು ಹಿಂತೆಗೆದುಕೊಳ್ಳಲಾಯಿತ್ತು. ಇದಕ್ಕೂ ಮೊದಲು 4 ದಿನ ತಾಲ್ಲೂಕಿನಾದ್ಯಂತ ವಾಹನ ಜಾಥಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗಿತ್ತು.

ರಾಮನಗರ ಜಿಲ್ಲೆಯಲ್ಲಿ ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕರಣಗೊಳಿಸುವ ಮೂಲಕ ರಾಷ್ಟ್ರದ ಜನತೆಗೆ ಆಹಾರ ಭದ್ರತೆ ನೀಡಬೇಕೆಂದು ಒತ್ತಾಯಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಡೀಸೆಲ್, ಎಲ್‌ಪಿಜಿ, ಸೀಮೆಎಣ್ಣೆ

ಬೆಲೆಗಳ ಏರಿಕೆಯ ಪ್ರಯತ್ನ

ಯುಪಿಎ-2 ಸರಕಾರದ ಹಣಕಾಸು ಮಂತ್ರಿಗಳಾಗಿದ್ದವರು ಈಗ ರಾಷ್ಟ್ರಪತಿ ಭವನಕ್ಕೆ ಹೋಗಿರುವುದರಿಂದ ಪೆಟ್ರೋಲಿಯಂ ಇಲಾಖೆಯ 'ಆಧಿಕಾರಿಕ ಮಂತ್ರಿಗಳ ಗುಂಪು' ಎಂಬುದಿಲ್ಲ. ಆದ್ದರಿಂದ ಸದ್ಯ ಹತೋಟಿಮುಕ್ತವಾಗಿರದ ಡೀಸೆಲ್, ಅಡುಗೆ ಅನಿಲ ಹಾಗೂ ಸೀಮೆ ಎಣ್ಣೆಯ ಬೆಲೆಗಳನ್ನು ಹೆಚ್ಚಿಸಬೇಕೆಂಬ ಪ್ರಸ್ತಾವವನ್ನು ಪೆಟ್ರೋಲಿಯಂ ಇಲಾಖೆ 'ಆರ್ಥಿಕ ವಿಷಯಗಳ ಸಂಪುಟ ಸಮಿತಿ'ಗೆ, ನೇರವಾಗಿ ಪ್ರಧಾನ ಮಂತ್ರಿಗಳ ನಿರ್ಣಯಕ್ಕೆ ಕಳಿಸುವ ಬಗ್ಗೆ ಯೋಚಿಸುತ್ತಿದೆಯಂತೆ.


ಹಿಂದೆ ಇದ್ದ ಮಂತ್ರಿಗಳ ಗುಂಪು 2011ರ ಜೂನ್ 25ರ ನಂತರ ಸಭೆ ಸೇರಿರಲಿಲ್ಲ. 'ಹತೋಟಿಮುಕ್ತ' ಗೊಂಡಿರುವ ಪೆಟ್ರೋಲಿನ ಬೆಲೆಗಳನ್ನು ಏರಿಸಿದಾಗಲೆಲ್ಲಾ ಯುಪಿಎ-2 ಸರಕಾರ ತೀವ್ರ ಪ್ರತಿಭಟನೆಗಳನ್ನು, ಟೀಕೆಗಳನ್ನು ಎದುರಿಸಬೇಕಾಗಿ ಬಂದ ಹಿನ್ನೆಲೆಯಲ್ಲಿ ಇನ್ನೂ 'ಹತೋಟಿ'ಯಲ್ಲಿರುವ ಈ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸುವ ಧೈರ್ಯ ತೋರಲು ಅದಕ್ಕಾಗಿರಲಿಲ್ಲ. ಇದರಿಂದಾಗಿ ಸಬ್ಸಿಡಿ ಹೊರೆ ಈಗ ಹತೋಟಿ ಮೀರಿ ಹೋಗುತ್ತಿದೆ, 1.6 ಲಕ್ಷ ಕೋಟಿ ರೂ.ಗಳಷ್ಟಾಗುತ್ತದೆ, ಇವುಗಳ ಬೆಲೆಗಳನ್ನು ಏರಿಸಲೇ ಬೇಕಾಗಿದೆ ಎಂಬ ಬಗ್ಗೆ ಈಗ ಒಮ್ಮತವಿದೆ, ಯಾವಾಗ ಎಂಬುದೇ ಪ್ರಶ್ನೆ ಎಂದು ಪೆಟ್ರೋಲಿಯಂ ಇಲಾಖೆಯ ಅಧಿಕಾರಿಗಳು ಹೇಳುತ್ತಿದ್ದಾರಂತೆ.

ಕೆಲವು ದಿನಗಳ ಹಿಂದೆ 'ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ' ಅಧ್ಯಕ್ಷ ಡಾ.ಸಿ.ರಂಗರಾಜನ್ ಯುಪಿಎ-2 ಸರಕಾರದ ವಿಶ್ವಾಸಾರ್ಹತೆಯನ್ನು ಮತ್ತೆ ಕುದುರಿಸಲು ಹಣಕಾಸು ಕೊರತೆಯ ಪ್ರಮಾಣವನ್ನು ಇಳಿಸುವ ಕ್ರಿಯೆ ಬೇಕಾಗಿದೆ, ಅದರ ಭಾಗವಾಗಿ ಡೀಸೆಲ್, ಅಡುಗೆ ಅನಿಲ ಮತ್ತು ಸೀಮೆ ಎಣ್ಣೆಯ ಬೆಲೆಗಳನ್ನು 'ಹತೋಟಿ ಮುಕ್ತ'ಗೊಳಿಸಬೇಕು ಎಂದು ಸಲಹೆ ಮಾಡಿದ್ದರು.

ಇವರು ಚಿಲ್ಲರೆ ವ್ಯಾಪಾರ ಮತ್ತು ನಾಗರಿಕ ವಿಮಾನಯಾನ ವಲಯಗಳಲ್ಲಿ ವಿದೇಶಿ ನೇರ ಹೂಡಿಕೆಗೆ ಅವಕಾಶ ನೀಡುವುದು ಕೂಡ ಈ ಕ್ರಿಯೆಯ ಭಾಗವಾಗಬೇಕು ಎಂದು ಸಲಹೆ ಮಾಡಿದ್ದಾರೆ. ಇವನ್ನು ಸಂಸತ್ತಿಗೆ ಒಯ್ಯದೆಯೇ ಮಾಡಬಹುದು, ರಾಜಕೀಯ ಒಮ್ಮತವನ್ನು ನಿಧಾನವಾಗಿ ಕೆಟ್ಟಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಪ್ರಧಾನ ಮಂತ್ರಿಗಳಿಗೆ ಜಂಟಿ ಪತ್ರ

ಆದರೆ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಯನ್ನು ಈಗ ಯುಪಿಎ-2 ಸರಕಾರದ ಹೊಸ ಮಿತ್ರಪಕ್ಷ ಎನಿಸಿಕೊಂಡಿರುವ ಸಮಾಜವಾದಿ ಪಕ್ಷ ಕೂಡ ವಿರೋಧಿಸಿದೆ. ಆ ಪಕ್ಷದ ಅಧ್ಯಕ್ಷ ಮುಲಾಯಂ ಸಿಂಗ್ ಯಾದವ್, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ ಕಾರಟ್, ಸಿಪಿಐ ಪ್ರಧಾನ ಕಾರ್ಯದರ್ಶಿ ಸುಧಾಕರ ರೆಡ್ಡಿ, ಜೆಡಿ(ಎಸ್) ಪ್ರಧಾನ ಕಾರ್ಯದರ್ಶಿ ದಾನಿಷ್ ಅಲಿ, ಫಾರ್ವರ್ಡ್ ಬ್ಲಾಕ್ ಪ್ರಧಾನ ಕಾರ್ಯದರ್ಶಿ ದೇಬಬ್ರತ ಬಿಸ್ವಾಸ್ ಮತ್ತು ಆರೆಸ್ಪಿ ಕಾರ್ಯದರ್ಶಿ ಅಬನಿ ರಾಯ್ ಈ ಕುರಿತು ಪ್ರಧಾನ ಮಂತ್ರಿಗಳಿಗೆ ಜುಲೈ 21 ರಂದು ಒಂದು ಜಂಟಿ ಪತ್ರ ಬರೆದಿದ್ದಾರೆ. 2009-10ರ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ವರದಿಯ ಪ್ರಕಾರ ಉದ್ಯೋಗ ಬೆಳವಣಿಗೆಯ ದರ ನಿಧಾನಗೊಂಡಿರುವಾಗ, ಒಂದು ವಾಲ್‌ಮಾರ್ಟ್ ಸೂಪರ್ ಮಾರ್ಕೆಟ್ ತೆರೆದರೆ 1,300 ಚಿಲ್ಲರೆ ಅಂಗಡಿಗಳು ಮುಚ್ಚುತ್ತವೆ, 3,900 ಮಂದಿ ಕೆಲಸ ಕಳಕೊಳ್ಳುತ್ತಾರೆ ಎಂದು ಅಂದಾಜು ಮಾಡಿರುವಾಗ ಸರಕಾರ 4 ಕೋಟಿ ಸಣ್ಣ ವ್ಯಾಪಾರಸ್ಥರಿಗೆ ಬದುಕು ಕಟ್ಟಿ ಕೊಟ್ಟಿರುವ ಈ ವಲಯದಲ್ಲಿ ಎಫ್‌ಡಿಐಗೆ ಇನ್ನಷ್ಟು ಅವಕಾಶ ಕೊಡಬಾರದು ಎಂದು ಈ ಜಂಟಿ ಪತ್ರದಲ್ಲಿ ಆಗ್ರಹಿಸಲಾಗಿದೆ. ಹಲವಾರು ರಾಜಕೀಯ ಪಕ್ಷಗಳು ಮತ್ತು ರಾಜ್ಯ ಸರಕಾರಗಳು ಇದನ್ನು ವಿರೋಧಿಸುತ್ತಿರುವುದರಿಂದ, ಈ ದಿಕ್ಕಿನಲ್ಲಿ ಮುಂದುವರೆಯಬಾರದು ಎಂದು ಪ್ರಧಾನ ಮಂತ್ರಿಗಳನ್ನು ಈ ಜಂಟಿ ಪತ್ರ ವಿನಂತಿಸಿಕೊಂಡಿದೆ.



ವೇದರಾಜ ಎನ್.ಕೆ.

ಯುಪಿಎ-2 ಪ್ರಧಾನ ಮಂತ್ರಿಗಳು ತಮ್ಮ ಆರ್ಥಿಕ ಸಲಹಾಗಾರರ 'ಸಲಹೆ' ಕೇಳುತ್ತಾರೋ, ಅಥವ ದೇಶದ ನಿಜ ಪರಿಸ್ಥಿತಿಯ, ಒಮ್ಮತದ ಅಭಾವದ ವಾಸ್ತವತೆಯನ್ನು ಸ್ವೀಕರಿಸುತ್ತಾರೋ ನೋಡಬೇಕಾಗಿದೆ.

ಕೇಂದ್ರ ಸರಕಾರದ ಖರ್ಚಿನಲ್ಲಿ ಖಾಸಗಿ ವಿ.ವಿ.ಗಳು!

ಯುಪಿಎ-2 ಸರಕಾರ ಉನ್ನತ ಶಿಕ್ಷಣ ಕ್ಷೇತ್ರದಲ್ಲೂ ನವ-ಉದಾರವಾದಿ ಧೋರಣೆಗಳಿಗೆ ಎಷ್ಟೊಂದು ಬದ್ಧವಾಗಿದೆಯೆಂದರೆ, ಈ ಗುರಿಸಾಧನೆಗಾಗಿ ಹೊಸ-ಹೊಸ ದಾರಿಗಳನ್ನು (ಅಡ್ಡದಾರಿಗಳನ್ನೂ) ಹುಡುಕುತ್ತಿದೆ. ಈಗಾಗಲೇ ಈ ಅಂಕಣದಲ್ಲಿ ಈ ಹಿಂದೆ ಗಮನಿಸಿದಂತೆ, 'ವಿದೇಶಿ ವಿಶ್ವ ವಿದ್ಯಾಲಯಗಳ ಮಸೂದೆ, 2010'ನ್ನು ಪಾಸು ಮಾಡಿಸಿಕೊಂಡು, ಇಲ್ಲವಾದರೆ ಯುಜಿಸಿಯನ್ನು ಬಳಸಿ ಸಂಸತ್ತನ್ನು ಕೇಳದೆಯೇ ವಿದೇಶಿ, ಮತ್ತು ಖಾಸಗಿ ವಿಶ್ವ ವಿದ್ಯಾಲಯಗಳಿಗೆ ಭಾರತದಲ್ಲಿ ತಮ್ಮ 'ಅಂಗಡಿ' ತೆರೆಯಲು ಅವಕಾಶ ಮಾಡಿಕೊಡಬೇಕೆಂಬ ಅಮೆರಿಕನ್ ಆಳರಸರ ಆಗ್ರಹಗಳಿಗೆ ತಲೆಬಾಗಲು ಸಾಧ್ಯವಾಗದು ಎಂದು ಕಂಡುಬಂದಿರುವ ಹಿನ್ನೆಲೆಯಲ್ಲಿ ಅದು ಇದಕ್ಕೆ ಪರ್ಯಾಯ ಮಾರ್ಗದ ಹುಡುಕಾಟದಲ್ಲಿತ್ತು. ಇದರ ಭಾಗವಾಗಿ ಯುಪಿಎ-2 ಸರಕಾರದ ಮಾನವ ಸಂಪನ್ಮೂಲ ಮಂತ್ರಿಗಳು ಸಂಸತ್ತಿನಲ್ಲಿ 'ಸಂಶೋಧನೆ ಮತ್ತು ನವೀನತೆಯ ವಿಶ್ವವಿದ್ಯಾಲಯಗಳು ಮಸೂದೆ, 2012' ಎಂಬುದನ್ನು ಮಂಡಿಸಿದ್ದಾರೆ.

ಈ ಮಸೂದೆಯ ಉದ್ದೇಶ-ಗುರಿಗಳ ಹೇಳಿಕೆಯ ಪ್ರಕಾರ 'ಭಾರತ ಭವಿಷ್ಯದ ಜಾಗತಿಕ ಜ್ಞಾನ ಆರ್ಥಿಕದಲ್ಲಿ ನೇತೃತ್ವದ

ಪುಟ 15ಕ್ಕೆ

ಹೊಸ ದೂರ ಸಂಪರ್ಕ ನೀತಿ: ಹಳೆಯ ಹಗರಣಗಳೇ ಹೂರಣ!

ದೇಶದ ಸರ್ವೋಚ್ಚ ನ್ಯಾಯಾಲಯ 2ಜಿ ತರಂಗಾಂತರ ಹಗರಣದ ಭಾಗವಾಗಿ ನೀಡಿದ 122 ಲೈಸೆನ್ಸ್‌ಗಳನ್ನು ರದ್ದು ಮಾಡಿದ ಹಿನ್ನೆಲೆಯಲ್ಲಿ ಯುಪಿಎ-2 ಸರಕಾರದ ಹೊಸ ದೂರಸಂಪರ್ಕ ನೀತಿ ಒಂದು ವರ್ಷದ 'ಚರ್ಚೆ'ಗಳ ನಂತರ ಈಗ ಅಧಿಕೃತ 'ರಾಷ್ಟ್ರೀಯ ದೂರಸಂಪರ್ಕ ನೀತಿ-2012'(ಎನ್‌ಟಿಪಿ 2012) ಎಂಬ ನಾಮಧೇಯ ಪಡೆದಿದೆ.

ಈ ಹಿಂದಿನ ಎನ್‌ಟಿಪಿ 94 ಮತ್ತು ಎನ್‌ಟಿಪಿ 99 ರ ನಂತರ ಇದೀಗ ಭಾರತ ಸರಕಾರದ ಮೂರನೇ ದೂರಸಂಪರ್ಕ ನೀತಿ. ಸಹಜವಾಗಿಯೇ ಇದರಲ್ಲಿ ಹಳೆಯ ಎರಡು ನೀತಿಗಳ ಅನುಭವಗಳ ವಿಶ್ಲೇಷಣೆಯ ಛಾಯೆ ಕಾಣಬೇಕಾಗಿತ್ತು. ಅಲ್ಲದೆ ದೂರಸಂಪರ್ಕ ವಲಯದ ಭವಿಷ್ಯದ ಬೆಳವಣಿಗೆಗಳ ಮುನ್ನೋಟದೊಂದಿಗೆ ಅದಕ್ಕನುಗುಣವಾದ ಧೋರಣೆಯ ರೂಪುರೇಷೆ ಇರಬೇಕಾಗಿತ್ತು. ಈ ಎರಡನೆಯದು ಹಿಂದಿನ ಎರಡು ನೀತಿಗಳಂತೆ ಇದರಲ್ಲಿಯೂ ಇಲ್ಲ ಎಂಬುದು ಒಂದು ಕತೆಯಾದರೆ, ಹಿಂದಿನ ಧೋರಣೆಗಳ ಅನುಭವಗಳ ಛಾಯೆ ನಕಾರಾತ್ಮಕ ಸ್ವರೂಪದಲ್ಲಿ ಇದರಲ್ಲೂ ಇದೆ ಎಂದು ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ. ಅಂದರೆ ಹಿಂದಿನ ಎರಡು ನೀತಿಗಳ ಅಡಿಯಲ್ಲಿ ಉಂಟಾದ ಹಗರಣಗಳ ಪ್ರಯೋಜನ ಪಡೆದವರನ್ನು ಅವುಗಳಿಂದ ಪಾರು ಮಾಡುವುದೇ ಈ ಹೊಸ ನೀತಿಯ ಹೂರಣವಾಗಿರುವಂತೆ ಕಾಣುತ್ತದೆ. ಇದನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ, 2ಜಿ ಹಗರಣದ ಹಿನ್ನೆಲೆಯಲ್ಲಿ ಈ ಇಲಾಖೆಯನ್ನು ವಹಿಸಿಕೊಂಡ ಹೊಸ ದೂರಸಂಪರ್ಕ ಮಂತ್ರಿ, ಸುಪ್ರಿಂ ಕೋರ್ಟ್ ತೀರ್ಪು ಬರುವ ವರೆಗೂ ಅದರಲ್ಲಿ ಹಗರಣವೇ ಇಲ್ಲ ಎನ್ನುತ್ತಿದ್ದುದನ್ನು ನೆನಪಿಸಿಕೊಂಡರೆ ಇದರಲ್ಲಿ ಆಶ್ಚರ್ಯವೇನೂ ಕಾಣದು.

ಸಾರ್ವಜನಿಕ ವಲಯದ ದೂರಸಂಪರ್ಕ ಕಂಪನಿಗಳ ವೆಚ್ಚದಲ್ಲಿ ಖಾಸಗೀ ಕಂಪನಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದೇ ಈ ಎನ್‌ಟಿಪಿ 2012 ರ ಮುಖ್ಯ ಒತ್ತು. ಇದರ ಮುಖ್ಯಾಂಶಗಳನ್ನು ಹೀಗೆ ಪಟ್ಟಿ ಮಾಡಲಾಗಿದೆ:

1. ದೂರಸಂಪರ್ಕ ಸೇವೆಗಳಲ್ಲಿ ಖಾಸಗೀ ವಲಯಕ್ಕೆ ಪ್ರಧಾನ ಪಾತ್ರ
2. ಮೂಲರಚನೆಗಳನ್ನು ಮತ್ತು ಜಾಲಗಳನ್ನು(ಮುಖ್ಯವಾಗಿ ಸಾರ್ವಜನಿಕ ವಯದಲ್ಲಿರುವಂತವುಗಳು) ಹಂಚಿಕೊಳ್ಳುವ ಅವಕಾಶ
3. ತರಂಗಾಂತರಗಳನ್ನು ಹಂಚಿಕೊಳ್ಳಲು, ಒಟ್ಟು ಸೇರಿಸಿಕೊಳ್ಳಲು ಮತ್ತು ಅವನ್ನು ಮಾರಿಕೊಳ್ಳಲು ಅವಕಾಶ
4. ವಿಲೀನಗಳಿಗೆ, ವಹಿಸಿಕೊಳ್ಳಲಿಕ್ಕೆ, ಆಮೂಲಕ ಬೃಹತ್ ಖಾಸಗೀ ಗುತ್ತೇದಾರಿಗಳ ನಿರ್ಮಾಣಕ್ಕೆ ಅವಕಾಶ
5. ರೋಮಿಂಗ್ ಶುಲ್ಕಗಳ ರದ್ದತಿ.

ಈ ಕೊನೆಯದು ಹಿಂದಿನ ಎನ್‌ಪಿಪಿ 99ರ ಅಡಿಯಲ್ಲಿಯೇ ಈಗ ರೂಪುಗೊಳ್ಳುತ್ತಿರುವ ಹೊಸದೊಂದು ಹಗರಣದ ಪಾಲುದಾರರನ್ನು ಪಾರು ಮಾಡಲಿಕ್ಕಾಗಿಯೇ ಸೇರಿಸಿರುವ ಅಂಶ ಎನ್ನಲಾಗಿದೆ. 3ಜಿ ತರಂಗಾಂತರದ ಹಂಚಿಕೆಯಲ್ಲಿ ಕೆಲವು ದೊಡ್ಡ ಖಾಸಗಿ ಕಂಪನಿಗಳು ಅಖಿಲ ಭಾರತ ಲೈಸೆನ್ಸಿಗೆ ಅರ್ಜಿ ಹಾಕಲಿಲ್ಲ, ಆದರೆ 'ರೋಮಿಂಗ್'(ಅಂದರೆ ಸ್ವಂತ ಮೂಲರಚನೆ/ಜಾಲ ಇಲ್ಲದಲ್ಲಿ ಬೇರೆ ಕಂಪನಿಗಳ ಮೂಲರಚನೆಗಳ/ಜಾಲಗಳ) ಮೂಲಕ ಅಖಿಲ ಭಾರತ ಸೇವೆಗಳನ್ನು ಕೊಡುವುದಾಗಿ ಹೇಳಿಕೊಂಡಿವೆ. ಹಳೆಯ ನೀತಿಯ ಅಡಿಯಲ್ಲಿ ಇದು ಕಾನೂನುಬಾಹಿರ. ಅದರೂ ಯುಪಿಎ-2 ಸರಕಾರ ಈ ಬಗ್ಗೆ ಕಣ್ಣು ಮುಚ್ಚಿ ಕೂತಿತ್ತು. ಆದರೆ ಇದನ್ನು ಕೋರ್ಟಿನಲ್ಲಿ ಪ್ರಶ್ನಿಸಲು ಮುಂದಾದಾಗ ಈ ರೀತಿ ಸ್ವಂತ ಮೂಲರಚನೆಯಿಲ್ಲದೆ 'ರೋಮಿಂಗ್' ಮೂಲಕ ಸೇವೆಗಳನ್ನು ಕೊಡುವುದು ಕಾನೂನುಬಾಹಿರ ಎಂದು ಸರಕಾರವೇ ಘೋಷಿಸಬೇಕಾಗಿ ಬಂತು. ಈಗ ಎನ್‌ಟಿಪಿ 2012 ರೋಮಿಂಗ್‌ಗೆ ಅವಕಾಶ ಕೊಟ್ಟು ರೋಮಿಂಗ್ ಶುಲ್ಕಗಳನ್ನೇ ರದ್ದು ಮಾಡಿರುವುದು ಇಂತಹ ದೊಡ್ಡ ಕಂಪನಿಗಳನ್ನು ಈ ಹೊಸ ಹಗರಣದಿಂದ ಪಾರು ಮಾಡಲಿಕ್ಕಾಗಿಯೇ ಎನ್ನಲಾಗಿದೆ.

ಜಗದಗಲ

ಶರತ್‌ಚಂದ್ರ

"ಪೆನಾ, ಅಧ್ಯಕ್ಷ ಆಗಲಿಕ್ಕೆ ಎಷ್ಟು ಖರ್ಚು ಮಾಡಿದಿ?"



ಇದು ಮೆಕ್ಸಿಕೊ ದೇಶದ ರಾಜಧಾನಿ ಮೆಕ್ಸಿಕೊ ನಗರದಲ್ಲಿ ಭಾರೀ ಪ್ರತಿಭಟನಾ ಪ್ರದರ್ಶನ ಮಾಡಿಸಿದ 50 ಸಾವಿರಕ್ಕೂ ಹೆಚ್ಚು ಎಡಪಂಥೀಯ ಪಿ.ಆರ್.ಡಿ. (ಪಾರ್ಟಿ ಆಫ್ ಡೆಮೊಕ್ರಾಟಿಕ್ ರಿಪಬ್ಲಿಕ್) ಪಕ್ಷದ ಬೆಂಬಲಿಗರು ಹಾಕಿದ ಪ್ರಶ್ನೆ. ಇದರ ಜತೆ "ಮೆಕ್ಸಿಕೊ, ನೀನು ನಿನ್ನ ಭವಿಷ್ಯವನ್ನು ಬರಿಯ 500 ಪೆಸೊಗಳಿಗೆ ಒತ್ತೆ ಇಟ್ಟೆ!' ಎಂಬ ಘೋಷಣೆಯೂ ಕೇಳಿ ಬಂತು. ಮೊದಲನೆಯದು ಚುನಾವಣಾ ಕಮಿಶನ್ ಪ್ರಕಾರ ಅಧ್ಯಕ್ಷೀಯ ಚುನಾವಣೆ 'ಗೆದ್ದ' ಪಿ.ಆರ್.ಐ. (ಇನ್‌ಸ್ಟಿಟ್ಯೂಶನಲ್ ರಿವೊಲ್ಯೂಶನರಿ ಪಾರ್ಟಿ) ಪಕ್ಷದ ಅಭ್ಯರ್ಥಿ ಎನಿಕ್ ಪೆನಾ ನೀತೊ ಅವರಿಗೆ. ಎರಡನೆಯದು ಪಿ.ಆರ್.ಐ. ಪಕ್ಷದ ಲಂಚದ ಆಮಿಷಕ್ಕೆ ಬಲಿಯಾಗಿ ತಮ್ಮ ಮತ ಮಾರಿಕೊಂಡ ಮತದಾರರಿಗೆ ಛೀಮಾರಿ.

ಚುನಾವಣೆ ಘೋಷಣೆ ಆದಾಗಿನಿಂದ ಚುನಾವಣಾ ಅಕ್ರಮಗಳ ತೀವ್ರ ಆಪಾದನೆ ಎದುರಿಸಿದ ಅಭ್ಯರ್ಥಿ ನೀತೊ. ಪಿ.ಆರ್.ಡಿ. ಅಭ್ಯರ್ಥಿ ಆಂಡ್ರೆ ಮ್ಯಾನುವೆಲ್ ಲೊಪೆಝ್ ಒಬ್ರಾದೊರ್ ಚುನಾವಣಾ ಫಲಿತಾಂಶ ಪ್ರಕಟಣೆಯ ಮೊದಲೇ ಚುನಾವಣಾ ದಿನದ ಮತ್ತು ಮತ ಎಣಿಕೆಯಲ್ಲಿ ತೀವ್ರ ಅಕ್ರಮಗಳು ನಡೆದಿವೆ ಎಂದು ಆಪಾದಿಸಿದೆ. 1.4 ಲಕ್ಷ ಮತಗಟ್ಟೆಗಳ ಪೈಕಿ 78 ಸಾವಿರ ಮತಗಟ್ಟೆಗಳಲ್ಲಿ ಮರು ಎಣಿಕೆಗೆ ಒತ್ತಾಯಿಸಿತ್ತು. ಅಧಿಕೃತ ಮಿತಿ ದಾಟಿ ವಿಪರೀತ ಚುನಾವಣಾ ವೆಚ್ಚ ಮಾಡಿದ್ದಲ್ಲದೆ, ಭಾರಿ ಸಂಖ್ಯೆಯಲ್ಲಿ ಮತದಾರರಿಗೆ ಲಂಚ ಕೊಡಲಾಗಿದೆ ಎಂಬ ಆಪಾದನೆ ಮಾಡಿ ಕೋರ್ಟು ಮೆಟ್ಟಲು ಹತ್ತಿದ್ದಾರೆ. ಇಂತಹ ತೀವ್ರ ಅಕ್ರಮ ನಡೆದಿರುವ ಚುನಾವಣೆಯನ್ನು ರದ್ದುಗೊಳಿಸಬೇಕೆಂದು ಕೋರ್ಟಿಗೆ ಸಲ್ಲಿಸಿದ ಮನವಿಯನ್ನು ಕೋರ್ಟು ಸ್ವೀಕರಿಸಿ ಫಲಿತಾಂಶವನ್ನು ತಡೆ ಹಿಡಿದಿದೆ. ಕಳೆದ ಬಾರಿಯ ಅಧ್ಯಕ್ಷೀಯ ಚುನಾವಣೆ ಗೆದ್ದ ಪಿ.ಎ.ಎನ್. (ನ್ಯಾಶನಲ್ ಆಕ್ಶನ್ ಪಾರ್ಟಿ) ಸಹ ಪಿ.ಆರ್.ಐ. ಮತದಾರರಿಗೆ ಲಂಚ ನೀಡಿದೆ ಎಂದು ಆಪಾದಿಸಿದೆ.

ಚುನಾವಣೆ ಹತ್ತಿರ ಬರುತ್ತಿದ್ದಂತೆ ಲಕ್ಷಾಂತರ ಜನರ ಸೂಪರ್ ಮಾರ್ಕೆಟ್ ಬಿಲ್ಲುಗಳನ್ನು ಅನಾಮಧೇಯ ಕಂಪನಿಗಳು ಪಾವತಿ ಮಾಡಿವೆ. ಅಲ್ಲದೆ ಈ ಕಂಪನಿಗಳು ಲಕ್ಷಾಂತರ ಪಿ.ಆರ್.ಐ. ಕಾರ್ಯಕರ್ತರ ಮೂಲಕ ಪ್ರೀ-ಪೈಯ್ಡ್ ಕಾರ್ಡುಗಳು, ಹಣ, ಗೃಹೋಪಕರಣಗಳನ್ನು ವಿತರಿಸಿದ್ದವು. ವಿತರಿಸಲಾದ ಬರಿಯ ಪ್ರೀ-ಪೈಯ್ಡ್ ಕಾರ್ಡುಗಳ ಬೆಲೆಯೇ ಸುಮಾರು 11 ಕೋಟಿ ಪೆಸೊ ಎಂದು ಹೇಳಲಾಗಿದೆ. ಇವೆಲ್ಲದಕ್ಕೆ ಪಿ.ಆರ್.ಡಿ. ಪಕ್ಷದ ಬಳಿ ಪುರಾವೆ ಇದೆ. ಈ ಕಂಪನಿಗಳು ಅಧಿಕೃತವಾಗಿ ಕೊಟ್ಟ ವಿಳಾಸ ಮತ್ತಿತರ ವಿವರಗಳು ಸುಳ್ಳು. ಈ ಕಂಪನಿಗಳು ಮಾದಕ ದ್ರವ್ಯಗಳ ಕಳ್ಳ ಸಾಗಾಣಿಕೆ ಮುಂತಾದವುಗಳಲ್ಲಿ) 'ಕಳಂಕಿತ ಕಪ್ಪು ಹಣ'ವನ್ನು ಬೆಳ್ಳಗಾಗಿಸುವ ದಂಧೆಯಲ್ಲಿ ತೊಡಗಿರುವ ಸಾಧ್ಯತೆ ಇದೆ. ಈ ಬಗ್ಗೆ ವಿವರವಾದ ತನಿಖೆ ನಡೆಯಬೇಕು ಎಂದು ಪಿ.ಆರ್.ಡಿ. ಒತ್ತಾಯಿಸಿದೆ.

ಅಲ್ಲದೆ ಹಿಂದೆ 70 ವರ್ಷ ಮೆಕ್ಸಿಕೊದ ಆಳುವ ಪಕ್ಷವಾಗಿದ್ದ ಪಿ.ಆರ್.ಐ. ಆಡಳಿತ ವ್ಯವಸ್ಥೆಯಲ್ಲಿ ತನಗಿರುವ ದೊಡ್ಡ ಪ್ರಮಾಣದ ಸಂಪರ್ಕದ ದುರ್ಬಳಕೆ ಮಾಡಿದೆ. ಸರ್ಕಾರದ ಹಲವು ಕಾರ್ಯಕ್ರಮಗಳ ಮೂಲಕ ಸಹಾಯ ಪಡೆಯುವವರನ್ನು ಮತ ನೀಡದಿದ್ದರೆ ಅದನ್ನು ಕಳೆದುಕೊಳ್ಳಬೇಕಾದೀತು ಎಂದು ಬೆದರಿಸಲಾಗಿದೆ. ಈ ಕಾರ್ಯಕ್ರಮಗಳ ಸವಲತ್ತುಗಳನ್ನು ಅನರ್ಹರಿಗೆ ಕೊಟ್ಟು ಮತ ನೀಡುವಂತೆ ಓಲೈಸಲಾಗಿತ್ತು. ಸರ್ಕಾರಿ ಅಧಿಕಾರಿ ಮತ್ತು ಅಧಿಕಾರಗಳ ವ್ಯಾಪಕ ದುರುಪಯೋಗ, ನೀತೋ ಸಂಬಂಧಿಸಿದ ಕಂಪನಿಗಳಿಂದ ಸುಳ್ಳು ಅಭಿಪ್ರಾಯ ಸಂಗ್ರಹ, ಮಾಧ್ಯಮಗಳಲ್ಲಿ ಪಿ.ಆರ್.ಡಿ.ಗೆ ಅವಕಾಶ ಇಲ್ಲದಂತೆ ಮಾಡಿರುವುದು, ತೀವ್ರ ಅಪಪ್ರಚಾರ ಇತ್ಯಾದಿಗಳೂ ಇದ್ದವು.

ಮೆಕ್ಸಿಕೊದಲ್ಲಿ 70 ವರ್ಷಗಳಿಗಿಂತಲೂ ಹೆಚ್ಚು ಕಾಲ ಅಧಿಕಾರ ನಡೆಸಿರುವ ಪಿ.ಆರ್.ಐ. ಇದೇ ರೀತಿಯ ಚುನಾವಣಾ ಅಕ್ರಮಗಳು, ಮತದಾರರನ್ನು ಭ್ರಷ್ಟಗೊಳಿಸುವ ಬೆದರಿಸುವ ಓಲೈಸುವ ತಂತ್ರಗಳಿಂದ ಗೆಲ್ಲುತ್ತಾ ಬಂದಿದ್ದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಲುಷಿತಗೊಳಿಸಿದೆ. ಕಳೆದ 12 ವರ್ಷಗಳ ಕಾಲ ಪಿ.ಎ.ಎನ್. ಎಂಬ ಇನ್ನೊಂದು ಬಲಪಂಥೀಯ ಪಕ್ಷ ಅಧಿಕಾರಕ್ಕೆ ಬಂದಿತ್ತು. ಅದು ಈ ಬಾರಿ ಮೂರನೇ ಸ್ಥಾನಕ್ಕೆ ಹೋಗಿದೆ. ಪಿ.ಆರ್.ಐ. ಪ್ರಜಾಪ್ರಭುತ್ವ-ವಿರೋಧಿ ಧೋರಣೆ ವಿರುದ್ಧ ತೀವ್ರ ಸವಾಲು ಹಾಕುವ ಎಡ ರಾಜಕೀಯ ಶಕ್ತಿಗಳು ಬೆಳೆಯುತ್ತಾ ಬಂದು ಚುನಾವಣೆ ಗೆಲ್ಲುವಷ್ಟು ಪ್ರಬಲವಾಗಿವೆ.

1988 ರ ಚುನಾವಣೆಗಳ ನಂತರ ಹಲವು ಬಾರಿ ಎಡ ಶಕ್ತಿಗಳು ಗೆದ್ದಿದ್ದು ತೀವ್ರ ಚುನಾವಣಾ ಅಕ್ರಮಗಳ ಮೂಲಕ ಮೋಸ ಮಾಡಲಾಗಿತ್ತು. ಆ ನಂತರದ ತೀವ್ರ ಪ್ರತಿಭಟನೆಯಿಂದಾಗಿ ಚುನಾವಣಾ ಕಮಿಶನ್ ಕಟ್ಟುನಿಟ್ಟಿನ ನಿಯಮಗಳನ್ನು ರಚಿಸಿದ್ದರೂ ಅದರ ಜಾರಿ ಸಡಿಲವಾಗಿಯೇ ಇದೆ. 2006ರ ಚುನಾವಣೆಯಲ್ಲಿ ಹೆಚ್ಚಿನ ಕಾಲ ಮುಂದಿದ್ದ ಪಿ.ಆರ್.ಡಿ. ಅಭ್ಯರ್ಥಿ ಒಬ್ರಾದೊರ್ ಅವರ ಮುನ್ನಡೆ, ತೀವ್ರ ಅಕ್ರಮಗಳ ಮೂಲಕ ಕಡಿಮೆಯಾಗುತ್ತಾ ಕೇವಲ ಶೇ. 0.6 ಮತಗಳಿಂದ ಸೋತಿತ್ತು. ಆಗಲೂ ಹಲವು ತಿಂಗಳುಗಳ ಕಾಲ ಪ್ರತಿಭಟನೆ ನಡೆದಿತ್ತು. ಆದ್ದರಿಂದ ಚುನಾವಣಾ ವ್ಯವಸ್ಥೆಯ ನಿಷ್ಪಕ್ಷಪಾತತೆಯ ಬಗ್ಗೆ ಜನತೆಯಲ್ಲಿ ತೀವ್ರ ಸಂದೇಹಗಳಿವೆ. ಪಿ.ಎ.ಎನ್. ಸಹ ಪಿ.ಆರ್.ಐ. ಮೇಲೆ ಅಕ್ರಮ ಭ್ರಷ್ಟಾಚಾರಗಳ ಆಪಾದನೆ ಮಾಡಿದ್ದರೂ, ಪಿ.ಆರ್.ಡಿ. ಅಧಿಕಾರಕ್ಕೆ ಬರದಂತೆ ತಡೆಯಲು ಒಂದಾಗಿದ್ದಾರೆ. ಪಿ.ಎ.ಎನ್. ಮೆಕ್ಸಿಕೊದ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಅದರ ಸಂಸ್ಥೆಗಳ ವಿಶ್ವಾಸಾರ್ಹತೆ ಕಳೆದುಕೊಳ್ಳುವಂತೆ ಮಾಡಬಾರದು ಮತ್ತು ಪಿ.ಆರ್.ಐ. ಅಭ್ಯರ್ಥಿ ಗೆದ್ದಿದ್ದಾರೆ ಎಂದು ಮನ್ನಿಸಿದೆ !

ಇದರ ಸಾರಾಂಶ ಇಷ್ಟೆ. ಇತರ ಲ್ಯಾಟಿನ್ ಅಮೆರಿಕನ್ ದೇಶಗಳಂತೆ ಮೆಕ್ಸಿಕೊದಲ್ಲೂ ನವ ಉದಾರೀಕರಣದ ನೀತಿಗಳನ್ನು ಬೆಂಬಲಿಸುವ ಬಲಪಂಥೀಯ ಪಕ್ಷಗಳು ಜನ ಬೆಂಬಲ ಕಳೆದುಕೊಂಡಿವೆ. ಎಡ ಅಧ್ಯಕ್ಷರನ್ನು ಆರಿಸಲು ಸಜ್ಜಾಗಿವೆ. ಆದರೆ ಅದನ್ನು ತಡೆಯಲು ಭಾರಿ ಚುನಾವಣಾ ಅಕ್ರಮಗಳನ್ನು ಬಳಸಲಾಗುತ್ತಿದೆ.

ಚುನಾವಣಾ ಕಮಿಶನ್ನಿನ ಪ್ರಕಾರ ಪಿ.ಆರ್.ಐ. ಅಭ್ಯರ್ಥಿ ನೀತೊ ಶೆ. 38.15, ಪಿ.ಆರ್.ಡಿ. ಅಭ್ಯರ್ಥಿ ಒಬ್ರಾದೊರ್ ಶೇ. 31.64 ಮತ್ತು ಪಿ.ಎ.ಎನ್. ಅಭ್ಯರ್ಥಿ ಜೋಸೆಫಿನಾ ವಾಕವೆರು ಶೇ.25.4 ಮತ ಗಳಿಸಿದ್ದಾರೆ.

ಪ್ರತಿಭಟನೆಯಲ್ಲಿ ಭಾಗವಹಿಸಿದವರಿಗೆ 2.25 ಲಕ್ಷ ರೂ. ದಂಡ !

ಪುಟಿನ್ ರಶಿಯಾದ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ನಂತರ ಮಾಸ್ಕೊದಲ್ಲಿ ನಡೆದ ಮೊದಲ ಭಾರೀ ಪ್ರತಿಭಟನೆಯಲ್ಲಿ 50 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದರು. ಪ್ರತಿಭಟನಾ ಮೆರವಣಿಗೆ ಪುಶ್ಕಿನ್ ಚೌಕದಿಂದ ಆರಂಭವಾಗಿ ಸಖರೋವ್ ಮಾರ್ಗದಲ್ಲಿ ನಡೆದ ರ‍್ಯಾಲಿಯಲ್ಲಿ ಕೊನೆಗೊಂಡಿತು. ಮಾರ್ಗದಲ್ಲಿ ಪ್ರತಿಭಟನಾಕಾರರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕುಗೊಳಿಸುವ ಹೊಸ ಕಾನೂನು ವಿರುದ್ಧ ಈ ಪ್ರತಿಭಟನೆಯಲ್ಲಿ ಭಾರೀ ಚಳಿಗಾಳಿ ಇದ್ದಾಗ್ಯೂ ಜನ ಭಾಗವಹಿಸಿದರು. ವಿರೋಧ ಪಕ್ಷಗಳು ಜಂಟಿಯಾಗಿ ಸಂಘಟಿಸಿದ ಈ ಪ್ರತಿಭಟನೆಯಲ್ಲಿ ಕಮ್ಯುನಿಸ್ಟ್ ಮತ್ತು ಲಿಬರಲ್ ಪಕ್ಷಗಳ ಬೆಂಬಲಿಗರು ಭಾಗವಹಿಸಿದ್ದರು. ಸರ್ಕಾರ ಅನುಮತಿ ಕೊಡದ ಪ್ರತಿಭಟನೆಯಲ್ಲಿ ಭಾಗವಹಿಸಿದವರಿಗೆ ವಿಧಿಸುವ ದಂಡವನ್ನು 150 ಪಟ್ಟು ಹೆಚ್ಚಿಸುವ ಕಾನೂನನ್ನು ತರಾತುರಿಯಲ್ಲಿ ಪಾರ್ಲಿಮೆಂಟಿನಲ್ಲಿ ಮಂಜೂರಿ ಮಾಡಿಸಿಕೊಳ್ಳಲಾಗಿತ್ತು. ಈಗ ಈ ದಂಡ ಸುಮಾರು 4,600 ಡಾಲರು (2.25 ಲಕ್ಷ ರೂ.) ಆಗುತ್ತದೆ. ಅದರ ವಿರುದ್ಧ ಪ್ರತಿಭಟನೆಗೆ ಸರ್ಕಾರ ಅನುಮತಿ ನೀಡಿತ್ತು. ಆದರೆ ಪ್ರತಿಭಟನಾಕಾರರನ್ನು ಬೆದರಿಸಲು ಪ್ರಮುಖ ವಿರೋಧ ಪಕ್ಷಗಳ ನಾಯಕರನ್ನು ಪೊಲೀಸ್ ಸ್ಟೇಶನುಗಳಿಗೆ ಕರೆಸಿ ವಿಚಾರಣೆ ಮಾಡಲಾಯಿತು. ಮನೆಗಳ ತಪಾಸಣೆ ಮಾಡಲಾಯಿತು. ಪುಟಿನ್ ಚುನಾವಣೆಯಲ್ಲಿ ಭಾರೀ ಅಕ್ರಮ ನಡೆದಿದೆ ಎಂದು ಪುಟಿನ್ ಅಧಿಕಾರ ವಹಿಸಿಕೊಳ್ಳುವ ಮೊದಲೇ ಭಾರೀ ಪ್ರತಿಭಟನೆಗಳು ನಡೆದಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಜನಶಕ್ತಿ
ಕನ್ನಡ ವಾರಪತ್ರಿಕೆ

ನಾನು ನನ್ನಮ್ಮ ಸೇರಿ ಡಿವೈಎಫ್‌ಐ ಸಮ್ಮೇಳನಕ್ಕೆ 5,000 ಸಾವಿರ ಕೊಡುತ್ತೀವಿ..... ಸಂಜನಾ



ಡಿವೈಎಫ್‌ಐ ಸಮ್ಮೇಳನಕ್ಕೆ ನಾನು ಮತ್ತು ನನ್ನಮ್ಮ ಸೇರಿ ರೂ. 5,000–00 ಕೊಡುತ್ತೀವಿ. ಜೊತೆಗೆ 30 ದಿನ ಸಂಜೆ ಎರಡು ಘಂಟೆಗಳ ಕಾಲ ಮನೆ ಮನೆ ಭೇಟಿ ನೀಡಲು ನಿಧಿ ಸಂಗ್ರಹಕ್ಕೆ ನಾವಿಬ್ಬರೂ ಬರುತ್ತೇವೆಂದು ಸಂಜನಾ ಹೇಳಿದ ಆ ಕ್ಷಣ ನೆರೆದಿದ್ದ ಎಲ್ಲರಲ್ಲೂ ಸಮ್ಮೇಳನದ ತಯಾರಿಗೆ ಇನ್ನಷ್ಟು ಉತ್ಸಾಹವನ್ನು ಹೆಚ್ಚಿಸಿತ್ತು. ಡಿವೈಎಫ್‌ಐ ಸಮ್ಮೇಳನದ ಯಶಸ್ಸಿಗೆ ಪೂರಕವಾಗಿ ಜುಲೈ 21 ರಂದು ಬೆ.ದಕ್ಷಿಣ ಜಿಲ್ಲಾ ವ್ಯಾಪ್ತಿಯ ಸ್ಥಳೀಯ ಸ್ವಾಗತ ಸಮಿತಿ ಆಯೋಜಿಸಿದ್ದ " ಸಾಮಾಜಿಕ ಹೊಣೆಗಾರಿಕೆ ಮತ್ತು ನಾವೂ" ಎಂಬ ವಿಷಯವನ್ನು ಆಧರಿಸಿ ಒಂದು ಚರ್ಚೆಯನ್ನು ಏರ್ಪಡಿಸಿದ್ದ ಸಂದರ್ಭದಲ್ಲಿ ಪ್ರಸ್ತುತ ಸಂದರ್ಭ ಮತ್ತು ನಮ್ಮ ಜವಾಬ್ದಾರಿ ಅರಿತ ಎಲ್ಲರೂ ಯುವಜನ ಸಮ್ಮೇಳನವನ್ನು ಯಶಸ್ವಿಮಾಡುವಲ್ಲಿ ತೊಡಗಿಸಿಕೊಳ್ಳಬೇಕೆಂಬ ಆಶಯದಲ್ಲಿ ಸಂಘಟಕರು ಸಭೆಯಲ್ಲಿ ಭಾಗವಹಿಸಿದ್ದವರನ್ನು ಮಾತಾಡಲು ಆಹ್ವಾನಿಸಿದ್ದರು. ಆಗ 8ನೇ ತರಗತಿ ಓದುತ್ತಿರುವ ಬಾಲಕಿ ಎದ್ದು ಬಂದು ನಾನು ಮತ್ತು ನಮ್ಮ ಅಮ್ಮ ಸೇರಿ ಸಮ್ಮೇಳನಕ್ಕೆ ರೂ. 5000–00 ಕೊಡುತ್ತೇವೆಂದ ಸಂದರ್ಭದಲ್ಲಿ ಎಲ್ಲರಲ್ಲಿ ರೋಮಾಂಚನವನ್ನುಂಟು ಮಾಡಿತ್ತು. ಯಾಕೆಂದರೆ ಸಂಜನಾ ಮತ್ತು ತಾಯಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ತಾಯಿಯದ್ದು ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸ. ಅವರದ್ದು ಒಂದು ಬಡ ಕುಟುಂಬ. ಸಂಜನಾ ತಾಯಿಯೇ ಎಲ್ಲವನ್ನೂ ನಿಭಾಯಿಸಿಕೊಂಡು ಹೋಗುತ್ತಿದ್ದಾರೆ. ಇಂತಹದ್ದರಲ್ಲಿ ಸಮ್ಮೇಳನಕ್ಕೆ ಉದಾರವಾಗಿ ನಿಧಿ ಕೊಡುವುದರ ಜೊತೆಗೆ ದುಡಿಯಲು ಒಪ್ಪಿಕೊಂಡಿದ್ದನ್ನು ನೋಡಿ ಇನ್ನಾದರೂ ಸಮ್ಮೇಳನದ ತಯಾರಿಗೆ ತೊಡಗಿಸಿಕೊಳ್ಳಬೇಕೆಂದು ನೆರೆದಿದ್ದವರಿಗೆಲ್ಲ ಅನ್ನಿಸತೊಡಗಿತ್ತು.

ಸಾಮಾಜಿಕ ಹೊಣೆಗಾರಿಕೆ ಎಂಬುದನ್ನೇ ಮರೆಸುವ ಸ್ವಾರ್ಥಪರ ಸಾಮಾಜಿಕ ವಾತಾವರಣ ಮತ್ತು ಸ್ವಜನ ಪಕ್ಷಪಾತ ಮತ್ತು ಮನುಷ್ಯ ವಿರೋಧಿ ಅಮಾನವೀಯ ಮೌಲ್ಯಗಳೇ ವಿಜೃಂಭಿಸುತ್ತಿರುವ ಸಂದರ್ಭದಲ್ಲಿ ನಾಗರೀಕರು ಎಚ್ಚೆತ್ತು ಜನಾಂದೋಲನಕ್ಕೆ ಮುಂದಾಗಬೇಕಾದ ಅಗತ್ಯವಿದೆ. ಆದ್ದರಿಂದ ಪ್ರಜಾಸತ್ತಾತ್ಮಕ ವೇದಿಕೆಯಡಿಯಲ್ಲಿ ಎಲ್ಲಾ ಕ್ಷೇತ್ರದ ಜನತೆ ಮುಂದೆ ಬಂದು ತನ್ನ ಸಮಾಜದಲ್ಲಿನ ಅನಾರೋಗ್ಯಕರ ಬೆಳವಣಿಗೆಗಳ ವಿರುದ್ಧ ಹಾಗೂ ಆಗುತ್ತಿರುವ ಅನಾಹುತಗಳ ವಿರುದ್ಧ ನಿಲ್ಲಬೇಕು. ಸಮಾನತೆ, ಘನತೆಯ ಬದುಕು ಎಂದರೆ ಕನಿಷ್ಠ ಜೀವನಕ್ಕೆ ಅಗತ್ಯವಾದ ಆಹಾರ ಭದ್ರತೆ, ವಸತಿ, ಆರೋಗ್ಯ ಮತ್ತು ಶಿಕ್ಷಣ ಹಾಗೂ ಆಗತ್ಯ ಮೂಲಭೂತ ಸೌಕರ್ಯಗಳು ಮಾನವ ಕುಲಕ್ಕೆ ಖಾತರಿಯಾಗುವುದು. ಇಂತಹ ಕನಿಷ್ಠ ಸೌಲಭ್ಯಗಳನ್ನು ಒದಗಿಸದ ವ್ಯವಸ್ಥೆ ಪ್ರಜಾಪ್ರಭುತ್ವದ ವ್ಯವಸ್ಥೆಯಾಗುವುದಿಲ್ಲ. ಪ್ರಜಾಪ್ರಭುತ್ವದ ಆಶಯಗಳು ಉಳಿಯುವುದಿಲ್ಲ. ಆದ್ದರಿಂದ ಸಂಘಟಿತ ಜನಾಂದೋಲನ ಅತ್ಯಗತ್ಯ. ಆಗ ಮಾತ್ರ ಜನ ಸಾಮಾನ್ಯರೂ ಸಹಜ ಸ್ಥಿತಿಯಲ್ಲಿ ಇರಲು ಸಾಧ್ಯ ಎಂಬುದನ್ನು ಚರ್ಚೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಮನವರಿಕೆಯಾಯಿತು. ಇಂತಹ ಪ್ರಜಾಸತ್ತಾತ್ಮಕ ಆಂದೋಲನಕ್ಕೆ ಮುನ್ನುಡಿ ನಮ್ಮ ಮುಂದಿರುವ ಯುವಜನ ಸಂಘಟನೆಯ "ಉತ್ತಮ ಭಾರತಕ್ಕಾಗಿ ಯುವಜನರ ಸಶಕ್ತೀಕರಣ" ಎಂಬ ಘೋಷಣೆಯೊಂದಿಗೆ ನಡೆಯುತ್ತಿರುವ ಡಿವೈಎಫ್‌ಐ 9ನೇ ಅಖಿಲ ಭಾರತ ಸಮ್ಮೇಳನ. ಈ ಸಮ್ಮೇಳನ ಸೆ.11 ರಿಂದ 15,2012 ರವರೆಗೆ ಬೆಂಗಳೂರಿನಲ್ಲಿ ನಡೆಯುತ್ತಿದ್ದು, ಇದನ್ನು ಯಶಸ್ವಿಗೊಳಿಸಲು ಎಲ್ಲರೂ ಶ್ರಮಿಸೋಣವೆಂಬ ಒಕ್ಕೊರಲಿನ ಧ್ವನಿ ಅಲ್ಲಿ ಒಡಮೂಡಿತ್ತು.

ಬಿ.ರಾಜಶೇಖರಮೂರ್ತಿ

ಉದಾರ ನಿಧಿಗೆ ಮನವಿ

ಆತ್ಮೀಯರೇ,

ಭಾರತ ದೇಶವನ್ನು ಇತ್ತೀಚಿನ ದಿನಗಳಲ್ಲಿ 'ಯುವ ಭಾರತ' ಎಂದು ಕರೆಯಲಾಗುತ್ತಿದೆ. ಇಂದು ಭಾರತದ ಜನಸಂಖ್ಯೆಯಲ್ಲಿ ಶೇ. 52.5 ರಷ್ಟು ಯುವಕ–ಯುವತಿಯರಿದ್ದಾರೆ. ಇಂತಹ ಯುವಜನರಲ್ಲಿ ಅದಮ್ಯ ಚೈತನ್ಯ, ಪ್ರತಿಭೆ, ಉತ್ಸಾಹಗಳು ತುಂಬಿವೆ. ಸಮಾಜದ ಅಭಿವೃದ್ಧಿಯಲ್ಲಿ ಹಾಗೂ ಪರಿವರ್ತನೆಯ ಪ್ರಕ್ರಿಯೆಯಲ್ಲಿ ಸಮರ್ಥವಾಗಿ ಯುವಜನ ತೊಡಗದೆ ಯಾವ ದೇಶವೂ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲ. ಆದರೆ ದೇಶದಲ್ಲಿಂದು ಕೋಟಿ–ಕೋಟಿ ಯುವ ಜನರು ನಿರುದ್ಯೋಗ –ಅರೆ ಉದ್ಯೋಗದ ಜ್ವಾಲೆಯಲ್ಲಿ ಬೇಯುತ್ತಿದ್ದಾರೆ. ತೀವ್ರತರ ನಿರುದ್ಯೋಗದಿಂದ ಯುವಜನತೆಯ ಬದುಕು ಚಿಂತಾಜನಕವಾಗಿದೆ.

ಇಂತಹ ಹಲವು ಪ್ರಶ್ನೆಗಳ ಹಿನ್ನೆಲೆಯಲ್ಲಿ ಯುವಜನ ಆಂದೋಲನವನ್ನು ಇನ್ನಷ್ಟು ಸದೃಢಗೊಳಿಸುವ ನಿಟ್ಟಿನಲ್ಲಿ ಚರ್ಚಿಸಿ, ಸೂಕ್ತ ಮಾರ್ಗೋಪಾಯಗಳನ್ನು ರೂಪಿಸಲು, ಡಿವೈಎಫ್‌ಐ 9ನೇ ಅಖಿಲ ಭಾರತ ಸಮ್ಮೇಳನವನ್ನು ಬೆಂಗಳೂರಿನಲ್ಲಿ 2012, ಸೆಪ್ಟೆಂಬರ್ 11 ರಿಂದ 15ರವರೆಗೆ ನಡೆಯಲಿದೆ. ವಿವಿಧ ದೇಶಗಳ ಸುಮಾರು 100ಕ್ಕೂ ಹೆಚ್ಚು ವಿದೇಶಿ ಪ್ರತಿನಿಧಿಗಳು ಪಾಲ್ಗೊಳ್ಳುವ ಈ ಸಮ್ಮೇಳನಕ್ಕೆ ಸುಮಾರು 75 ಲಕ್ಷ ರೂಪಾಯಿಗಳು ವೆಚ್ಚವಾಗಲಿದೆ ಎಂಬ ಅಂದಾಜಿದೆ. ಯುವಜನ ಚಳುವಳಿಯ ಹಿತೈಶಿಗಳು, ಉದಾರ ಧನ ಸಹಾಯ ಮಾಡಿ ಸಮ್ಮೇಳನದಯಶಸ್ಸಿಗೆ ಸಹಕರಿಸಬೇಕೆಂದು ವಿನಂತಿ. ಕೊಡುಗೆಯ ವಿವರಗಳನ್ನು ಜನಶಕ್ತಿ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ●

ಬೆಲೆಗಳ ಏರಿಕೆಯ........

ಪುಟ 13 ರಿಂದ

ಸ್ಥಾನ ಸಾಧಿಸಬೇಕಾದರೆ, ಉನ್ನತ ಶಿಕ್ಷಣಕ್ಕೆ ಸಾರ್ವಜನಿಕ ವೆಚ್ಚದಿಂದಷ್ಟೇ ಅದು ಸಾಧ್ಯವಾಗುವುದಿಲ್ಲ; ಶಿಕ್ಷಣ ವಲಯಕ್ಕೆ ಲಾಭಕ್ಕಲ್ಲದ ಖಾಸಗಿ ಭಾಗವಹಿಸುವಿಕೆಯ ಮೂಲಕ ಗಮನಾರ್ಹ ಪ್ರಮಾಣದ ನಿಧಿ ಹರಿದು ಬರಬೇಕಾಗುತ್ತದೆ'. ಆದ್ದರಿಂದ ಈ 'ಸಂಶೋಧನೆ ಮತ್ತು ನವೀನತೆಯ ವಿಶ್ವವಿದ್ಯಾಲಯಗಳು' ಸಂಪೂರ್ಣವಾಗಿ ಸಾರ್ವಜನಿಕ ನಿಧಿಯನ್ನು, ಅಥವ ಸಂಪೂರ್ಣವಾಗಿ ಖಾಸಗಿ ನಿಧಿಯನ್ನು, ಅಥವ ಸಾರ್ವಜನಿಕ–ಖಾಸಗಿ ಪಾಲುದಾರಿಕೆಯನ್ನು ಆಧರಿಸಿರಬಹುದು, ಆದರೆ ಸರಕಾರದ ಅಥವ ಸಮಾಜದ ಯಾವ ಹತೋಟಿಯೂ ಇದರ ಮೇಲೆ ಇರುವುದಿಲ್ಲ. ವಾಸ್ತವವಾಗಿ ಇದು ಕೇಂದ್ರ ಸರಕಾರದ ಖರ್ಚಿನಲ್ಲಿ ನಡೆಯುವ ಖಾಸಗಿ ವಿಶ್ವವಿದ್ಯಾಲಯಗಳು. ಸಂಶೋಧನೆ ಮತ್ತು ನವೀನತೆಯ ಹೆಸರಿನಲ್ಲಿ ಇವುಗಳ ಪ್ರಾಯೋಜಕರಿಗೆ ಸಂಪೂರ್ಣ ಸ್ವಾಯತ್ತತೆ ಇರುತ್ತದೆ, ಅರ್ಧದಷ್ಟು ಭಾರತೀಯ ವಿದ್ಯಾರ್ಥಿಗಳಿದ್ದರೆ ಸಾಕು(ವಿದೇಶಿ ವಿಶ್ವವಿದ್ಯಾಲಯ ಮಸೂದೆಯಲ್ಲಿ ವಿದೇಶಿ ವಿದ್ಯಾರ್ಥಿಗಳ ಪ್ರಮಾಣದ ಮೇಲೆ 15ಶೇ. ಮಿತಿಯಿತ್ತು ಎಂಬುದನ್ನು ಗಮನಿಸಿ), ಆದರೆ ಮೀಸಲಾತಿಯ 'ಸಂಕೋಲೆ'ಯಿಲ್ಲ, ಶುಲ್ಕಗಳ ಮೇಲೆ ಹತೋಟಿಯ ಪ್ರಶ್ನೆಯಿಲ್ಲ, ಕೇಂದ್ರ ಸರಕಾರದಿಂದ ಅನುದಾನಗಳನ್ನು ಪಡೆದರೂ ಸಿಎಜಿಯ ಲೆಕ್ಕ ಪರಿಶೋಧನೆಯ 'ಭಯ' ಬೇಕಿಲ್ಲ, ಸರಕಾರಕ್ಕಾಗಲೀ, ಸಂಸತ್ತಿಗಾಗಲೀ ತನ್ನ ಕೆಲಸಗಳ ವರದಿ ಒಪ್ಪಿಸಬೇಕಾಗಿಲ್ಲ. 'ಲಾಭಕ್ಕಲ್ಲದ ಸಂಸ್ಥೆಗಳು' ಎಂದು ಹೇಳಿದರೂ ತಮ್ಮ ಮೀಸಲು ನಿಧಿಗಳನ್ನು ಬೇರೆ ಉದ್ದೇಶಕ್ಕೆ ಬಳಸಬಾರದು ಎಂದಿದ್ದರೂ ವಿದೇಶಗಳಲ್ಲಿ ಕ್ಯಾಂಪಸ್‌ಗಳನ್ನು ತೆರೆಯಲು ಬಳಸಬಹುದು ಎಂದು ಅವಕಾಶ ಕೊಟ್ಟಿರುವಾಗ ಇವು ನಿಜವಾಗಿಯೂ 'ಲಾಭಕ್ಕಲ್ಲದ ಸಂಸ್ಥೆಗಳು' ಎನ್ನಬಹುದೇ ಎಂಬ ಪ್ರಶ್ನೆಯೂ ಏಳುತ್ತದೆ.

ವಾಸ್ತವವಾಗಿ, ವಿಶ್ವವಿದ್ಯಾಲಯಗಳು ಎಂದರೆ ಸಂಶೋಧನೆ ಮತ್ತು ನವೀನತೆಗಾಗಿಯೇ ಸ್ಥಾಪಿಸಲ್ಪಡುವ ವಿದ್ಯಾಸಂಸ್ಥೆಗಳು. ಅದಕ್ಕಾಗಿ ಪ್ರತ್ಯೇಕ ವಿಶ್ವವಿದ್ಯಾಲಯಗಳ ಹೆಸರಿನಲ್ಲಿ ಸ್ಥಾಪಿಸುವ ಈ ವಿದ್ಯಾಸಂಸ್ಥೆಗಳು ಭಾರತೀಯರ ತೆರಿಗೆ ಹಣವನ್ನು ಬಳಸಿಕೊಳ್ಳುತ್ತವೆ, ಆದರೆ ಭಾರತೀಯ ಜನತೆಗೆ ಇದರಿಂದ ಏನೂ ಪ್ರಯೋಜನವಾಗದು ಎಂಬುದು ಶಿಕ್ಷಣ ಕ್ಷೇತ್ರದ ಪರಿಣಿತರ ಅಭಿಪ್ರಾಯ.

ಕ್ಯಾಪ್ಟನ್ ಲಕ್ಷ್ಮಿ ಎಂಬ..........

ಪುಟ 16 ರಿಂದ

ಸರ್ಕಾರ ವಿಶ್ವ ಸುಂದರಿ ಸ್ಪರ್ಧೆಯನ್ನು ಪ್ರಾಯೋಜಿಸಲು ಹೊರಟಾಗ ಅದನ್ನು ವಿರೋಧಿಸಿ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ನಡೆದ ಪ್ರತಿಭಟನೆಯ ಉದ್ಘಾಟನೆಯನ್ನು ಈ ಕ್ಯಾಪ್ಟನ್ ಮಾಡಿದ್ದರು. 2002ರಲ್ಲಿ ಕೋಮುವಾದಿ ಅಜೆಂಡಾದ ಎನ್.ಡಿ.ಎ. ಸರ್ಕಾರದ ರಾಷ್ಟ್ರಾಧ್ಯಕ್ಷ ಅಭ್ಯರ್ಥಿಯ ವಿರುದ್ಧ ಎಡಪಕ್ಷಗಳ ಅಭ್ಯರ್ಥಿಯಾಗಿ ಕಣಕ್ಕಿಳಿದ ಲಕ್ಷ್ಮಿ ಮತಯಾಚನೆಗಾಗಿ ದೇಶದಾದ್ಯಂತ ಸಂಚರಿಸಿ ಜನರ ಮುಂದೆ ಅವರ ನೈಜ ಸಮಸ್ಯೆಗಳನ್ನು ಬಿಚ್ಚಿಡಲು ಆ ವೇದಿಕೆಗಳನ್ನು ಬಳಸಿಕೊಂಡರು. ಜಾತ್ಯಾತೀತತೆಯ ಬಗ್ಗೆ ಕೇವಲ ಬಾಹ್ಯೋಪಚಾರದ ಮಾತುಗಳನ್ನಾಡುವ ಕಾಂಗ್ರೆಸ್ ಎನ್.ಡಿ.ಎ. ಅಭ್ಯರ್ಥಿಗೆ ಬೆಂಬಲ ಸೂಚಿಸಿತ್ತು. ಹಾಗಾಗಿ ಗೆಲ್ಲುವ ಸಾಧ್ಯತೆಗಳೇ ಇಲ್ಲವೆಂದು ಗೊತ್ತಿದ್ದರೂ ತಮ್ಮ ಕರ್ತವ್ಯವೆಂದು ಇಡೀ ದೇಶವನ್ನು ಸಂಚರಿಸಿದ ಕ್ಯಾಪ್ಟನ್‌ಗೆ ಎಲ್ಲೆಡೆಯೂ ನಾಗರೀಕರಿಂದ ಭವ್ಯ ಸ್ವಾಗತ ದೊರೆತಿತ್ತು.

2010 ರಲ್ಲಿ ಕಾನ್ಪುರದಲ್ಲಿ ನಡೆದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿದ ಲಕ್ಷ್ಮಿ ದೇಶದ ಮೂಲೆ ಮೂಲೆಯಿಂದ ಬಂದ ಸಾವಿರಾರು ಕಾರ್ಯಕರ್ತರಿಗೆ ಅಸಮಾನತೆಯನ್ನು ತೊಡೆದು ಹಾಕುವ ವರೆಗೂ ವಿಶ್ರಮಿಸದಂತೆ ಕರೆ ನೀಡಿದ್ದರು. ಅಂತೆಯೆ ತಾನು ಚಿರ ನಿದ್ರೆಗೆ ಜಾರುವ ವರೆಗೂ ನುಡಿದಂತೆ ನಡೆದ ಕ್ಯಾಪ್ಟನ್, ಲಾಲ್ ಸಲಾಂ ಲಾಲ್ ಸಲಾಮ್.

ಸೆಳೆದೆ ಎಲ್ಲರನ್ನು ಅಯಸ್ಕಾಂತದಂತೆ
ಕಳೆದೆ ಇಡೀ ಜೀವನವನ್ನು ಮುಪ್ಪಡರದಂತೆ.
ಬೆಳೆದೆ ಎತ್ತರೆತ್ತರಕೆ ತುದಿ ಕಾಣದಂತೆ.
ಉಳಿದೆ ಎಲ್ಲರ ಹೃದಯದಲ್ಲಿ
ತಂಪುಗಾಳಿಯಂತೆ.
ಕ್ಯಾಪ್ಟನ್ ನಿನಗಿದೋ ಕೆಂಪು ವಂದನೆ
ಕೆಂಪು ವಂದನೆ ●

JANASHAKTHI KANNADA VARA PATRIKE AUG 05, 2012 Price : Rs. 5/- RNI No. KARKAN
Postal Reg. No. RNP/KA/BGS/2078/2010-12 Posted at MBC Bangalore GPO

ಕ್ಯಾಪ್ಟನ್ ಲಕ್ಷ್ಮಿ ಎಂಬ ಅಂತಃಸ್ಫೂರ್ತಿ

ಜುಲೈ 23, 2012 ರಂದು ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್ ನಮ್ಮನ್ನು ಅಗಲಿದರು. ಅವರ ಬಯಕೆಯಂತೆ ಅವರ ದೇಹವನ್ನು ಕಾನ್ಪುರದ ಗಣೇಶ ಶಂಕರ ವಿದ್ಯಾರ್ಥಿ ಸ್ಮಾರಕ ವೈದ್ಯಕೀಯ ಕಾಲೇಜಿಗೆ ವೈದ್ಯಕೀಯ ಸಂಶೋಧನೆಗಾಗಿ ನೀಡಲಾಗಿದೆ. ಅವರ ರೋಮಾಂಚನಕಾರಿ–ಸಾರ್ಥಕ ಬದುಕಿನ ಕುರಿತು ಒಂದು ಆತ್ಮೀಯ ಬರಹ.

ಕೆ. ಎಸ್. ವಿಮಲ

ಅದು 1989 –90 ರ ಹೊತ್ತು. ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಕರ್ನಾಟಕ ಎಂಬ ಹೆಸರು ಉಚ್ಚಾರಣೆಗೆ ಕಷ್ಟವೆಂಬ ಕಾರಣದಿಂದ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಾಮಾನ್ಯವಾಗಿ ಕರೆಯಲ್ಪಡುತ್ತಿದ್ದ, ಹಾಗೂ ಆಂಗ್ಲಭಾಷೆಯ ಸಹಜ ಕನ್ನಡ ತರ್ಜಮೆಯೂ ಆಗಬಹುದಾದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಎಂದು ಕರ್ನಾಟಕದಲ್ಲಿ



ಪುನರ್ ನಾಮಕರಣಗೊಳ್ಳುತ್ತಿದ್ದ ಸಂದರ್ಭ. ಆಗ ತಾನೇ ಜನವಾದಿಯ ಜವಾಬ್ದಾರಿ ಹೆಗಲಿಗೇರಿತ್ತು. ಇದ್ದಕ್ಕಿದ್ದಂತೆ ಹರಿಣಿ ದೂರವಾಣಿಯ ಮೂಲಕ ಸಂಪರ್ಕಿಸಿ ಜನವಾದಿಯ ಕೇಂದ್ರ ಕಾರ್ಯಕಾರಿ ಸಮಿತಿ ಸಭೆ ವಿಜಯವಾಡದಲ್ಲಿ ನಡೆಯಲಿದೆ ಕರ್ನಾಟಕವನ್ನು ಪ್ರತಿನಿಧಿಸಿ ನಾನು ಹೋಗಬೇಕೆಂದು ತಿಳಿಸಿದಾಗ ಸ್ವಲ್ಪ ಅಧೀರಳಾಗಿದ್ದಂತೂ ನಿಜ. ಯಾರದೂ ಪರಿಚಯವಿಲ್ಲ. ಭಾಷೆಯ ಸಮಸ್ಯೆಯೂ ಇದೆ. ಹೇಗೆ ನಿಭಾಯಿಸುವುದು. ಮತ್ತೆ ಅಲ್ಲಿ ಹೋಗಿ ನಾನು ಏನು ಮಾಡಬಹುದು ಎಂಬ ಪ್ರಶ್ನೆ ಕಾಡಿತ್ತು. ಆದರೆ ಸ್ವಭಾವತಃ ಇದ್ದ ನುಗ್ಗುವ ಸ್ವಭಾವದಿಂದಾಗಿ ಇರಲಿ ಹೋಗಿಯೇ ನೋಡುವುದು ಎಂದುಕೊಂಡು ಹೊರಟೇ ಬಿಟ್ಟೆ. ಆಗೇನು ಈಗಿನಂತೆ ಹಣಕಾಸು ಬೇಕೆಂದರೆ ಸಿಕ್ಕಿ ಬಿಡುತ್ತಿತ್ತೇ? ಅಥವಾ ಬೇಕಾದಷ್ಟು ಪ್ರಯಾಣಕ್ಕೆ ಸುಖಕರ ವ್ಯವಸ್ಥೆಗಳಿದ್ದವೇ? ಏನೂ ಇರಲಿಲ್ಲ. ಕೆಂಪು ಬಸ್ಸಿಗೆ ಹೋಗಲು ಹಣವಿದ್ದಿದ್ದರೆ ಅದೇ ದೊಡ್ಡ ಭಾಗ್ಯ. ಅಂತೂ ಇಂತು ಕಷ್ಟ ಪಟ್ಟು ವಿಜಯವಾಡ ತಲುಪಿದಾಗ ಸಭೆಯ ದಿನದ ಮಧ್ಯಾಹ್ನ ದಾಟಿತ್ತು. ಕಾಂ. ಮಾಷ್ತ್ರ ಕೊಟ್ಟ ವಿಳಾಸ ಹುಡುಕಿ ಹೋದರೆ ಅಲ್ಲಿದ್ದವರಿಗೆ ತೆಲುಗು ಬಿಟ್ಟು ಬೇರೆ ಭಾಷೆಯೆ ಬರದು. ಹಾಗು ಹೀಗೂ ಮೂಕಾಭಿನಯದೊಂದಿಗೆ ನನ್ನ ಬಗ್ಗೆ ನಾನು ಬಂದ ಕಾರಣವನ್ನು ಬಹಳ ಪ್ರಯಾಸದಿಂದ ತಿಳಿಸಿ ಅವರಿಂದ ನಾನು ಹೋಗಬೇಕಾದ ಸಭೆಯ ವಿಳಾಸ ಪಡೆದು ತಲುಪಿದ್ದಾಯಿತು. ನನಗೋ ಅಲ್ಲಿ ಯಾರದೂ ಪರಿಚಯವಿರಲಿಲ್ಲ. ಕರ್ನಾಟಕದಿಂದ ಬಂದಿದ್ದೇನೆಂಬ ಗುರುತಿಗೆ ಕೊಟ್ಟ ಪತ್ರವನ್ನು ನಾನು ಒಯ್ದು ಅಲ್ಲಿದ್ದವರ ಕೈಗೆ ತಲುಪಿಸಿ ನಿಂತ ಕೆಲವೇ ಕ್ಷಣಗಳಲ್ಲಿ ನನ್ನನ್ನು ಪ್ರೀತಿಯಿಂದ ಮಾತನಾಡಿಸಿ ಎಷ್ಟೋ ವರ್ಷಗಳಿಂದ ಪರಿಚಿತಳೆಂಬಂತೆ ತಬ್ಬಿಕೊಂಡಿತು ಜನವಾದಿ. ಕರೆದು ಕೂರಿಸಿದ ಕ್ಷಣ ನೋಡಿದರೆ ವೇದಿಕೆಯಲ್ಲಿ ಕ್ಯಾಪ್ಟನ್ ಲಕ್ಷ್ಮಿ. ಒಮ್ಮೆಗೆ ಎದೆ ಬಡಿತ ಎಷ್ಟು ಜೋರಾಯಿತೆಂದರೆ ಅದನ್ನು ಈಗಲೂ ನಾನು ಅನುಭವಿಸುತ್ತೇನೆ. ಪಾಠದಲ್ಲಿ ಐ.ಎನ್.ಎ. ಅದರ ಮಹಿಳಾ ರೆಜಿಮೆಂಟ್, ಅದರ ಹೆಸರು ರಾಣಿ ಝಾನ್ಸಿ ರೆಜಿಮೆಂಟ್ ಅದರ ಕ್ಯಾಪ್ಟನ್ ಹೆಸರು ಲಕ್ಷ್ಮಿ ಇವನ್ನೆಲ್ಲ ಓದುವಾಗ ನಾನು ಎಂದಾದರೂ ಅವರನ್ನು ನೇರವಾಗಿ ನೋಡುತ್ತೇನೆ. ಅವರ ಬಳಿ ಮಾತನಾಡಿ, ಪ್ರೀತಿಯಿಂದ ಅವರು ನನ್ನನ್ನು ತಮ್ಮ ಮಗಳಂತೆ, ಗೆಳತಿಯಂತೆ ತಲೆ ಸವರಿ ಮಾತನಾಡಿಸುತ್ತಾರೆ ಎಂಬ ಕಲ್ಪನೆ ಕೂಡ ಮಾಡಿರಲಿಲ್ಲ. ಎತ್ತಣ ಮಾಮರ ಎತ್ತಣ



ಕೋಗಿಲೆ

ಕ್ಯಾಪ್ಟನ್ ಎಂದರೆ ಗತ್ತು, ಗಡಸು, ಕಠೋರ ಇತ್ಯಾದಿ ಕಲ್ಪನೆಗಳು ಸಹಜವಾಗಿಯೇ ಇರುತ್ತವೆ. ಯಾಕೆಂದರೆ ಮಿಲಿಟರಿ ಎಂದ ಮೇಲೆ ಅವರು ಹಾಗೆಯೆ ಇರಬೇಕೆಂಬ ತಪ್ಪು ಅಭಿಪ್ರಾಯವನ್ನು ಮೂಡಿಸಲಾಗಿರುತ್ತದೆ. ಆದರೆ ಅಲ್ಲಿ ಕುಳಿತಿದ್ದ ಕ್ಯಾಪ್ಟನ್ ಆಗಲೇ 70ರ ಹರೆಯದಲ್ಲಿದ್ದರೂ ಅದೆಂತಹ ಕಾಂತಿಯುತವಾದ, ನುಣುಪಾದ ಹೊಳೆಯುವ ಕೆನ್ನೆಗಳನ್ನು ಹೊಂದಿದ, ಸೂಜಿಗಲ್ಲಿನಂತೆ ಆಕರ್ಷಿಸುವ ಕಣ್ಣುಗಳ, ಮಮತೆ ವಾತ್ಸಲ್ಯವೇ ಮೂರ್ತಿವೆತ್ತಂತಿರುವ, ಹಸುಗೂಸಿನಂತೆ ಮುಗ್ಧಭಾವದ ಆದರೆ ಅಷ್ಟೇ ಧೃಢತೆಯನ್ನು ಹೊಂದಿರುವ ವ್ಯಕ್ತಿತ್ವದ ಮೂರ್ತಿಯಾಗಿದ್ದರು. ಆ ವಾತ್ಸಲ್ಯದ ಮೂರ್ತಿ 97ರ ವಯಸ್ಸಿನಲ್ಲಿಯೂ ಹಾಗೆಯೇ ಇದ್ದರು.

1914ರಲ್ಲಿ ಹುಟ್ಟಿ 1938ರಲ್ಲಿ ವೈದ್ಯಕೀಯ ವಿದ್ಯಾಭ್ಯಾಸ ಮುಗಿಸಿದ ಈ ಅದಮ್ಯ ಚೇತನ ತನ್ನನ್ನು ತೊಡಗಿಸಿಕೊಂಡಿದ್ದು ಜನಸೇವೆಯಲ್ಲಿ. ಸಮಾಜಮುಖಿ ಆಲೋಚನೆಗಳು ಹುಟ್ಟಿನಿಂದಲೇ ಮೈಗೂಡಿತ್ತು. ಯಾಕೆಂದರೆ ಕ್ಯಾಪ್ಟನ್‌ರ ತಾಯಿ ಅಮ್ಮುಕುಟ್ಟಿ ಒಬ್ಬ ಸಾಮಾಜಿಕ ಕಾರ್ಯಕರ್ತೆಯಾಗಿದ್ದರು. ಅಸ್ಪೃಶ್ಯತೆಯ ಆಚರಣೆಯ ವಿರುದ್ಧದ ಅಸಹನೆ ಅವರ ರಕ್ತದಲ್ಲಿಯೇ ಹರಿದು ಬಂದಿತ್ತು. ವೈದ್ಯಕೀಯ ವಿದ್ಯಾಭ್ಯಾಸ ಮುಗಿಸಿದ ಲಕ್ಷ್ಮಿ ಜನಸೇವೆಗಾಗಿ ಸಿಂಗಪುರಕ್ಕೆ ತೆರಳಿದರು. ಅಲ್ಲಿ ಅವರು ನೇತಾಜಿ ಸುಭಾಷ್ಚಂದ್ರ ಬೋಸರನ್ನು ಭೇಟಿ ಮಾಡುತ್ತಾರೆ. ನಂತರ ಅವರು ರಚಿಸಿದ ರಾಣೀ ಝಾನ್ಸಿ ಮಹಿಳಾ ರೆಜಿಮೆಂಟಿನ ಕ್ಯಾಪ್ಟನ್ ಆಗಿ ಕೆಲಸ ನಿರ್ವಹಿಸುತ್ತಾರೆ. ಸ್ಟೆತಾಸ್ಕೋಪ್ ಹಿಡಿದ ಕೈ ಸಮರಕ್ಕೂ ಸೈ! ಕಾಡುಮೇಡುಗಳಲ್ಲಿ ಸುತ್ತಿದ ರೆಜಿಮೆಂಟ್, ಬಾಂಬ್ ಧಾಳಿಯನ್ನೂ ಎದುರಿಸಿತ್ತು. ಇಂಫಾಲ ತಲುಪುವ ಮುನ್ನ ಎಂದರೆ 1945ರ ಮಾರ್ಚಿಯಲ್ಲಿ ಸೈನ್ಯ ಹಿಂದೆ ಸರಿಯಬೇಕೆನ್ನುವ ತೀರ್ಮಾನವಾಯಿತು.

1945ರ ಮೇ ತಿಂಗಳಿನಲ್ಲಿ ಕ್ಯಾಪ್ಟನ್ ಬರ್ಮಾದ ಕಾಡುಮೇಡುಗಳಲ್ಲಿದ್ದರು. ಅಲ್ಲಿಯೇ ಅವರ ಬಂಧನವಾಗಿ ರಂಗೂನಿನಲ್ಲಿ ಗೃಹ ಬಂಧನದಲ್ಲಿದ್ದರು. ಆಗಲೂ ಕೂಡ ಲಕ್ಷ್ಮಿ ತಮ್ಮ ವೈದ್ಯ ಸೇವೆಯನ್ನು ಮುಂದುವರೆಸಿದ ಕಾರಣದಿಂದ ಹಲವು ಭಾರತೀಯರು ಸಂಪರ್ಕಕ್ಕೆ ಬಂದರು. ಎಷ್ಟೋ ಮಾ ಐ.ಎನ್.ಎ. ಗಳೂ ಅವರ

ಭೇಟಿಗೆ ಬರುತ್ತಿದ್ದರು. ಹಾಗೊಮ್ಮೆ ಸ ನಡೆದಾಗ ಅಲ್ಲಿ ಭಾರತೀಯ ಪತ್ರಕರ್ತರ ಇದ್ದು ಇವರ ವಿಚಾರಗಳನ್ನು ಭಾರತೀಯ ಪತ್ರಿಕೆಗಳಿಗೆ ರವಾನಿಸಿದರು. ಅಲ್ಲಿ ಆ ಸು ಪ್ರಕಟವಾಗುತ್ತಿದ್ದಂತೆ ಭಯಪಟ್ಟ ಬ್ರಿಟೀ ಸರ್ಕಾರ ಅವರನ್ನು ಬರ್ಮಾದ ಬೆಟ್ಟ ಪ್ರದೇ ಸ್ಥಳಾಂತರಿಸಿತ್ತು. ಅಲ್ಲಿಯೂ ಗೃ ಬಂಧನದಲ್ಲಿಡಲಾಗಿತ್ತು. ಅಕ್ಟೋಬರ್ 19 ರಿಂದ ಮಾರ್ಚ್ 1946 ರ ವರೆಗೆ ಅಲ್ಲಿ ಲಕ್ಷ್ಮಿ ಗೆ ಆ ನಂತರ ಭಾರತಕ್ಕೆ ಬರ ಅವಕಾಶ ಕಲ್ಪಿಸಲಾಯಿತು.

1947ರಲ್ಲಿ ಅವರು ಕರ್ನಲ್ ಪ್ರೇಮ ಕುಮಾರ ಸೆಹಗಾಲ್‌ರನ್ನು ಮದುವೆಯಾದ ಕಾನ್ಪುರದಲ್ಲಿ ನೆಲೆಸಿದರು. ಆ ನಂತರ ಕೂ ಅವರೇನೂ ಸುಖವಾದ ಗೃಹಸ್ಥಾಶ್ರಮಕ್ಕೇನ ಮನಸೋಲಲಿಲ್ಲ. ಕಾನ್ಪುರದ ಕೇಂದ್ರ ಭಾಗದ ಕ್ಲಿನಿಕ್ ತೆರೆದು ಬಡ ಬಗ್ಗರಿಗೆ "ಮಮ್ಮಿ"ಯಾ ಹೃದಯಾಘಾತಕ್ಕೊಳಗಾಗಿ ಕೊನೆಯು ರೆಳೆಯುವ ದಿನದವರೆಗೂ ಸೇ ನೀಡುತ್ತಿದ್ದರು.

1971 ರಲ್ಲಿ ಜ್ಯೋತಿ ಬಸು ಅವರು ಕ ಕರೆಯ ಮೇರೆಗೆ ಬಾಂಗ್ಲಾ ದೇಶದಿ ಸಾಗರದೋಪಾದಿಯಲ್ಲಿ ಬರುತ್ತಿ ನಿರಾಶ್ರಿತರಿಗೆ ಉಪಚರಿಸಲು ಅವ ಕೋಲ್ಕತ್ತಾಕ್ಕೆ ತೆರಳಿದರು. ಆ ನಂತರ ಅವ ಸಿಪಿಐ(ಎಂ) ಪಕ್ಷಕ್ಕೆ ಸೇರಿದರು. ಕೊನೆ ವರೆಗೂ ಪಕ್ಷದ ನಿಷ್ಠಾವಂತ ಸೇನಾನಿಯ ನಾಯಕಿಯಾಗಿ ಇದ್ದರು.

ಜನವಾದಿ ಮಹಿಳಾ ಸಂಘಟನೆ ಸಂಸ್ಥಾಪಕ ಮುಖಂಡರಲ್ಲೊಬ್ಬರಾದ ಲ ಸೆಹಗಲ್ ಇಡೀ ದೇಶದ ಕ್ಯಾಪ್ಟನ್, ಎಲ್ಲರ ಕ್ಯಾಪ್ಟನ್.

1996ರಲ್ಲಿ ಕರ್ನಾಟಕದ ಜೆ.ಎಚ್. ಪಟೇ

ಪುಟ 15

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH